12--30 ಪಿ. ಎಂ.

ಶ್ರೀ ವಾಟಾಳ್ ನಾಗರಾಜ್ :– ಅಧ್ಯಕ್ಷರ ವೇದಿಕೆ ಅಗಲವಾಗಿರಬೇಕು. ಅದರ ಬಗ್ಗೆ ಬದಲಾವಣೆ ಆಗುವುದು ಬೇಡ.

ಅಧ್ಯಕ್ಷರು :– ಸೂಕ್ತವಾದಂಥ ಸುಧಾರಣೆಗಳನ್ನು ಜಾರಿಗೆ ತರುವುದಕ್ಕೆ ಪ್ರಯತ್ನವನ್ನು ಮಾಡೋಣ.

ಶ್ರೀ ವಾಟಾಳ್ ನಾಗರಾಜ್ :– ನಮಗೆ ಜಿಲ್ಲಾಪರಿಷತ್ ಮತ್ತು ಮಂಡಲ್ ಪಂಚಾಯಿತಿ ತಿದ್ದುಪಡಿ (ವಿಧೇಯಕದ) ಕನ್ನಡ ಪ್ರತಿ ಬಂದಿದೆ. ಇದಕ್ಕೆ ಮಾನ್ಯ ಸರ್ಕಾರಕ್ಕೂ, ಮಾನ್ಯ ಸಚಿವರಿಗೂ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಕನ್ನಡವೇ ಬೇಕು ಎಂದು ಹೇಳಿ ಒತ್ತಡ ಮಾಡಿ, ಒತ್ತಡ ಮಾಡಿ ಅದು ಮುದ್ರಣವಾಗಿ ಬಂದಿರುವುದಕ್ಕೋಸ್ಕರ ಅವರಿಗೆ ಅಧ್ಯಕ್ಷರ ಮೂಲಕ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಮತ್ತು ಅಧ್ಯಕ್ಷರಿಗೂ ಕೂಡಾ ಪ್ರೀತಿ ವಿಶ್ವಾಸದಿಂದ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಕನ್ನಡದ ಪ್ರತಿ ಬಂದಿದೆ. ಅದರ ಪದದ ಬಗ್ಗೆ ನಾನು ಪ್ರಶ್ನೆ ಮಾಡುವುದಕ್ಕೆ ಹೋಗುವುದಿಲ್ಲ.

ಶ್ರೀ ಬಿ. ಎಸ್. ಯಡಿಯೂರಪ್ಪ :– ಈಗ ಮಾನ್ಯ ಬಸವಲಿಂಗಪ್ಪನವರು ಸ್ವಲ್ಪ ಹೆಚ್ಚು ಕಡಿಮೆ ಮಾತನಾಡಿದರೂ ಅಡ್ಜಸ್ಟ್ ಮಾಡಿಕೊಳ್ಳುತ್ತಾರೆ.

ಶ್ರೀ ವಾಟಾಳ್ ನಾಗರಾಜ್ :– ಅದೇನೆ ಇರಲಿ, ಬಸವಲಿಂಗಪ್ಪನವರಿಗೂ ಮತ್ತು ಮಾನ್ಯ ಅಧ್ಯಕ್ಷರಿಗೂ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಶ್ರೀ ಬಿ. ಎಂ. ಇದಿನಬ್ಬ :– ಮಾನ್ಯ ಅಧ್ಯಕ್ಷರು ನಮ್ಮ ಶಾಸಕರ ಭವನದ ಬಗ್ಗೆಯೂ ಸ್ವಲ್ಪ ಗಮನವನ್ನು ಹರಿಸಬೇಕು. ನಮಗೆ ಅಲ್ಲಿ ಒಂದು ವಾಹನಗಳು ಸರಿಯಾಗಿ ಸಿಕ್ಕುವುದಿಲ್ಲ. ಊಟ ತಿಂಡಿಗಳು ಕೂಡಾ ಸರಿಯಾಗಿ ಸಿಕ್ಕುವುದಿಲ್ಲ. ಅದರ ಕಡೆಗೂ ತಾವು ಗಮನವನ್ನು ಕೊಟ್ಟರೆ ನಮಗೂ ತುಂಬಾ ಉಪಕಾರವಾಗುತ್ತದೆ.

ಶಾಸನ ರಚನೆ ಕಾರ್ಯಕಲಾಪಗಳು

ವಿಧೇಯಕವನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು.

1990 ನೇ ಇಸವಿಯ ಕರ್ನಾಟಕ ಜಿಲ್ಲಾ ಪರಿಷತ್ ತಾಲ್ಲೂಕ್ ಪಂಚಾಯತ್ ಸಮಿತಿಗಳು, ಮಂಡಲ್ ಪಂಚಾಯಿತಿ, ನ್ಯಾಯ ಪಂಚಾಯಿತಿ ಹಾಗೂ ಇತರ ಕೆಲವು ಕಾನೂನು (ತಿದ್ದುಪಡಿ) ವಿಧೇಯಕ.

† ಶ್ರೀ ಬಿ. ಬಸವಲಿಂಗಪ್ಪ :– ಮಾನ್ಯ ಅಧ್ಯಕ್ಷರೇ, ನಾನು ನಿನ್ನೆ ಎಲ್ಲಿಂದ ವಿಶ್ಲೇಷಣೆ ಮಾಡುತ್ತಿದ್ದೆ, ಈಗ ಅಲ್ಲಿಂದ ಪ್ರಾರಂಭ ಮಾಡುತ್ತೇನೆ. ನಿನ್ನೆ ಹೇಳುವಾಗ ನಮ್ಮ ಸಮಾಜದಲ್ಲಿರತಕ್ಕಂಥ ಒಂದು ನೀಲಿ ನಕ್ಷೆಯ ಹಿನ್ನೆಲೆಯಲ್ಲಿ ನಾವು ಯಾವ ಕಾರ್ಯವನ್ನೇ ಆಗಲಿ ಮಾಡಲಿಕ್ಕೆ ಪ್ರಯತ್ನವನ್ನು ಮಾಡಬೇಕು. ನಮ್ಮ ಸಮಾಜದಲ್ಲಿ ನೀಲಿ ನಕ್ಷೆ ಹೇಗೆ ಇದೆ ಅಂದರೆ ಇದರಲ್ಲಿ ಎಲ್ಲಾ ಜಾತಿಗಳು ಇವೆ, ಧರ್ಮಗಳೂ ಇವೆ. ಮತ್ತೆ ಪಂಗಡ ಪಂಗಡಗಳು ಇವೆ. ಅದೇ ರೀತಿಯಾಗಿ ನಾವುಗಳು ಮಾಡಿಕೊಂಡು ಬಂದಿದ್ದೇವೆ. ಅದಕ್ಕನುಗುಣವಾಗಿ ನಾವು ಇವತ್ತಲ್ಲ ನಾಳೆ, ನಾಳೆಯಲ್ಲಾ ನಾಡಿದ್ದು, ಇದಕ್ಕೆ ಪರಿಹಾರವನ್ನು ಕಂಡು ಹಿಡಿದು ಈ ಪ್ರಜಾಪ್ರಭುತ್ವದಲ್ಲಿ ನಾವು ಎಲ್ಲರೂ ಸಮಾನರು ಎಂದು ಹೇಳಿ ಒಂದು ವಾದದ ಅಡಿಯಮೇಲೆ ಏನು ಈ ಪ್ರಜಾಪ್ರಭುತ್ವವನ್ನು ನಡೆಸಿಕೊಂಡು ಬರುತ್ತಿದ್ದೇವೆ. ಅದಕ್ಕೆ ಇದು ಪ್ರಯೋಜನವಾಗಲಿ ಎಂದು ಹೇಳಿ ನನ್ನದಾದರೂ ಒತ್ತಾಸೆ. ಕೆಲವರು ಜಾತಿಗಳು ಇಲ್ಲ ಎಂದು ಬೂಟಾಟಿಕೆಯ ಮಾತನಾಡುತ್ತಾರೆ. ಜಾತಿಗಳು ಇಲ್ಲ ಎಂದು ಹೇಳುತ್ತಾರೆ. ಜಾತಿಗಳನ್ನು ನಮ್ಮ ಜನ ಜೀವನದಲ್ಲಿ ಅಡಕ ಮಾಡಿಕೊಂಡಿದ್ದೇವೆ——————ಇದರ ಬಗ್ಗೆ ಒಂದು ವಿಷಯ ಜ್ಞಾಪಕಕ್ಕೆ ಬರುತ್ತದೆ. ಶ್ರೀಮಾನ್ ದಾತಾರ್‌ರವರು ಕೇಂದ್ರದಲ್ಲಿ ಹೋಂ ಮಿನಿಸ್ಟರ್ ಆಗಿದ್ದರು. ನಾವು ಅವರನ್ನು ಕ್ಯಾಬಿನೆಟ್ ಮೀಟಿಂಗ್ ಆಗುವಾಗ ಶ್ರೀಮಾನ್ ಜತ್ತಿಯವರು ಇದ್ದಾಗ ಅವರನ್ನು ಕರೆಯಿಸಿದ್ದೆವು. ನಾನೂ ಒಬ್ಬ ಸದಸ್ಯನಾಗಿದ್ದೆ. ಅಲ್ಲಿ ಅವರು ಒಂದು ಮಾತನ್ನು ಹೇಳಿದ್ದರು. You must practice caste inside but yon should not exhibit outside. ಎನ್ನುವ ಒಂದು ಮಾತನ್ನು ಹೇಳಿದ್ದರು. ಇದರ ಅರ್ಥ ಏನೆಂದರೆ ಜಾತಿಗಳು ಬೇಕೆಬೇಕು, ವ್ಯವಹಾರಕ್ಕೂ ಬೇಕು, ನಡೆಗೂ ಬೇಕು, ನುಡಿಗೂ ಬೇಕು, ಎಲ್ಲಾ ಸಂಪರ್ಕಕ್ಕೂ ಬೇಕು. ಆದರೆ ನಾವು ಪ್ರಜಾಪ್ರಭುತ್ವವನ್ನು ಈ ದೇಶದಲ್ಲಿ ಏನು ಅಳವಡಿಸಿಕೊಂಡಿದ್ದೇವೆ; ಅದರ ಪ್ರಕಾರ ನಾವೆಲ್ಲಾ ಸೇರಿ ಸಮಾನರಾಗಿರತಕ್ಕಂಥ ಮನುಷ್ಯರನ್ನು ನಾವು ಸೃಷ್ಟಿ

ಮಾಡಬೇಕಾಗುತ್ತದೆ. ನಾವು ಇವತ್ತಿನ ದಿವಸ ಅಸಮಾನತೆ ಇರತಕ್ಕಂಥ ಸಮಾಜದಲ್ಲಿ ಪ್ರಜಾಪ್ರಭುತ್ವವನ್ನು ಹಂಚಲಿಕ್ಕೆ ಹೋಗಿದ್ದೇವೆ. ಎಷ್ಟು ಮಾತ್ರ ಅದರಿಂದ ಪ್ರಯೋಜನವಾಗಿದೆ, ಕಾರ್ಯಗತವಾಗಿದೆ ಎನ್ನುವುದರ ಬಗ್ಗೆ ನಾನು ಅದನ್ನು ಹೇಳಲಿಕ್ಕೆ ಸಂಕೋಚ ಪಡುತ್ತೇನೆ. ಕಾರಣವೇನೆಂದರೆ, We presume that all people are equal and we try to apply democratic values to the society, and we fail. ಇದರ ಬಗ್ಗೆ ಚಿನ್ನಪ್ಪರೆಡ್ಡಿಯವರು ವ್ಯಾಲೂಂ 1, ಪೇಜ್ 39ರಲ್ಲಿ ಒಂದು ವಾಕ್ಯವನ್ನು ಹೇಳಿದ್ದಾರೆ.

"Caste area rating: On the other hand, it is said with equal force and it is a matter of shame and regret that despite the passing of the decades after the expression of high found sentiment in the Constitution, the situation of the Scheduled Castes, the Scheduled Tribes and other socially and educationally backwardclasses, has remained static and not shown any marked improvement."

ಈ ರೀತಿಯಾದ ಒಂದು ವಾಕ್ಯವನ್ನು ನಮ್ಮ ಗಮನಕ್ಕೆ ತಂದಿದ್ದಾರೆ. ಇದು ಬಹಳ ಪರಿಣಾಮಕಾರಿಯಾಗಿದೆ ಮತ್ತು ಅರ್ಥಗರ್ಭಿತವಾಗಿದೆ. ಮಾನ್ಯ ಚಿನ್ನಪ್ಪರೆಡ್ಡಿಯವರು ಒಬ್ಬ ಮಹಾ ಮೇಧಾವಿ, ಹಾಗೂ ಸುಪ್ರೀಂ ಕೋರ್ಟಿನಲ್ಲಿ ಜಡ್ಜ್ ಆಗಿದ್ದವರು; ಅಂತಹ ಚಿನ್ನಪ್ಪರೆಡ್ಡಿಯವರನ್ನು ಕರೆತಂದು ಈ ಆಯೋಗದ ಅಧ್ಯಕ್ಷರನ್ನಾಗಿ ಮಾಡಿದ್ದಕ್ಕೆ ಜನತಾ ಸರ್ಕಾರವನ್ನು ನಾನು ಹೊಗಳುತ್ತೇನೆ. ಅವರು ಇಂತಹ ರಿಪೋರ್ಟ್‌ಅನ್ನು ಕೊಟ್ಟಿದ್ದಾರೆ. ಈ ರಿಪೋರ್ಟ್ ನಮ್ಮ ಮುಂದೆ ಇದೆ. ಇದನ್ನು ನಾವು ಜಾರಿಗೆ ಕೊಡುತ್ತೇವೆ, ಬಿಡುತ್ತೇವೆ ಎನ್ನತಕ್ಕ ಪ್ರಶ್ನೆ ಅಲ್ಲ ಆದರೆ ಅವರು ನಮ್ಮ ಗಮನಕ್ಕೆ ತಂದಿರುವ ಕೆಲವು ವಿಚಾರಗಳು ನಮಗೆ ಮಾರ್ಗದರ್ಶನವಾಗಿದೆ ಎಂದು ಹೇಳುತ್ತೇನೆ. ಈ ದೇಶದಲ್ಲಿ ಜಾತಿಗಳು ಇರಬಾರದು ಅನ್ನುವ ವಾದಕ್ಕೆ ಅಂಟಿಕೊಂಡು ಮುಂದೆ ಹೋದರೆ ಈಗಿರುವ ಜಾತಿಗಳನ್ನು ನಿರ್ಮೂಲನ ಮಾಡಲಿಕ್ಕೆ ಅವಕಾಶ ಆಗುತ್ತದೆಯೇ ಹೊರತಾಗಿ ಜಾತಿಗಳನ್ನು ನಾವು ಇಲ್ಲ ಅಂತ ಹೇಳಿ ಬೂಟಾಟಿಕೆತನದಿಂದ ನಡೆದರೆ ಈ ಕೆಲಸ ಆಗುವುದಿಲ್ಲ; ಆದ್ದರಿಂದ......

ಶ್ರೀ ಎ. ಬಿ. ಜಕನೂರು :– ಮಾನ್ಯ ಅಧ್ಯಕ್ಷರೇ, ನನ್ನದೊಂದು ಕ್ರಿಯಾಲೋಪವಿದೆ. ಏನೆಂದರೆ ದಾತಾರ್ ರವರ ಬಗ್ಗೆ ಹೇಳುತ್ತಿದ್ದಾರೆ; ಅವರು ಈ ಸದನದ ಮೆಂಬರ್ ಅಲ್ಲ, ಅವರು ವಕೀಲರಾಗಿದ್ದಾರೆ. ಅವರ ಬಗ್ಗೆ ತಾವು ಇಲ್ಲಿ ಏಕೆ ಹೇಳುತ್ತಿದ್ದೀರಿ ?

ಅಧ್ಯಕ್ಷರು :– ನೀವು ದಾತಾರ್‌ರವರನ್ನು ಕೋಟ್ ಮಾಡಿ ಹೇಳಿದ್ದು ಯಾವುದಾದರೂ ಪುಸ್ತಕದಲ್ಲಿ ಬರೆದಿದ್ದಾರೋ ಅಥವಾ............

ಶ್ರೀ ಬಿ. ಬಸವಲಿಂಗಪ್ಪ :– ಅದು ನಮ್ಮ ಮಂತ್ರಿಮಂಡಲದ ಸಭೆಯಲ್ಲಿ ಹೇಳಿದ ಮಾತು.

ಅಧ್ಯಕ್ಷರು :– ಯಾವ ಮಂತ್ರಿಮಂಡಲದಲ್ಲಿ ?

ಶ್ರೀ ಬಿ· ಬಸವಲಿಂಗಪ್ಪ :– ಜತ್ತಿಯವರ ಮಂತ್ರಿಮಂಡಲದಲ್ಲಿ ಹೇಳಿದ ಮಾತು.

ಅಧ್ಯಕ್ಷರು :– ದಾತಾರ್ ಆಗ ಮಿನಿಸ್ಟರ್ ಆಗಿದ್ದರಾ ?

ಅಧ್ಯಕ್ಷರು :– ಯಾವ ದಾತಾರ್ ತಾವು ಹೇಳುತ್ತಿರುವುದು.

ಶ್ರೀ ಬಿ. ಬಸವಲಿಂಗಪ್ಪ :– ಹೋಂ ಮಿನಿಸ್ಟರ್ ಆಗಿದ್ದವರು.

ಅಧ್ಯಕ್ಷರು :– ಸೆಂಟ್ರಲ್ ಗೌರ್ನಮೆಂಟ್‌ನಲ್ಲಿ ಅವರು ಮಿನಿಸ್ಟರ್ ಆಗಿದ್ದರು. ಕರ್ನಾಟಕದಲ್ಲಿ ಆಗಿರಲಿಲ್ಲ;

ಶ್ರೀ ಬಿ. ಬಸವಲಿಂಗಪ್ಪ :– ಅವರನ್ನು ನಾವು ಇಲ್ಲಿಗೆ ಕರೆದಿದ್ದೆವು. ಅವರು ನಮಗೆ ಒಂದು ಬುದ್ಧಿವಾದವನ್ನು ಹೇಳುವಾಗ ಈ ಒಂದು ರೀತಿಯಲ್ಲಿ ಹೇಳಿದರು.

ಅಧ್ಯಕ್ಷರು :– ಈಗ ನೀವು ಅದು ರೆಕಾರ್ಡಿಗೆ ಹೋಗಬೇಕೆಂದು ಹೇಳಿದಿರಿ ಅಲ್ಲವೇ ?

ಶ್ರೀ ಬಿ. ಬಸವಲಿಂಗಪ್ಪ :– ಅದರಲ್ಲಿ ಅಸಂಭವ ಇದ್ದರೆ ಏನಾದರೂ ಮಾಡಿಕೊಳ್ಳಿ, ನಾನು ಹೇಳಿದ್ದೇನೆ, ನೀವು ಬೇಡ ಅಂದರೆ ಬಿಟ್ಟು ಬಿಡಿ·

ಶ್ರೀ ಹೆಚ್. ಏಕಾಂತಯ್ಯ :– ಹೇಳುವುದನ್ನು ಹೇಳಿ ಈಗ ಬೇಡ ಅಂದರೆ ಹೇಗೆ ?

Mr. Speaker: As far as he is concerned, he has taken a very consistent stand.

ನಾನು ಹೇಳುವುದನ್ನು ಹೇಳುತ್ತೇನೆ, ನೀವು ತೆಗೆದುಹಾಕುವುದಿದ್ದರೆ ತೆಗೆದುಹಾಕಿ ಎಂದು ಅವರು ಹೇಳುತ್ತಿರುವುದು.

ಶ್ರೀ ಬಿ. ಬಸವಲಿಂಗಪ್ಪ :– ನಾನು ಜೀವನದ ಉದ್ದಕ್ಕೂ ಯೋಚನೆ ಮಾಡಿ ಮಾತನಾಡುತ್ತೇನೆ. ನನ್ನ ಮಾತು ಬೇರೆಯವರಿಗೆ ಹಿಡಿಸದೇ ಇರಬಹುದು. ಆದರೆ ಅವರಿಗೆ ಗೌರವ ಕೊಟ್ಟು ಹೇಳುತ್ತೇನೆ, ಅವರಿಗೆ ಹಿಡಿಸದೆ ಹೋದರೆ ಬಿಡರಪ್ಪ ಅಂತ ಹೇಳುತ್ತೇನೆ. ನನ್ನ ಕೆಲಸ ನಾನು ಮಾಡುತ್ತೇನೆ.

ಅಧ್ಯಕ್ಷರು :– ಚಿನ್ನಪ್ಪರೆಡ್ಡಿಯವರ ವರದಿಯ ಬಗ್ಗೆ ಈಗ ನಾವು ಚರ್ಚೆ ಮಾಡುತ್ತಿದ್ದೇವೆ ಹೇಗೆ ? ಜಾತಿ ಸಂಘರ್ಷ ಜಾತಿ ಫಿಲಾಸಫಿ.

ಶ್ರೀ ಬಿ. ಬಸವಲಿಂಗಪ್ಪ :– ಇದನ್ನು ನಾನು ಏಕೆ ಪೀಠಿಕೆ ರೂಪದಲ್ಲಿ ಹೇಳಿದೆ ಅಂದರೆ, ನಾವು ಈ ತಿದ್ದುಪಡಿ ಮಸೂದೆಯಲ್ಲಿ ಷೆಡ್ಯೂಲ್ಡ್ ಕ್ಯಾಸ್ಟ್ ಹೆಣ್ಣು ಮಕ್ಕಳಿಗೂ ಕೂಡ ಮೀಸಲಾತಿ ಕೊಟ್ಟಿದ್ದೇವೆ, ಬ್ಯಾಕ್‌ವರ್ಡ್ ಕ್ಯಾಸ್ಟ್ ಹೆಣ್ಣು ಮಕ್ಕಳಿಗೂ ಮೀಸಲಾತಿ ಕೊಟ್ಟಿದ್ದೇವೆ. ಷೆಡ್ಯೂಲ್ಡ್ ಕ್ಯಾಸ್ಟ್‌ನವರಿಗೆ ಸದಸ್ಯ ಸ್ಥಾನದಲ್ಲೂ ಮೀಸಲಾತಿ ಮತ್ತು ಅಧ್ಯಕ್ಷ ಸ್ಥಾನದಲ್ಲೂ ಮೀಸಲಾತಿ ಕೊಟ್ಟಿದ್ದೇವೆ. ಬ್ಯಾಕವರ್ಡ ಕ್ಲಾಸ್ ಅವರಿಗೂ ಅಧ್ಯಕ್ಷ ಸ್ಥಾನದಲ್ಲೂ ಮೀಸಲಾತಿ, ಸದಸ್ಯ ಸ್ಥಾನದಲ್ಲಿಯೂ ಮೀಸಲಾತಿಯನ್ನು ಕೊಟ್ಟಿದ್ದೇವೆ. ಇಂತಹ ತೀರ್ಮಾನವನ್ನು ತೆಗೆದುಕೊಳ್ಳತಕ್ಕ ಅಧಿಕಾರವನ್ನು ಎಲ್ಲಾ ಸಂಸ್ಥೆಗಳಿಗೂ ಕೊಟ್ಟರೆ ಎಲ್ಲರಿಗೂ ಸಮಾಧಾನವಾಗುತ್ತದೆ ಎಂಬುದು ಎಲ್ಲ ತಿಳುವಳಿಕೆಯಸ್ಥರ ಮತ್ತು ವಿಚಾರಸ್ಥರ ನಿಲುವಾಗಿದೆ. ಆದ್ದರಿಂದ ಈ ಒಂದು ಹಿನ್ನೆಲೆಯಲ್ಲಿ ನಮ್ಮ ಬಸವೇಶ್ವರರು ಹಿಂದೆ ಒಂದು ಅನುಭವ ಮಂಟಪವನ್ನು ಮಾಡಿದರು. ಅನುಭವ ಮಂಟಪದಲ್ಲಿ ಈ ಜಾತಿಯನ್ನು ಅರಿತುಕೊಂಡು ಅವರು ಗಣನೆಗೆ ತೆಗೆದುಕೊಂಡು ಎಲ್ಲ ಜಾತಿಗೆ ಸೇರಿರತಕ್ಕ ಶರಣರ ಸಮೂಹವನ್ನು ಅವರು ನಿರ್ಮಾಣ ಮಾಡಿದರು. ಅಲ್ಲಿ ಎಲ್ಲರ ಅಭಿಪ್ರಾಯವನ್ನೂ ತೆಗೆದುಕೊಳ್ಳುತ್ತಿದ್ದರು. ಆದ್ದರಿಂದ ನಾವು ಈ ಸಮೂಹದ ತೀರ್ಮಾನ ಎಲ್ಲರ ತೀರ್ಮಾನ ಆಗಬೇಕು. ಇದು ಎಲ್ಲರಿಗೂ ಈ ರಾಜ್ಯದಲ್ಲಿ ಅನ್ವಯ ಆಗಬೇಕೆಂಬ ಹಿನ್ನೆಲೆಯಲ್ಲಿ ತಾವು ತಲೆಬಾಗಿ ಇಂತಹ ಒಂದು ವ್ಯವಸ್ಥೆಯನ್ನು ಮಾಡಲೇಬೇಕೆಂದು ಯೋಚನೆ ಮಾಡಿ ಈ ತಿದ್ದುಪಡಿಯನ್ನು ತಂದಿದ್ದೇವೆ. ಆದ್ದರಿಂದ ಸದನದ ಎಲ್ಲರೂ ಇದಕ್ಕೆ ಮನ್ನಣೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಈಗ ಇನ್ನೊಂದು ಮುಖ್ಯವಾಗಿರತಕ್ಕ ಪ್ರಶ್ನೆ ಅಂದರೆ, ನಾನು ಪತ್ರಿಕೆಗಳಲ್ಲಿ ನೋಡಿದ್ದೇನೆ ಅಧಿಕಾರ ವರ್ಗದವರಿಗೆ ಜಾಸ್ತಿ ಅಧಿಕಾರ ಕೊಟ್ಟಿದ್ದಾರೆ ಎನ್ನುವ ಒಂದು ವಾದ ಕೇಳಿ ಬಂದಿದೆ ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಒಂದು ಕಾಪಿ ಕಳುಹಿಸಿಕೊಡುತ್ತೇನೆ. ಇದರಲ್ಲಿ ನಾವು ಕೊಟ್ಟಿರತಕ್ಕ ಅಧಿಕಾರ ಮಾಮೂಲಾಗಿರತಕ್ಕ ಅಧಿಕಾರವೇ ಹೊರತು ಅವರು ನಮ್ಮ ಮೇಲೆ ಅಧಿಕಾರ ಮಾಡುವಂಥ ಅಥವಾ ಯಜಮಾನಿಕೆ ಮಾಡುವಂಥ ಅಧಿಕಾರ ನಾವು ಅವರಿಗೆ ಕೊಟ್ಟಿಲ್ಲ. ಆದ್ದರಿಂದ ಈ ಸೆಕ್ಷನ್ನಿನ ಐಟೆಮ್ ನಂಬರ್ಸ್ ಅನ್ನು ಬೇಕಾದರೆ ತಾವು ಬೇಕಾದರೆ ಗುರ್ತು ಹಾಕಿಕೊಳ್ಳಿ; 10, 16, 17, 18, 19, 63, 63 ಇದು ಡಿಸ್‌ಕ್ವಾಲಿಫಿಕೇಷನ್, ಎಲೆಕ್ಷನ್ಸ್ ಮುಂತಾದವಕ್ಕೆ ಬರುತ್ತದೆ, ಪವರ್ಸ್ ಆಫ್ ಬಿ. ಡಿ. ಓ. at the tluk level 16, 28 and powers of the Deputy Commissioners 11, 14, 41, 63, 63, 63 and powers of the Commissioner 30, 62, 62, 62, 62, c, d, f ಎಂದು ಮಾಡಿಕೊಂಡಿದ್ದೇವೆ. ಇದರಲ್ಲಿ ಅಧಿಕಾರ ವರ್ಗಕ್ಕೆ ನಾವು ಅವರನ್ನು ಒಂದು ಸಾರ್ವಜನಿಕ ಸಂಸ್ಥೆಗಳಲ್ಲಿ ಮೇಲ್ವಿಚಾರಣೆ ಕೆಲಸ ಮಾಡಲು ನೇಮಕ ಮಾಡಿಲ್ಲ, ಆದರೆ ನಾವು ಸಾಮಾನ್ಯ ಕೆಲಸಕ್ಕೋಸ್ಕರ, ಎಲೆಕ್ಷನ್‌ಗೆ ಹೋಗಬೇಕಾಯಿತು, ನಾನು ಮತ್ತು ಶ್ರೀಮಾನ್ ಚಂದ್ರೇಗೌಡರು ಅಸಿಸ್ಟೆಂಟ್ ಕಮೀಷನರ್ ಮುಂದೆ ಅಪ್ಲಿಕೇಷನ್ ಹಾಕಲೇಬೇಕು; ರಿಟರ್ನ್ಸ್ ಫೈಲ್ ಮಾಡಲೇಬೇಕು ಇಂಥ ಕೆಲವೊಂದು ಕೆಲಸ ಮಾಡಿದ್ದೇವೆ, ಸಣ್ಣ ಸಣ್ಣ ವಿಚಾರಕ್ಕೆ ಮಾಡಿದ್ದೇವೆ. ಆದರೆ ಎಲ್ಲೆಲ್ಲಿ ಒಂದು ವಾದ ಬಂದಿತು ಅಂದರೆ ಡಿ. ಸಿ. ಬೇಡ, ಸರ್ಕಾರದಲ್ಲಿ ಅಧಿಕಾರವನ್ನು ಇಟ್ಟುಕೊಳ್ಳಬೇಕೆಂದು ಹೇಳಿದರು. ಅದನ್ನು ತಿದ್ದುಪಡಿ ರೂಪದಲ್ಲಿ ತಂದಿದ್ದೇವೆ. ಇಲ್ಲಿ ಸರ್ಕಾರಕ್ಕೆ ಎಲ್ಲ ಅಧಿಕಾರ ಇಟ್ಟುಕೊಂಡು ಸರ್ಕಾರದ ಮುಖಾಂತರ ಯಾರಿಗೆ ಡೆಲಿಗೇಟ್ ಮಾಡಬೇಕು ಆಮೇಲೆ ಎನ್‌ಟ್ರಸ್ಟ್‌ಮೆಂಟ್ ಮಾಡಬೇಕು, ಪವರ್ಸ್ ಡೆಲಿಗೇಟ್ ಮಾಡಬೇಕು ಅನ್ನುವಂಥಾದ್ದನ್ನು ಸರ್ಕಾರ ಇಟ್ಟುಕೊಂಡಿದೆ. ಡಿ. ಸಿ. ಅವರನ್ನು ಕೆಲವು ಸ್ಥಳಗಳಲ್ಲಿ ಬಿಟ್ಟಿದ್ದೇವೆ ಹೊರತು ಬೇರೇನೂ ಮಾಡಿಲ್ಲ. ಒಂದು ವಿಚಾರ ಡಿಸೆಂಟ್ರಲೈಜೇಷನ್ ಬಗ್ಗೆ ನಾನು ಹೆಚ್ಚು ಹೇಳಲಿಕ್ಕೆ ಹೋಗುವುದಿಲ್ಲ. ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಇದನ್ನು ಮಾತನಾಡಲಿಕ್ಕೆ ಅವಕಾಶ ಮಾಡಿಕೊಡುತ್ತೇನೆ. ಈ ಬಗ್ಗೆ ನನ್ನ ಭಾಷಣವನ್ನು ಜಾಸ್ತಿ ಹೊತ್ತು ತೆಗೆದುಕೊಂಡು ಹೋಗುವುದಿಲ್ಲ; ಹಿಂದೆ ನಾವು ಎಲೆಕ್ಷನ್‌ನಲ್ಲಿ, ಈ ದೇಶಕ್ಕೆ ಸ್ವಾತಂತ್ರ್ಯ ಬಂದ ದಿನದಿಂದ ಇವತ್ತಿನವರೆಗೂ, ನಮ್ಮ ಜನಾಂಗವನ್ನು ಅಂದರೆ ಹಿಂದುಳಿದ ವರ್ಗದವರನ್ನು ಎಸ್.ಸಿ./ಎಸ್.ಟಿ. ಇವರನ್ನು ಮುಂದೆ ತರಲಿಕ್ಕೆ ಪ್ರಯತ್ನ ಮಾಡುತ್ತೇವೆ, ಹೆಣ್ಣು ಮಕ್ಕಳಿಗೆ ಗೌರವಯುತವಾದ ಸ್ಥಾನಮಾನ ದೊರೆಯುವಂತೆ ಪ್ರಯತ್ನ ಮಾಡುತ್ತೇವೆಂದು ಭಾಷಣ ಮಾಡಿಕೊಂಡೇ ಬಂದಿದ್ದೇವೆ. ಇವತ್ತಿನ ನನ್ನ ಪ್ರಯತ್ನ, ಎಲ್ಲರಿಗೂ ಕೂಡ ಸಮಾನಾವಕಾಶ ದೊರೆಯುವಂಥ ಒಂದು ವ್ಯವಸ್ಥೆ ಮಾಡುವುದಾಗಿದೆ. ಇವತ್ತಿನವರೆಗೆ ಎಷ್ಟು ಚುನಾವಣೆಗಳಾಗಿವೆ. ನಾವೆಲ್ಲರೂ ಭಾಷಣಗಳಲ್ಲಿ ಮಾತನಾಡಿದ್ದೇವೆ, ಎಲೆಕ್ಷನ್‌ನಲ್ಲಿ ಗೆದ್ದ ಮೇಲೆ ಮರೆತಿದ್ದೇವೆ, ಸರ್ಕಾರ ರಚನೆ ಮಾಡಿದ ಮೇಲೆ ಮರೆತಿದ್ದೇವೆ. ಆದ್ದರಿಂದ ಇವತ್ತು ನಾನು ಮಾನ್ಯ ಅಧ್ಯಕ್ಷರ ಮೂಲಕ ವಿನಯಪೂರ್ವಕವಾಗಿ ಈ ಸದನಕ್ಕೆ ಹೇಳುತ್ತೇನೆ, ಸ್ವಾತಂತ್ರ್ಯ ಬಂದಾಗಿನಿಂದ

ಇವತ್ತಿನವರೆಗೆ ನಾವು ಹೇಳುತ್ತಿದ್ದ ಯಾವ ಕೆಲಸವನ್ನು ಮಾಡಿಲ್ಲ, ಆ ಕೆಲಸವನ್ನು ಮಾಡಲಿಕ್ಕೆ ಈ ಸರ್ಕಾರ ಪ್ರಯತ್ನ ಮಾಡಿದೆ ಎಂದು ಹೇಳಿ ಇದಕ್ಕೆ ಎಲ್ಲರೂ ಮನ್ನಣೆ ಕೊಡಬೇಕೆಂದು ಕೇಳಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಡಿ. ಬಿ. ಚಂದ್ರೇಗೌಡ (ವಿರೋಧ ಪಕ್ಷದ ನಾಯಕರು) :– ಮಾನ್ಯ ಅಧ್ಯಕ್ಷರೇ ಮೊದಲಿಗೆ ತಮ್ಮನ್ನು ಮತ್ತು ಮಂತ್ರಿಗಳನ್ನು, ಶಾಸನವನ್ನು ಈಗತಾನೆ ಕನ್ನಡದಲ್ಲಿ ಕೊಟ್ಟು ನಮ್ಮನ್ನು ಓದದೇ ಇರುವ ಸ್ಥಿತಿಗೆ ತಂದಿದ್ದಕ್ಕಾಗಿ ಅಭಿನಂದಿಸುತ್ತೇನೆ. ಏಕೆಂದರೆ ಈಗತಾನೆ ಕೊಟ್ಟಿದ್ದಾರೆ. ಆದರೆ ಎಷ್ಟರಮಟ್ಟಿಗೆ ಇಂಗ್ಲೀಷ ನಲ್ಲಿ ನನಗೆ ತಿಳಿದಿದೆಯೋ, ನನಗೆ ತಿಳಿದುಕೊಳ್ಳುವುದಕ್ಕೆ ಎಷ್ಟು ಸಾಧ್ಯವಿದೆಯೋ ಅಷ್ಟು ತಿಳಿದುಕೊಂಡಿದ್ದೇನೆ, ಇಂಗ್ಲೀಷ್‌ನಲ್ಲಿ ಓದಿ ಎಷ್ಟು ನನಗೆ ತಿಳುವಳಿಕೆ ಮಾಡಿಕೊಳ್ಳಲಿಕ್ಕೆ ಸಾಧ್ಯವಿದೆಯೋ ಅಷ್ಟನ್ನು ಹೇಳು ತ್ತೇನೆ. ಕನ್ನಡದ್ದು ಬಂದಮೇಲೆ ಮುಂದೆ ಯಾವಾಗ ಹೇಳಬೇಕೋ ಅದನ್ನು ಹೇಳುತ್ತೇನೆ. ಇದು ಪೀಠಿಕೆ ಅಷ್ಟೆ. ಮುಖ್ಯವಾಗಿ ಕರ್ನಾಟಕ ಜಿಲ್ಲಾ ಪರಿಷತ್ತು ತಾಲ್ಲೂಕು ಪಂಚಾಯಿತಿ ಸಮಿತಿಗಳು ಮತ್ತು ಮಂಡಲ್ ಪಂಚಾಯಿತಿಗಳು, ನ್ಯಾಯ ಪಂಚಾಯಿತಿಗಳ, 1983 ನೇ ವಿಧೇಯಕ, ಹೊಸ ಸರ್ಕಾರ ಬಂದ ಪ್ರಾರಂಭಿಕ ದಿನದಿಂದ ಇಂದಿಗೆ ಸುಮಾರು ಒಂದು ವರ್ಷ ಮೂರು ದಿನದ ಕಾಲ ಒಂದಲ್ಲ ಒಂದು ರೂಪದಲ್ಲಿ ಚರ್ಚೆಯಾಗುತ್ತಾ ಬಂದಿದೆ. ಈಗ ಇದಕ್ಕೆ ಒಂದು ಹೊಸ ರೂಪ ಕೊಟ್ಟಿದ್ದೇನೆ, ಎಲ್ಲರಿಗೂ ಅವಕಾಶ ಕೊಟ್ಟಿದ್ದೇನೆ, ಅಧಿಕಾರ ಕೊಟ್ಟಿದ್ದೇನೆ, ಸ್ವಾತಂತ್ರ್ಯ ನಂತರ ಮತ್ತು ಸ್ವಾತಂತ್ರ್ಯ ಪೂರ್ವದಲ್ಲಿ ಯಾವುದನ್ನು ಜನರಿಗೆ ಕೊಡಬೇಕಾಗಿತ್ತೋ, ಅದನ್ನು ಇದುವರೆಗೆ ಕೊಡಲಿಲ್ಲ, ಅದನ್ನು ಕೊಟ್ಟಿದ್ದೇವೆ, ಹೀಗೆ ಸುದೀರ್ಘ ವಾಗಿ ಮಂತ್ರಿಗಳು ಹೇಳಿದ್ದಾರೆ. ಪ್ರತಿಪಕ್ಷದಲ್ಲಿ ಕುಳಿತು ನಮಗೆ ಈ ಮಸೂದೆ ಬಂದಮೇಲೆ ನಾವು ಏನು ಮಾಡಿದ್ದೇವೆ ಎನ್ನುವುದು ಮುಖ್ಯ. ನವೆಂಬರ್ 27 ನೇ ತಾರೀಖು ಈ ಮಸೂದೆ ಮಂಡನೆ ಆದಾಗ ನಾವು ಈ ಮಸೂದೆಯನ್ನು ಪ್ರತಿಭಟಿಸಿ ಧರಣಿ ಮಾಡುವವರೆಗೆ ನಮ್ಮ ಕಾರ್ಯವನ್ನು ಮುಂದುವರಿಸಿದೆವು. ಇದರ ಪರಿಣಾಮ ಏನು ? ಮುಖ್ಯವಾದಂಥ ಪರಿಣಾಮ ಶಾಸನಸಭೆಯ ಬಹುಸಂಖ್ಯೆ ಸದಸ್ಯರು ಇರತಕ್ಕಂಥ ಕಾಂಗ್ರೆಸ್ ಪಕ್ಷಕ್ಕೆ ಸೇರಿದ ಸದಸ್ಯರಿಗೆ ಚರ್ಚೆ ಮಾಡುವುದಕ್ಕೆ ಪಕ್ಷದೊಳಗೆ ಒಂದು ಮುಕ್ತ ಅವಕಾಶವನ್ನು ಕೊಟ್ಟೆವು. ಇದು ನಮ್ಮ ಮುಖ್ಯ ಸಾಧನೆ. ಪಕ್ಷದಿಂದ ಹೊರಗಡೆ ಚಿಂತನೆಗೆ ಅವಕಾಶ ಕೊಟ್ಟೆವು. ಈ ಚಿಂತನೆ ಎಷ್ಟು ದೂರಕ್ಕೆ ಹೋಯಿತು ಅಂದರೆ ಶಾಸನಸಭೆಯ ವ್ಯಾಪ್ತಿಯನ್ನು ಮೀರಿ ಎಲ್ಲಾ ಪಕ್ಷಗಳ ವೇದಿಕೆಯ ಮೇಲೆ ಮತ್ತು ಕೇಂದ್ರ ಹಾಗೂ ವಿಭಿನ್ನ ರಾಜ್ಯಗಳ ವೇದಿಕೆಯ ಮೇಲೆ ಚರ್ಚೆಗೆ ಒಂದು ಗ್ರಾಸವನ್ನು ಒದಗಿಸಿತು. ಆ ದೃಷ್ಟಿಯಿಂದ ಅವೊತ್ತು ನಾವು ಶಾಸನ ಸಭೆಯಲ್ಲಿ ಧರಣಿ ಕುಳಿತದ್ದು ಅಪಚಾರ ಎಂದು ಗೊತ್ತಿದ್ದರೂ, ಯಾವುದೋ ಒಂದು ಮಹತ್ಕಾರ್ಯಕ್ಕಾಗಿ ಈ ಕೆಲಸವನ್ನು ಮಾಡಿದ್ದೇವೆ; ಆದ್ದರಿಂದ, ಅದನ್ನು ತಾವು ಕ್ಷಮಿ-ಸಿದ್ದೀರಿ ಇವೊತ್ತಿನ ಪರಿಸ್ಥಿತಿಯನ್ನು ಅರ್ಥ ಮಾಡಿಕೊಂಡು ಅಂತ ಹೇಳಿ, ನಾನು ಈ ಮೂಲಕ ತಮ್ಮನ್ನು ಮತ್ತು ಈ ಒಂದು ಚರ್ಚೆಗೆ ಗ್ರಾಸವನ್ನು ಒದಗಿಸಿದ ಎಲ್ಲಾ ಪ್ರತಿಪಕ್ಷದ ಮುಖಂಡರನ್ನು ಮತ್ತು ಸದಸ್ಯರನ್ನು ಈ ಮೂಲಕ ಅಭಿನಂದನೆ ಮಾಡುತ್ತೇನೆ.

ಶ್ರೀ ಹೆಚ್. ಏಕಾಂತಯ್ಯ :– ಮಾನ್ಯ ಬಸವಲಿಂಗಪ್ಪನವರಿಗೂ ಅಭಿನಂದನೆಗಳನ್ನು ಸಲ್ಲಿಸಬೇಕು.

ಶ್ರೀ ಡಿ. ಬಿ. ಚಂದ್ರೇಗೌಡ :– ಇದನ್ನೆಲ್ಲಾ ಮಾನ್ಯ ಬಸವಲಿಂಗಪ್ಪನವರು ಓದುವುದಿಲ್ಲ. ಅವರದ್ದು ಹೇಳಿಬಿಟ್ಟಿದ್ದಾರೆ. ನಾನು ಏನು ಹೇಳಬೇಕೋ ಅದನ್ನು ಹೇಳಿದ್ದೇನೆ, ನೀವು ಒಪ್ಪಿದರೆ ಒಪ್ಪಿ, ಬಿಟ್ಟರೆ ಬಿಡಿ ಎಂದು ಹೇಳಿದ್ದಾರೆ. ಆದ್ದರಿಂದ ಅವರಿಗೆ ಅಭಿನಂದನೆ ಏಕೆ ಸಲ್ಲಿಸಬೇಕು ? ಈಗ ಮತ್ತೊಂದು ಮುಖ್ಯ-ವಾದಂಥ ವಿಚಾರ ಅಂದರೆ, ಈ ಮಸೂದೆ ಮಂಡನೆಯಾದಾಗ, ಶಾಸನವಾದಾಗ, ಈ ವಿಧಾನಸಭೆಯ ಅಧ್ಯಕ್ಷ ಸ್ಥಾನದಲ್ಲಿ ನಾನು ಕುಳಿತಿದ್ದೆ. ಆಗ ಎರಡು ಭಾಗದ ಸದಸ್ಯರ ಚರ್ಚೆಯನ್ನು ಕೇಳಿದ್ದೇನೆ. ಆದರೆ ಬಹುತೇಕ ಇದರ ಮೂಲ ಸತ್ವವನ್ನು ಅಂತಃ ಸತ್ವವನ್ನು ಅರ್ಥಮಾಡಿಕೊಳ್ಳುವುದು ನಮಗೂ ಸಾಧ್ಯವಾಗಿರಲಿಲ್ಲ. ಆದ್ದರಿಂದ ನಾವು ಕೂಡ ಅಂತ ಸತ್ವವನ್ನು ಅರ್ಥಮಾಡಿಕೊಳ್ಳುವ ಪ್ರಯತ್ನವನ್ನು ಮತ್ತು ಪ್ರೇರಣೆಯನ್ನು ಈ ಚರ್ಚೆ ಒದಗಿಸಿ ಕೊಟ್ಟಿತು. ಆ ದೃಷ್ಟಿಯಿಂದ ಮಂತ್ರಿಗಳಿಗೆ ನಾನು ನನ್ನ ಅಭಿನಂದನೆ ಸಲ್ಲಿಸುತ್ತೇನೆ. ಮೊದಲು ಚುನಾವಣೆಗೆ ಪೂರ್ವ ಕಾಂಗ್ರೆಸ್ ಪಕ್ಷದ ಕೆಲವು ಮುಖಂಡರು ಈ ಮಸೂದೆಗೆ ತಿದ್ದುಪಡಿ ಸೂಚನೆಯನ್ನು ಕೊಟ್ಟಿದ್ದರು. ಆದರೆ ಈ ಮಸೂದೆಯ ತಿದ್ದುಪಡಿ ಕಾಂಗ್ರೆಸ್ ಪಕ್ಷದ ಚುನಾವಣೆಯ ಪ್ರಣಾಳಿಕೆಯ ಒಂದು ಭಾಗವಾಗಿರಲಿಲ್ಲ; ಇದು ಮುಖ್ಯವಾದ ಪ್ರಶ್ನೆ. ಒಂದುವೇಳೆ ಇದು ಪ್ರಣಾಳಿಕೆಯ ಭಾಗವಾಗಿದ್ದು, ಚುನಾವಣೆಯಲ್ಲಿ ಪಕ್ಷ ಅದರ ಆಧಾರದ ಮೇಲೆ ಗೆದ್ದು ಬಂದಿದ್ದರೆ ಆ ಮಾತಿಗೆ ಅರ್ಥ ಬರುತ್ತಿತ್ತು. ವ್ಯಾಖ್ಯೆಗೆ ಸರಿಯಾದಂಥ ಶಕ್ತಿ ಬರುತ್ತಿತ್ತು. ಆ ಮಾತನ್ನು ಹೇಳದೆ, ಈಗ ಶಾಸನ ಸಭೆಯ ಒಳಗಡೆ ಸಂಖ್ಯೆಯನ್ನು ಆಧರಿಸಿ ನಾವು ಏನೇನು ಬೇಕಾದರೂ ಮಾಡುತ್ತೇವೆ ಎನ್ನುವ ಒಂದು ಪ್ರವೃತ್ತಿ ಜನತಂತ್ರದಲ್ಲಿ ನಾವು ಹಮ್ಮಿ ಕೊಂಡು ಬಂದಿರುವಂಥ ವ್ಯವಸ್ಥೆಗೆ ಮತ್ತು ಆಲೋಚನೆಗಳಿಗೆ ಹಾಗೂ ಎಲ್ಲದಕ್ಕಿಂತಲೂ ಮೇಲಾಗಿ ಜನಕ್ಕೆ ಕೊಡತಕ್ಕಂಥ ಮಾತು, ಪ್ರಣಾಳಿಕೆಗೆ ಯಾವ ಗೌರವವನ್ನು ಇದು ತರುವುದಿಲ್ಲ. ಆದ್ದರಿಂದ ನಾನು ಮಾನ್ಯ

ಮಂತ್ರಿಗಳಲ್ಲಿ ಮತ್ತು ಸರ್ಕಾರದವರಲ್ಲಿ ಕೇಳಿಕೊಳ್ಳುವುದಿಷ್ಟೆ; ನೀವು ನಿಮ್ಮ ಯಾವುದಾದರೂ ಪ್ರಣಾಳಿಕೆಯ ಒಂದು ಭಾಗದಲ್ಲಿ ಈ ಮಾತನ್ನು ಹೇಳಿದ್ದಿದ್ದರೆ ಈ ಮಾತನ್ನು ಈಗ ಒತ್ತಿ ಒತ್ತಿ ಹೇಳಬಹುದಿತ್ತು. ಆದರೆ ಹಾಗೆ ಹೇಳದೆಯೇ ಶಾಸನ ಸಭೆಯಲ್ಲಿ ತಮ್ಮ ಬಹುಮತವನ್ನು ಪ್ರದರ್ಶನ ಮಾಡುವುದಕ್ಕೆ ಹೊರಟಿದ್ದೀರಿ; ಇದು ಒಂದು ಭಾಗ.

ಎರಡನೆಯ ಬಹಳ ಮುಖ್ಯವಾದ ಭಾಗ ಎಂದರೆ ಈ ವಿಚಾರ ಚರ್ಚೆಗೆ ಬರುವುದಕ್ಕೆ ಮುಂಚಿತವಾಗಿ ಮಂತ್ರಿಗಳು 3 ಜನ ಆಗಿದ್ದಾರೆ. ಅದರಲ್ಲಿ ಇಬ್ಬರೂ ಒಬ್ಬರೇ; ಮೊದಲು ಮಾನ್ಯ ಬಸವಲಿಂಗಪ್ಪನವರನ್ನು ಈ ಖಾತೆಯ ಮಂತ್ರಿಗಳನ್ನಾಗಿ ಆಯ್ಕೆ ಮಾಡಿದರು. ಅಲ್ಲಿ ಬಂದಂಥ ಚರ್ಚೆಯ ಪರಿಣಾಮವೋ ಏನೋ ಗೊತ್ತಿಲ್ಲ, ಅಂದಿನ ಮುಖ್ಯ ಮಂತ್ರಿಗಳು ಇವರನ್ನು ಬದಲಾಯಿಸಿ ಮಾನ್ಯ ಫೋರ್ಪಡೆಯವರನ್ನು ಇಲ್ಲಿಗೆ ತಂದರು. ಪುನಃ ಸರ್ಕಾರ ಬದಲಾವಣೆ ಆಯಿತು. ಈಗ ಈ ಸರ್ಕಾರ ಬಂದಮೇಲೆ ಮಾನ್ಯ ಬಸವಲಿಂಗಪ್ಪನವರು ಮತ್ತೆ ಮಂತ್ರಿ ಆದರು. ಅರ್ಥಾತ್ ಈಗಿನ ಮಾನ್ಯ ಮುಖ್ಯ ಮಂತ್ರಿಗಳಿಗೆ ಈ ವಿಕೇಂದ್ರೀಕರಣದ ವ್ಯವಸ್ಥೆಯ ಬಗ್ಗೆ ಏನು ಕಲ್ಪನೆಗಳಿವೆ, ಈ ವಿಕೇಂದ್ರೀಕರಣ ವ್ಯವಸ್ಥೆಯ ಬಗ್ಗೆ ತಾವು ಏನನ್ನು ಅಂದುಕೊಂಡಿದ್ದೀರಿ ಈ ವ್ಯವಸ್ಥೆಯ ಬಗ್ಗೆ ಅವರಿಗೆ ಏನು ಅಭಿಪ್ರಾಯವಿದೆ ಎಂಬುದು ನಮಗೆ ಸ್ಪಷ್ಟವಾಗಿ ಗೊತ್ತಾಯಿತು. ಏಕೆಂದರೆ, ಯಾರಿಗೆ ಇದು ಸಾಧ್ಯವಾಗುವುದಿಲ್ಲ, ಅಥವಾ ಯಾರಿಂದ ಅನಾನುಕೂಲ ಆಗುತ್ತದೆಂಬ ಅಭಿಪ್ರಾಯ ಮಾನ್ಯ ವೀರೇಂದ್ರ ಪಾಟೀಲರಿಗೆ ಇತ್ತೋ ಅದರ ತದ್ವಿರುದ್ಧ ಶ್ರೀಮಾನ್ ಬಂಗಾರಪ್ಪನವರು ಆಲೋಚನೆ ಮಾಡಿದ್ದುದು ಈ ಸರ್ಕಾರಕ್ಕೂ ಆ ಸರ್ಕಾರಕ್ಕೂ ಇರತಕ್ಕ ದೊಡ್ಡ ಕಂದಕವನ್ನು ಈ ಮೂಲಕ ಅಭಿವ್ಯಕ್ತಮಾಡಿತು. ಇದಕ್ಕಿಂತ ಹೆಚ್ಚಿಗೆ ದೂರ ನಾನು ಹೇಳುವುದಕ್ಕೆ ಹೋಗುವುದಿಲ್ಲ. ಮಾನ್ಯ ಬಸವಲಿಂಗಪ್ಪನವರನ್ನು ನಾನು ಮೊದಲೇ ಒಪ್ಪಿಕೊಂಡಿದ್ದೇನೆ. ಈಗ ಅದರ ಬಗ್ಗೆ ಚರ್ಚೆ ಮಾಡುವುದಕ್ಕೆ ನಾನು ಹೋಗುವುದಿಲ್ಲ. ಬಹಳ ದಿವಸಗಳ ಹಿಂದೆಯೇ ನಾನು ಒಪ್ಪಿಕೊಂಡಿದ್ದೇನೆ. ಈ ವಿಚಾರದಲ್ಲಿ ನಿಮ್ಮನ್ನು ನಾನು ಕಾಂಪ್ಲಿಮೆಂಟ್ ಮಾಡುತ್ತೇನೆ. ನೀವು ವಿಚಾರಗಳನ್ನು ಹೇಳುವುದು, ಆಚರಣೆಗೆ ತರುವಾಗ ಅದನ್ನು ಮಾಡದೇ ಇರುವುದೂ ಇದೆ. ನಿಮ್ಮ ಅಭಿಪ್ರಾಯಗಳನ್ನು ನಾವು ಒಪ್ಪದೇ ಇರಬಹುದು. ಆದರೆ ನಿಮ್ಮ ನಿಲುವಿನಲ್ಲಿ ನೀವು ಬದಲಾವಣೆಯನ್ನು ಮಾಡುವುದಿಲ್ಲ ಎಂಬ ಬಗ್ಗೆ ನನ್ನ ಕಾಂಪ್ಲಿಮೆಂಟ್ಸ್ ಕೂಡ ಇದೆ. ಮುಖ್ಯವಾಗಿ ಶಾಸನಗಳನ್ನು ರಚನೆ ಮಾಡುವಾಗ......

ಶ್ರೀ ಬಿ. ಬಸವಲಿಂಗಪ್ಪ :— ಮಾನ್ಯ ಅಧ್ಯಕ್ಷರೇ, ನಾನು ಒಂದು ವಿಚಾರವನ್ನು ಹೇಳುತ್ತೇನೆ. ನನ್ನ ನಿಲುವು ಏನಿದೆ, ಇದರಲ್ಲಿ ನನ್ನದೇನೂ ಇಲ್ಲ. ನನ್ನ ನಿಲುವು ನನ್ನ ಸರ್ಕಾರದ ನಿಲುವು. ನನ್ನ ಪಾರ್ಟಿಯ ನಿಲುವು ನಮ್ಮ ಮೇಲಿರತಕ್ಕ ಪಾರ್ಟಿ ಎಂದರೆ ದೆಹಲಿಯಲ್ಲಿರತಕ್ಕ ಆಲ್ ಇಂಡಿಯಾ ಕಾಂಗ್ರೆಸ್ ಸಮಿತಿಯವರು ಏನಿದ್ದಾರೆ ಆ ಯಜಮಾನರ ನಿಲುವು ಇದನ್ನು ಬಿಟ್ಟರೆ ನನ್ನ ಸ್ವಂತ ನಿಲುವು ಇಲ್ಲಿ ಏನೂ ಬರುವುದಿಲ್ಲ. ನಾನು ವೈಯಕ್ತಿಕವಾಗಿ ಏನು ನಡೆದುಕೊಳ್ಳುತ್ತೇನೆ ಅದು ನನ್ನ ಸ್ವಂತ ನಿಲುವು. ಇಲ್ಲಿ ಸಾಮೂಹಿಕ ನಿಲುವೇ ಹೊರತು ನನ್ನದೇನೂ ಇಲ್ಲ.

ಶ್ರೀ ಡಿ. ಬಿ. ಚಂದ್ರೇಗೌಡ :— ನಿಮ್ಮ ಯಜಮಾನರ ನಿಲುವು ಏನು ಎಂಬುದನ್ನು ಅನಂತರ ನಾನು ಚರ್ಚೆ ಮಾಡುತ್ತೇನೆ. ಅದನ್ನು ಚರ್ಚೆ ಮಾಡುವುದಕ್ಕೆ ನನಗೆ ಅವಕಾಶ ಸಿಕ್ಕುತ್ತದೆಯೋ ಇಲ್ಲವೋ ಎಂದು ಅಂದುಕೊಂಡಿದ್ದೇನೆ. ಈಗ ನಿಮ್ಮ ಯಜಮಾನರ ನಿಲುವು ಏನು ಎಂಬುದನ್ನು ನಾನು ಹೇಳುತ್ತೇನೆ.

ಶ್ರೀ ಎ. ರುಕ್ಮಯ್ಯ ಪೂಜಾರಿ :— ಮಾನ್ಯ ಬಸವಲಿಂಗಪ್ಪನವರ ನಿಲುವು ಎಂದರೆ ಆ ಬ್ರಹ್ಮನೂ ಕೂಡ ಛೇಂಜ್ ಮಾಡುವುದಕ್ಕೆ ಆಗದೇ ಇರತಕ್ಕದ್ದು.

ಶ್ರೀ ಆರ್. ಎಲ್. ಜಾಲಪ್ಪ :— ಇದಕ್ಕೆ ಮೊದಲು ನೀವು ಸುಮಾರು 15–20 ತಿದ್ದುಪಡಿಗಳನ್ನು ತಂದಿರಿ. ಆಗ ನಿಮಗೆ ಯಜಮಾನರು ಇರಲಿಲ್ಲವೇ ? ಈಗ ನಿಮಗೆ ಯಜಮಾನರ ಜ್ಞಾಪಕ ಬಂತೇನು ?

ಶ್ರೀ ಪಿ. ಜಿ. ಆರ್. ಸಿಂಧ್ಯ :— ಆಗ ನಿಮ್ಮ ಯಜಮಾನರು ಇರಲಿಲ್ಲವೇ ಎಂದು ಕೇಳುತ್ತಿದ್ದಾರೆ ?

ಶ್ರೀ ಬಿ. ಬವಸಲಿಂಗಪ್ಪ :— ನಾನು ಹೇಳಿದ್ದೇನೆ.

ಶ್ರೀ ಡಿ. ಬಿ. ಚಂದ್ರೇಗೌಡ :— ತಮ್ಮ ನಿಲುವು ಏನು ಎಂದು ಹೇಳುತ್ತಿದ್ದೀರಿ. What is bad law, what is good law from the point of view of a Legislation......
ಈ ಒಂದು ಶಾಸನ ರಾಜಕೀಯಕ್ಕೆ ಹೊರತಾಗಿದ್ದರೆ ಅದು ಒಳ್ಳೆಯ ಶಾಸನವಾಗುತ್ತದೆ. ಇಡೀ ರಾಜ್ಯದ ಜನರು ಅದನ್ನು ಸ್ವಾಗತಿಸುತ್ತಾರೆ; ಅಥವಾ it passes a test of judiciary in a way by interpreting. ನಾವು ಶಾಸನ ಸಭೆಗಳಲ್ಲಿ ಎತ್ತತಕ್ಕ ಪ್ರತಿಯೊಂದು ವಿಧಿ ಬಿಂದುಗಳು ಆಯಾಯ ಮಸೂದೆಗಳಿಗೆ ತಂದಿರತಕ್ಕ ತಿದ್ದುಪಡಿಗಳಿಗೆ ಮತ್ತು ಚರ್ಚೆಯಲ್ಲಿ ನಮಗೆ ಬರತಕ್ಕ ಸಂಶಯಗಳು ಏನಿವೆ, ಅವನ್ನು ಪರಿಹಾರ ಮಾಡತಕ್ಕ

ಕೆಲಸವನ್ನು ಮಾನ್ಯ ಮಂತ್ರಿಗಳು ಮಾಡಲಿ. ಆದರೆ ದುರಂತ ಈ ಶಾಸನದಲ್ಲಿ ತಾವು ಏನನ್ನು ಮಾಡುವುದಕ್ಕೆ ಹೊರಟಿದ್ದಾರೋ ಇದು ರಾಜಕೀಯ ದುರುದ್ದೇಶದಿಂದ ಕೂಡಿರುವಂಥ ಶಾಸನವೆನ್ನುವುದನ್ನು ತಮ್ಮ ಭಾಷಣ ದಲ್ಲಿಯೇ ಅವರೇ ಅಭಿವ್ಯಕ್ತ ಮಾಡಿದ್ದಾರೆ. ಏತಕ್ಕೆಂವರೆ ಈ ಶಾಸನಕ್ಕೆ ತಿದ್ದುಪಡಿ ತರುತ್ತೇವೆನ್ನುವ ಮಾತನ್ನು ಹೇಳಿದ್ದಾರೆಂದರೆ ಮಂತ್ರಿಗಳು, ಶಾಸಕರು ಜಿಲ್ಲೆಗಳಿಗೆ ಹೋದರೆ ಮರ್ಯಾದೆ ಇಲ್ಲ; ಜಿಲ್ಲಾ ಪರಿಷತ್ತಿನ ಸದಸ್ಯರಿಂದ ಮತ್ತು ಅಧ್ಯಕ್ಷರಿಂವ ನಮಗೆ ಮರ್ಯಾದೆ ಇಲ್ಲ. ಆದ್ದರಿಂದ ಈ ಮರ್ಯಾದೆ ಕೊಡುವಂಥ ಕೆಲಸ ಮಾಡಿದ್ದೇ-ವೆಂದು ಹೇಳಿದ್ದಾರೆ.

ಶ್ರೀ ಕರಿಯಣ್ಣ :– ಮಾನ್ಯ ಅಧ್ಯಕ್ಷರೇ, ನನ್ನದೊಂದು ಕ್ರಿಯಾಲೋಪ ಇದೆ. ಶಾಸಕರು ಮತ್ತು ಇತರೇ ಸದಸ್ಯರು ಹೋದಾಗ ಮರ್ಯಾದೆ ಇಲ್ಲವೆಂಬ ಕಾರಣದಿಂದ ಇದನ್ನು ತಂದಿಲ್ಲ. ಜಿಲ್ಲಾ ಪರಿಷತ್ ಆಕ್ಟ್‌ನಲ್ಲಿ ರತಕ್ಕಂಥ ಹಲವಾರು ಲೋಪದೋಷಗಳನ್ನು ಸರಿಪಡಿಸಿ ಮತ್ತಷ್ಟು ಅಧಿಕಾರ ವಿಕೇಂದ್ರೀಕರಣ ಮಾಡಬೇಕು ಎನ್ನುವ ದೃಷ್ಟಿಯಿಂದ ಇದನ್ನು ತರಲಾಗಿದೆಯೇ ಹೊರತು ಮತ್ತು ಮಾನ್ಯ ಮಂತ್ರಿಗಳು ಹೇಳಿದ ಹಾಗೆ ಪ್ರಗತಿಪರವಾದ ಶಾಸನಗಳನ್ನು ಮತ್ತಷ್ಟು ಕೊಡಬೇಕೆನ್ನುವ ಅಭಿಪ್ರಾಯದಿಂದ ತಂದಿದ್ದೇವೆಯೇ ವಿನಃ ನಮ್ಮ ಶಾಸಕರಿಗೆ ಗೌರವ ಹೋಗುತ್ತದೆಂದು ಹೇಳಿ ನಾವು ಅಭಿಪ್ರಾಯಪಟ್ಟಿಲ್ಲ. ನಮ್ಮ ಪಕ್ಷದ ನಿಲುವು ನಮ್ಮ ಪಕ್ಷದ ಆಧಾರದ ಮೇಲೆ ಈ ತಿದ್ದುಪಡಿಗಳನ್ನು ತಂದಿದ್ದೇ ವಿನಃ ಇದನ್ನು ಯಾವ ಕುತಂತ್ರದಿಂದ ತಂದಿಲ್ಲ. ಆದ್ದರಿಂದ ತಾವು ದಯವಿಟ್ಟು ತಮ್ಮ ಮಾತನ್ನು ವಾಪಸ್ ತೆಗೆದುಕೊಳ್ಳಬೇಕೆಂದು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಆರ್. ಎನ್. ನಾಯಕ್ :– ನಾವು ಶಾಸಕರುಗಳು ಗೌರವವಿಲ್ಲದವರಿಂದ ನಮಗೆ ಗೌರವ ಕೊಡಿ ಎಂದು ಕೇಳುವುದಿಲ್ಲ. ಅವರಿಗೆ ಗೌರವವಿದ್ದರೆ ನಮಗೆ ಗೌರವವನ್ನು ಕೊಡುತ್ತಿದ್ದರು. ಏತಕ್ಕೆಂದರೆ ಅವರ ಹಗರಣಗಳೆಲ್ಲ ಬೆಳಕಿಗೆ ಬಂದಿವೆ. ತಾವು ಅದನ್ನೆಲ್ಲ ನೋಡಿದ್ದೀರಿ ಮಾನ್ಯ ಮಂತ್ರಿಗಳು ಅದನ್ನೆಲ್ಲಾ ಹೇಳಿದ್ದಾರೆ. ಆದ್ದರಿಂದ ಗೌರವವಿಲ್ಲದವರ ಹತ್ತಿರ ಗೌರವವನ್ನು ಕೊಡಿ ಎಂದು ಕೇಳತಕ್ಕಂಥ ಅವಶ್ಯಕತೆ ಇಲ್ಲ.

ಶ್ರೀ ಡಿ. ಬಿ. ಚಂದ್ರೇಗೌಡ :– ನಾನು ನಿನ್ನೆ ಮಾನ್ಯ ಮಂತ್ರಿಗಳು ಹೇಳಿದ ಭಾಷೆಯನ್ನು ಬಳಸಿದ್ದೇನೆ. ಅದು ನಿಮಗೆ ಇದೆ ಅಂತ ಆದರೆ ಅವರೇ ಉತ್ತರವನ್ನು ಹೇಳುತ್ತಾರೆ. ಅವರು ಬಳಸಿದಂಥ ಭಾಷೆಯನ್ನು ಹೇಳಿದ್ದೇನೆ. ಕಡತ ತೆಗೆಸಿ ನೋಡಿ, ಗೊತ್ತಾಗುತ್ತದೆ. ಆದ್ದರಿಂದ ಈಗ ನಾನು ಇಲ್ಲಿ ರಾಜಕೀಯವನ್ನು ಗುರುತಿಸು ತ್ತೇನೆ. ಈ ಶಾಸನ ನಿಜವಾಗಿಯೂ ಒಂದು ಒಳ್ಳೆಯ ಶಾಸನವಾಗಬೇಕಾದರೆ ಎಲ್ಲಾ ಹಂತದಲ್ಲಿಯೂ ಚರ್ಚೆ ಮಾಡಿ ಅಭಿಪ್ರಾಯದ ಮಂಥನ ಮಾಡಿ, ಈ ತಿದ್ದುಪಡಿಯ ಶಾಸನವನ್ನು ಇಲ್ಲಿ ಮಂಡನೆ ಮಾಡಬೇಕಾ-ಗಿತ್ತು. ಆದರೆ ರಾಜ್ಯದ ಮಾನ್ಯ ಮುಖ್ಯ ಮಂತ್ರಿಗಳು ಈ ಶಾಸನವನ್ನು ಮಂಡನೆ ಮಾಡತಕ್ಕಂಥ ಸಂದರ್ಭದಲ್ಲಿ ಒಂದು ಮಾತನ್ನು ಹೇಳಿದರು. ಏನೆಂದರೆ ನಾನು ಈ ಶಾಸನವನ್ನು ಓದಿಲ್ಲವೆಂದು ಅನು ಕಡತದಲ್ಲಿದೆ.

ಶ್ರೀ ಬಿ. ಬಸವಲಿಂಗಪ್ಪ :– ಆಗ.

ಶ್ರೀ ಡಿ. ಬಿ. ಚಂದ್ರೇಗೌಡ :– ಆಗಲೋ ಈಗಲೋ ಗೊತ್ತಿಲ್ಲ; ಅವರು ಓದಿಲ್ಲವೆಂದು ಹೇಳಿದರು. ಅಂದರೆ ಅರ್ಥಾತ್ ಮಂತ್ರಿಮಂಡಲದ ಸಭೆಯಲ್ಲಿ ಸಮೂಹವಾದಂಥ ಚರ್ಚೆ, ಸಾಮೂಹಿಕವಾದಂಥ ತೀರ್ಮಾನದ ಆದರ್ಶಗಳಿಂದ ಇದು ರಚನೆಯಾಗಿದೆ. ಇದಕ್ಕೆ ಅವರು ಹೇಳಿದಂಥ ಭಾಷೆಯನ್ನು ನಾವು ಅಳವಡಿಸುವುದಾದರೆ, ಈಗ ಅದು ಇಲ್ಲವೆಂದು ನಿರ್ಧಾರವಾಗುತ್ತದೆ. ಹಾಗೆ ಮಾನ್ಯ ಮುಖ್ಯಮಂತ್ರಿಗಳು ಓದದೇ ಇರತಕ್ಕಂಥ ಶಾಸನ ಈ ಕಾಂಗ್ರೆಸ್ ಪಕ್ಷದ ಶಾಸಕಾಂಗ ಪಕ್ಷದ ಸಭೆಯಲ್ಲಿ ಈ ಶಾಸನ ಚರ್ಚೆಯಾಗಿಲ್ಲ ಅನ್ನುವುದಕ್ಕೆ ಮತ್ತೆ ಏನೋ ತಿದ್ದುಪಡಿ ತರುತ್ತಿದ್ದೇವೆಂದು ಅವರು ಹೇಳುತ್ತಿದ್ದಾರೆ. ಇದು ಮತ್ತೊಂದು ಸಾಕ್ಷಿ ಇವರ ಪಕ್ಷದ ಅಧ್ಯಕ್ಷರು ಹೊರಗಡೆ ಏನು ಹೇಳುತ್ತಾರೆಂದರೆ; ಇದು ಪಕ್ಷದಲ್ಲಿ ತೀರ್ಮಾನ ಆಗಿಲ್ಲ ಎಂದು; ಇದು ಮಗದೊಂದು ಸಾಕ್ಷಿ.

ಶ್ರೀ ಬಿ. ಬಸವಲಿಂಗಪ್ಪ :– ಮಾನ್ಯ ಅಧ್ಯಕ್ಷರೇ, ಮಾನ್ಯ ವಿರೋಧ ಪಕ್ಷದ ನಾಯಕರು ಹೇಳತಕ್ಕಂಥ ಮಾತನ್ನು ಬಹಳ ದೀರ್ಘವಾಗಿ ಯೋಚನೆ ಮಾಡಿದ್ದೇನೆ. ಇದು ಎರಡನೆಯ ಸಾರಿ ತಾವು ಹೇಳುತ್ತಿರುವುದು. ಶ್ರೀಮಾನ್ ಬಂಗಾರಪ್ಪನವರು ಯಾವತ್ತು ಓದಿಲ್ಲವೆಂದು ಹೇಳಿದರು; ಅವರು ಹೇಳಿ 15 ದಿವಸಗಳಾಗಿರ ಬಹುದು, ಮೂರುಸಾರಿ ಕ್ಯಾಬಿನೇಟ್‌ನಲ್ಲಿ ಇದನ್ನು ಕೂಲಂಕುಷವಾಗಿ ಚರ್ಚೆ ಮಾಡಿದ್ದೇವೆ. ಪ್ರತಿಯೊಂದನ್ನು ಆಳವಾಗಿ ಚರ್ಚೆ ಮಾಡಿ ನಾವು ಈ ಒಂದು ತಿದ್ದುಪಡಿ ಮಸೂದೆಯನ್ನು ತಂದಿದ್ದೇವೆ. ಸಿ.ಎಲ್.ಪಿ.ಮೀಟಿಂಗ್ ನಲ್ಲಿ ನಾವು ಎಷ್ಟೋ ಸಾರಿ ಚರ್ಚೆ ಮಾಡಿದ್ದೇವೆ. ಸಣ್ಣ ಗುಂಪಿನಲ್ಲಿ ಚರ್ಚೆ ಮಾಡಿದ್ದೇವೆ, ದೊಡ್ಡ ಗುಂಪಿನಲ್ಲಿ ಚರ್ಚೆ ಮಾಡಿದ್ದೇವೆ. ವಿಶಾಲವಾದ ಗುಂಪಿನಲ್ಲಿ ಚರ್ಚೆ ಮಾಡಿದ್ದೇವೆ. ಹೀಗೆ ಹತ್ತಾರುಸಾರಿ ಮಾಡಿದ್ದೇವೆ. ನಮ್ಮ ಪಾರ್ಟಿಯ ಹಂತದಲ್ಲಿ ಕೂಡ ಹಲವಾರು ಸಾರಿ ಚರ್ಚೆ ಮಾಡಿದ್ದೇವೆ. ಶ್ರೀಮಾನ್ ಬಂಗಾರಪ್ಪನವರೇ ಈ ಒಂದು ಮಸೂದೆಯನ್ನು ತೆಗೆದುಕೊಂಡದು ಹೋಗಿ ಹೈಕಮ್ಯಾಂಡ್ ಜೊತೆಯಲ್ಲಿ ಮಾತನಾಡಿಕೊಂಡು

ಬಂದಿದ್ದಾರೆ. ಅದಕ್ಕೋಸ್ಕರ ದಯವಿಟ್ಟು ನಾವು ಏನೂ ಯೋಚನೆ ಮಾಡಿಲ್ಲ; ಮಾನ್ಯ ಬಂಗಾರಪ್ಪನವರಿಗೆ ಇದು ಗೊತ್ತಿಲ್ಲ, ಇದನ್ನು ಅವರು ಓದಿಲ್ಲವೆಂದು ಹೇಳುವ ಮಾತು ಇದೆಯಲ್ಲ, ಅದಕ್ಕೆ ನಾನು ಏನು ಹೇಳಬೇಕು ?

ಶ್ರೀ ಡಿ. ಬಿ. ಚಂದ್ರೇಗೌಡ :– ಏನು ಹೇಳಬೇಕೆನ್ನುವುದನ್ನು ಹೈಕಮ್ಯಾಂಡ್‌ಗೆ ಹೋಗಿ ಕೇಳಿ.ಶಾಸನಸಭೆ ಯಲ್ಲಿ ಅವರು ಹೇಳಿದ್ದನ್ನು ನಾನು ಉದಾಹರಿಸುತ್ತಿದ್ದೇನೆ. ಒಟ್ಟು ನಾನು ಇದನ್ನು ಹೇಳಿದ ಉದ್ದೇಶ ಒಳ್ಳೆಯ ಶಾಸನ ಏನಿದೆ ಅದನ್ನು ಕೆಡಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದೀರಲ್ಲ ಏತಕ್ಕೆ ಎಂದು ? ಅಮೂಲಾಗ್ರವಾದ ಚರ್ಚೆ ನಡೆದಿದ್ದರೆ ಶಾಸಕಾಂಗ ಪಕ್ಷದಲ್ಲಿ ನಡೆದ ಚರ್ಚೆ ಇಷ್ಟೊಂದು ದೀರ್ಘವಾಗಿ ಪತ್ರಿಕೆಗಳಲ್ಲಿ ಬರುತ್ತಿರಲಿಲ್ಲ. ಬಹುಶಃ 27 ರಂದು ನಾವು ಧರಣಿ ಕೂರುವ ಪ್ರಯತ್ನ ಮಾಡದಿದ್ದರೆ ನಿಮ್ಮ ಸಂಖ್ಯೆಯ ಆಧಾರದಮೇಲೆ ಅವತ್ತೆ ಈ ಮಸೂದೆ ಪಾಸಾಗುತ್ತಿತ್ತು. 76 ತಿದ್ದುಪಡಿಗಳನ್ನು ಏನು ತಂದಿರಿ ಅವು ಅಂದೇ ಪಾಸಾಗುತ್ತಿದ್ದವು. ಇದು ನಿರ್ವಿವಾದವಾದ ಮಾತು. ಅದಾದಮೇಲೆ ತಿದ್ದುಪಡಿ ಮೇಲೆ ತಿದ್ದುಪಡಿ ತರತಕ್ಕ ಪ್ರಯತ್ನ ಮಾಡಿದ್ದೀರಿ. ನಮಗೆ ಮಾನ್ಯ ಅಧ್ಯಕ್ಷರ ಮೂಲಕ ಆ ತಿದ್ದುಪಡಿಗಳು ಏನು ಕೈಸೇರಿವೆ, ಅವು ಮುಂದೆ ಸಕಾಲಿಕವಾಗಿ ಮಂಡನೆ ಆಗುವುದಿದ್ದರೆ, ಇದಕ್ಕಿಂತ ದೊಡ್ಡ ಸಾಕ್ಷಿ ಬೇರೇನು ಇಲ್ಲ. ಇದೇ ಅತ್ಯಂತ ದೊಡ್ಡ ಸಾಕ್ಷಿ.

1–00 ಪಿ. ಎಂ.

ಶ್ರೀ ಬಿ. ಬಸವಲಿಂಗಪ್ಪ :– ಕ್ಯಾಬಿನೆಟ್‌ನಲ್ಲಿ ಏನು ತರ್ಕ ಆಯಿತು, 3 ಸಾರಿ ನಾವು ಚರ್ಚೆ ಮಾಡಿದೆವು ಎಂದು ಹೇಳಿದೆ ಆ ತಾರೀಖನ್ನು ಹೇಳಿರಲಿಲ್ಲ. 16–11–90, 24–11–90 ಮತ್ತು 17–12–90 ರಂದು ಕ್ಯಾಬಿನೆಟ್ ಮೀಟಿಂಗ್‌ನಲ್ಲಿ ಚರ್ಚೆ ಮಾಡಿದ್ದೇವೆ.

ಶ್ರೀ ಎಂ. ವಿ. ವೆಂಕಟಪ್ಪ :– ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯಿತಿಗೆ ಸಂಬಂಧಪಟ್ಟ ಮಸೂದೆಯ ವಿಷಯಕ್ಕೆ ಸಂಬಂಧಪಟ್ಟ ಹಾಗೆ ನಾನೇ ಇನ್‌ಚಾರ್ಜ್ ಸೆಕ್ರೆಟರಿ ಆಗಿದ್ದೆ. ನನ್ನ ಒಂದು ಅಧ್ಯಕ್ಷತೆ ಯಲ್ಲಿ ಸಮಿತಿ ಮಾಡಿ ನಾವು ಒಂದು ರಿಪೋರ್ಟ್ ಕೊಟ್ಟಿದ್ದೇವೆ. ಇದರ ಜೊತೆಗೆ ಹುಚ್ಚಮಾಸ್ತಿಗೌಡರ ಕಮಿಟಿ ಎಂದು ಮಾಡಿ, ಅವರೂ ರಿಪೋರ್ಟ್‌ನ್ನು ಕೊಟ್ಟಿದ್ದಾರೆ. ಇದಲ್ಲದೆ ನಮ್ಮ ಜಿಲ್ಲಾ ಪರಿಷತ್ತಿನ ಸದಸ್ಯರು, ಮಂಡಲದ ಪ್ರಧಾನರು ನಮ್ಮ ವಿರೋಧ ಪಕ್ಷದ ನಾಯಕರು ಮತ್ತು ಜಿಲ್ಲಾ ಪರಿಷತ್ತಿನ ಛೇರ್ಮನ್ನರು ಎಲ್ಲಿದ್ದಾರೆ, ಅವರೆಲ್ಲರನ್ನು ಕರೆಯಿಸಿ ದೀರ್ಘವಾಗಿ ಸಮಾಲೋಚನೆ ಮಾಡಿ ಕ್ಲಾಜ್ ಬೈ ಕ್ಲಾಜ್ ಪರಿಶೀಲನೆ ಮಾಡಿದ್ದೇವೆ. ಇದರ ಜೊತೆಗೆ 27 ಜನರ ಒಂದು ಕಮಿಟಿಯನ್ನು ಶಾಸಕಾಂಗ ಪಕ್ಷದಲ್ಲಿ ಏನು ಮಾಡಿದ್ದೇವೆ, ಅವರು ಸುಮಾರು 3 ದಿನ ಕುಳಿತು ವಿವರವಾಗಿ ಪರಿಶೀಲನೆ ಮಾಡಿದ್ದಾರೆ. ಮೂರು ದಿನ ಕುಳಿತು ಪ್ರತಿಯೊಂದನ್ನು ಕ್ಲಾಜ್ ಬೈ ಕ್ಲಾಜ್ ಪರಿಶೀಲನೆ ಮಾಡಿಕೊಟ್ಟಿದ್ದಾರೆ. ಆದರೆ ಈಗ ತಾವು ಏನು ಚರ್ಚೆ ಮಾಡಲಿಲ್ಲವೆಂದು ಹೇಳಿದಿರಿ ಅದು ಸತ್ಯಕ್ಕೆ ದೂರವಾದ ಮಾತು. ನಾವು ದೀರ್ಘವಾಗಿ ಚರ್ಚೆ ಮಾಡಿದ ನಂತರವೇ ಸಭೆಯ ಮುಂದೆ ತಂದಿದ್ದಾರೆ.

ಶ್ರೀ ಎಸ್. ಹೆಚ್. ಕೌಜಲಗಿ :– ಮುಖ್ಯ ಮಂತ್ರಿಗಳು ನಾನು ತಿದ್ದುಪಡಿ ಮಸೂದೆಯನ್ನು ಓದಿಲ್ಲ ವೆಂದು ಹೇಳಿದರು. ಅಂದಾಗ ಅದರ ಅರ್ಥ ಏನಾಯಿತು.

(ಗೊಂದಲ)

ಶ್ರೀ ಡಿ. ಬಿ. ಚಂದ್ರೇಗೌಡ :– ನಿಮ್ಮ ಸ್ಥಿತಿ ನನಗೆ ಅರ್ಥವಾಗುತ್ತದೆ. ತಾವು ಕೂಡ ಅಧ್ಯಕ್ಷರಾಗಿ ಕೆಲಸ ಮಾಡಿರುವವರು. ತಾವು ಹೆಚ್ಚು ಅನುಭವ ಇರತಕ್ಕವರು. ನಾನು ವಸ್ತು ಸ್ಥಿತಿಯನ್ನು ಹೇಳುತ್ತಿದ್ದೇನೆ. ಇಲ್ಲ ಅಂದರೆ ಇಲ್ಲ 16–11–90, 24–11–90 ಮತ್ತು 17–12–90 ರಂದು ಮಾನ್ಯ ಮಂತ್ರಿಗಳು ಹೇಳಿದ ಹಾಗೆ ಕ್ಯಾಬಿನೆಟ್‌ನಲ್ಲಿ ಚರ್ಚೆ ಮಾಡಿದ್ದಾರೆ. ಅವರು ಬಿಲ್‌ನ್ನು ಇಂಟ್ರಡ್ಯೂಸ್ ಮಾಡಿದ್ದು 27–11–90 ರಂದು. ಬಿಲ್ಲನ್ನು ಇಂಟ್ರಡ್ಯೂಸ್ ಮಾಡಿದ ಮೇಲೆ 17–12–90 ರಂದು ಮತ್ತೆ ಕ್ಯಾಬಿನೆಟ್ ಮೀಟಿಂಗ್ ಸೇರುತ್ತದೆ. ಮಸೂದೆಯನ್ನು ಚರ್ಚೆಗೆ ತರುವುದಕ್ಕೆ ಮುಂಚೆ ತೀರ್ಮಾನವಾಗಿದೆ ಕ್ಯಾಬಿನೆಟ್‌ನಲ್ಲಿ. ಪುನಃ 17–12–90 ರಂದು ಏತಕ್ಕೆ ಸೇರಿದಿರಿ ? ಪುನಃ ನಾವು ಬುದ್ಧಿ ಹೇಳತಕ್ಕ ಕೆಲಸ ಮಾಡಿದ್ದರಿಂದ ಸೇರಿದಿರಿ ? ಈ ಮಸೂದೆ ಪರಿಪೂರ್ಣವಾಗಿ ಚರ್ಚೆಯಾಗಿದ್ದರೆ ನೀವೇ ಹೇಳಿದ ಹಾಗೆ ಪುನಃ 17–12–90 ರಂದು ಸಂಪುಟದ ಸಭೆ ಸೇರಿ ಇದನ್ನು ಚರ್ಚೆ ಮಾಡತಕ್ಕ ಅವಶ್ಯಕತೆ ಏನಿತ್ತು ?

ಶ್ರೀ ಎಂ. ವೀರಪ್ಪ ಮೊಯಿಲಿ :– ಏಕೋ ನಮ್ಮ ವಿರೋಧ ಪಕ್ಷದ ನಾಯಕರು ಬಹಳ ಅಂಕಿ ಸಂಖ್ಯೆ- ಯನ್ನಿಟ್ಟುಕೊಂಡು ಬಹಳ ಕಟ್ಟುನಿಟ್ಟಾಗಿ ಎಷ್ಟು ಸಾರಿ ಕ್ಯಾಬಿನೆಟ್ ನಲ್ಲಿ ಚರ್ಚೆ ಆಯಿತು, ಯಾವ ವೇದಿಕೆಯಲ್ಲಿ ಚರ್ಚೆಯಾಯಿತು, ಮುಖ್ಯಮಂತ್ರಿಗಳು ಮಂತ್ರಿಗಳ ಜೊತೆಯಲ್ಲಿ ಚರ್ಚೆ ಮಾಡಿದರೇ ಎಂದು ವಿವರ ಕೇಳು-

ತ್ತಿದ್ದಾರೆ. ತಾವು ಆಲೋಚಿಸಿ ಜಿಲ್ಲಾ ಪರಿಷತ್ತಿನ ಒರಿಜನಲ್ ಬಿಲ್ಲನ್ನು ತಮ್ಮ ಪಕ್ಷ ಅಧಿಕಾರದಲ್ಲಿದ್ದಾಗ ತಂದಿರಿ. ಆಗನಾವು ಆಕಡೆಯಿಂದ ಸಹಕಾರ ಮಾಡಿದೆವು ಆಗ ಕ್ಯಾಬಿನೆಟನಲ್ಲಿ ಎಷ್ಟು ಘಂಟೆ, ಎಷ್ಟು ಸಾರಿ ಚರ್ಚೆ ಆಯಿತು ಎಂದು ತಾವು ನಮಗೆ ಹೇಳಿ. ನಮ್ಮದು ಎಷ್ಟು ಘಂಟೆ ಚರ್ಚೆಯಾಯಿತು, ಎಷ್ಟು ದಿವಸ ಚರ್ಚೆ ಆಯಿತು, ಎಷ್ಟು ಡೆಲಿಬರೇಷನ್ಸ್ ಆಯಿತು, ಡೆಲಿಬರೇಷನ್ಸ್ ಆದಮೇಲೆ ಕೂಡ ಜನರ ಬೇಡಿಕೆಗೆ ಸ್ಪಂದಿಸಿ, ಪಕ್ಷದ ವಿಚಾರಗಳಿಗೆ ಸ್ಪಂದಿಸಿ ಯಾವ ರೀತಿಯಲ್ಲಿ ಎಷ್ಟೆಷ್ಟು ಮಟ್ಟದಲ್ಲಿ ಅದನ್ನು ಚರ್ಚೆ ಮಾಡಿದ್ದೇವೆ ಎಂದು ದಯ-ಮಾಡಿ ಹೋಲಿಕೆ ಮಾಡಿದರೆ ಈ ವಾದ ಹುಟ್ಟುತ್ತಾ ಇರಲಿಲ್ಲ. ತಮ್ಮ ಕ್ಯಾಬಿನೆಟ್‌ನಲ್ಲಿ ಎಷ್ಟು ದಿವಸ ಎಷ್ಟು ಘಂಟೆ ಚರ್ಚೆಯಾಯಿತು ಆಲೋಚನೆ ಮಾಡಿ. ಈ ವಿವರ ಬಹಳ ತಾಂತ್ರಿಕವಾಗುತ್ತದೆ. ಯಾ ವ ಪಕ್ಷ ಕೂಡ ಅಥವಾ ಯಾವ ಸರ್ಕಾರ ಕೂಡ ಕ್ಯಾಬಿನೆಟ್‌ನಲ್ಲಿ ಇದನ್ನು ಚರ್ಚೆ ಮಾಡುತ್ತದೆ. ಅಥವಾ ಬೇರೆ ಬೇರೆ ಹಂತದಲ್ಲಿ ಚರ್ಚೆ ಮಾಡುತ್ತದೆ. ಚರ್ಚೆಯಾದ ಮೇಲೂ ಪಕ್ಷದಲ್ಲಿ ಮತ್ತು ಕ್ಯಾಬಿನೆಟ್‌ನಲ್ಲಿ ಬದಲಾವಣೆ ಯಾಗಬೇಕು ಎಂದು ಕಂಡುಬಂದರೆ ಪುನಃ ಕ್ಯಾಬಿನೆಟ್‌ನಲ್ಲಿ ಚರ್ಚೆ ಮಾಡುತ್ತೇವೆ. ನಾನಾ ಹಂತದಲ್ಲಿ ನಾವು ಚರ್ಚೆ ಮಾಡಿದ್ದೇವೆ. ಎಲ್ಲಾ ಚರ್ಚೆಗಳ ಎಲ್ಲಾ ಒಂದು ವಿಶ್ಲೇಷಣೆಗಳ ಫಲವಾಗಿ ಪುನಃ ಇವತ್ತು ತಿದ್ದುಪಡಿ ತಂದಿದ್ದೇವೆ. ಜನಗಳ ಹಿತಕ್ಕಾಗಿ ಅಥವಾ ಜನತಂತ್ರವನ್ನು ಬಲಪಡಿಸುವುದಕ್ಕೆ ನಾವು ಬೇಕಾದರೆ...ಸನ್ಮಾನ್ಯ ಹುಚ್ಚಮಾಸ್ತಿಗೌಡರು ಕಂದಾಯ ಮಂತ್ರಿಗಳಾಗಿರುವಾಗ ಒಂದು ಹೇಳಿಕೆ ಕೊಟ್ಟರು. ಭೂ ಮಸೂದೆ ಕಾನೂನು
ತರುವಾಗ ಏನು ಹೇಳಿದರು
ಮೆಂಟಾದರೂ ನಾವು ತರುತ್ತೇ
ಜನರ ಅಧಿಕಾರ ವಿಕೇಂದ್ರೀಕರ
ತರಲು ಸಿದ್ಧರಿದ್ದೇವೆ. ಆದ್ದ
ಣ್ಣುಕೆಂಬುದು ಗೊತ್ತಿಲ್ಲ.

ಶ್ರೀ ಡಿ. ಬಿ. ಚಂದ್ರೇಗೌ
ಮಂತ್ರಿಯಾಗಿ ಕೆಲಸ ಮಾಡಿದ್ದ
ತಪ್ಪಿಹೋಗುತ್ತಿದೆ. ನಾನು ಇದ
ಗುಡ್ ಲಾ ದಲ್ಲಿ ಸಾಕಷ್ಟು ಡೇ
ಮತ್ತೆ ತಿದ್ದುಪಡಿಗೆ ತಿದ್ದುಪಡಿ
ತಿದ್ದುಪಡಿ ತರೋಣ. ಅದಕ್ಕೇ
ಸರಿಪಡಿಸುವುದಕ್ಕೆ ಜಂಟಿ ಸಲಹ
ನನ್ನ ಸಲಹೆಯನ್ನು ಆ ಕಾರಣ
ಮಾತು. ಆದ್ದರಿಂದ ಮಾನ್ಯ
ತಿದ್ದುಪಡಿ ಬಂದಿದೆ. ಹೀಗೆ ಚರ್
ಎಲ್ಲಿಗೆ ಮುಗಿಯಬಹುದು ?
ಸರ್ಕಾರದ ಆಲೋಚನೆ ಏನು
ಒಂದು ಉತ್ತಮವಾದ ಗ್ರಾಸ
ದುರುದ್ದೇಶದಿಂದ ಕೂಡಿರತಕ್ಕ
ಬಂದ ದಿನದಿಂದ ಉಪಾಧ್ಯಾಯ
ಕಿತ್ತುಕೊಳ್ಳತಕ್ಕ ಸಂದರ್ಭ ಇರ
ನಮ್ಮ ಮಾತನ್ನು ಕೇಳಲಿಲ್ಲ ಎ
ಹಂತದಲ್ಲಿ ಜಿಲ್ಲಾ ಪರಿಷತ್ತಿನ ವಿಕೆ
ಇದ್ದರು. ಅಂತಿಮವಾಗಿ ಈಗ
ಬೇಕು. ಒಂದು ಮಸೂದೆಯ

ಶ್ರೀ ಎನ್. ಹುಚ್ಚಮಾ
ಪಂಚಾಯಿತಿಗಳ ರಚನೆ ವಿಷಯ
ರಾಷ್ಟ್ರದ ಅನೇಕ ರಾಜ್ಯಗಳಲ್ಲಿ ಇ
ಬೇಕೋ ಅದನ್ನು ಅಳವಡಿಸತಕ್
ನಾಯಕರು. ಆ ದಿವಸ ಅವರ
ಆಗುವವರೆಗೆ ಆ ಪಕ್ಷವೇ ಅಧಿಕಾ
ಆಗುವ ರೀತಿಯಲ್ಲಿ ನಡವಳಿಕೆ ನ

ಇಲ್ಲದೇ ಇದ್ದುದರಿಂದ ನಾವು ಸುಮ್ಮನಿರಬೇಕಾಯಿತು. ಕಳೆದ ಮೂರುವರೆ ವರ್ಷಗಳ ಅನುಭವದಲ್ಲಿ ಈ ಕಾನೂನಿನಲ್ಲಿ ಏನು ತಿದ್ದುಪಡಿ ಮಾಡಿದರೆ ಹಳ್ಳಿಗಾಡಿನ ಜನರಿಗೆ ನೇರವಾಗಿ ಸಹಾಯ ಸಿಗುತ್ತದೆ. ಅವರ ನಿತ್ಯ ಜೀವನದಲ್ಲಿ ಏನೇನು ಸೌಕರ್ಯಗಳನ್ನು ಈ ಕಾನೂನಿನ ಮೂಲಕ ಕಲ್ಪಿಸಬಹುದು ಎಂದು ಸ್ಪಷ್ಟವಾಗಿ ನಾವು ಅನುಭವಿಸಿ ಈ ಕಾನೂನಿನಲ್ಲಿ ಇರುವ ದೋಷಗಳನ್ನು ಸರಿ ಮಾಡುವುದಕ್ಕೆ ಈ ಪ್ರಯತ್ನ ಕೈಗೊಂಡಿದ್ದೇವೆಯೇ ಹೊರತು, ಅವರು ಮಾಡಿದ್ದಕ್ಕೆ ನಾವು ಬದಲಾವಣೆ ಮಾಡಬೇಕೆಂಬ ಒಂದು ವಕ್ರ ದೃಷ್ಟಿಯಿಂದ ನಾವು ಮಾಡಿದ ಉದ್ದೇಶ ಅಲ್ಲ. ಏಕೆಂದರೆ ಯಾವುದೇ ಒಂದು ಅಂಶ ತೆಗೆದುಕೊಳ್ಳಿ. ಪ್ರತಿದಿವಸ ನಡೆಯತಕ್ಕ ವ್ಯವಹಾರದಲ್ಲಿ ಗ್ರಾಮಾಂತರ ಪ್ರದೇಶಕ್ಕೆ ಏನು ಸಹಾಯ ಆಯಿತು; ಆಹಾರ ಧಾನ್ಯಗಳ ಹಂಚಿಕೆ ವಿಷಯದಲ್ಲಿ ಏನು ದೋಷ ಇತ್ತು, ಜಿಲ್ಲಾಪರಿಷತ್ತಿನಲ್ಲಿ ಮೂರನೇ ಎರಡು ಭಾಗ ಬಹುಮತ ಇದ್ದರೆ ಮಾತ್ರ ಅವರನ್ನು ತೆಗೆಯಬಹುದು ಎಂದು ಇದ್ದುದರಿಂದ, ಅವರ ಆಡಳಿತವನ್ನು ಕೈತಪ್ಪಿಸಬೇಕಾದುದು ಅತ್ಯವಶ್ಯಕ ಕಂಡರೂ ಕೂಡಾ ಅದನ್ನು ಮಾಡುವುದಕ್ಕೆ ನಮಗೆ ಅವಕಾಶವಿಲ್ಲವೆಂದು ಇದ್ದು, ಇದನ್ನೆಲ್ಲಾ ನೋಡಿ ನಮ್ಮ ಪಕ್ಷ ಬದಲಾವಣೆ ಮಾಡಲು ಸರ್ವ ಪ್ರಯತ್ನವನ್ನು ಮಾಡಿದೆ. ಈ ಬಗ್ಗೆ ಅನೇಕ ಹಂತದಲ್ಲಿ ಇದನ್ನು ಚರ್ಚೆ ಮಾಡಿ, ಕೇಂದ್ರದ ನಮ್ಮ ಪಕ್ಷದ ಮುಖ್ಯಸ್ಥರ ಜೊತೆ ಆಲೋಚನೆ ಮಾಡಿ, ಇದನ್ನು ಅವಶ್ಯಕವಾಗಿ ಮಾಡಲೇಬೇಕೆಂದುದಕ್ಕೋಸ್ಕರ 3–4 ಸಾರಿ ಪಕ್ಷದಲ್ಲಿ, ಮಂತ್ರಿಮಂಡಲದಲ್ಲಿ ಚರ್ಚೆ ಮಾಡಿ, ಈ ತಿದ್ದುಪಡಿ ಅವಶ್ಯಕ ಎಂದು ಮನಗಂಡು ಮಾಡಿದ್ದೇವೆಯೇ ಹೊರತು ಇವರು ಮಾಡಿದ್ದನ್ನು ಬದಲಾವಣೆ ಮಾಡುವುದೇ ಸರಿ ಎನ್ನುವ ದೃಷ್ಟಿಯಿಂದ ಅಲ್ಲ. ಅದರ ಜೊತೆಗೆ ಹಿಂದೆ ನಮ್ಮ ರಾಜ್ಯ ಮೈಸೂರು ಎಂದು ಹೆಸರು ಇದ್ದಾಗಲೂ ಕೂಡಾ ನಮ್ಮಲ್ಲಿ ಜಿಲ್ಲಾಬೋರ್ಡುಗಳು ಎಂದು ಇತ್ತು. ತಾಲ್ಲೂಕು ಕಮಿಟಿಗಳಿದ್ದವು ಗ್ರಾಮ ಪಂಚಾಯಿತಿಗಳು ಇದ್ದವು. ಈ ಹಂತದಲ್ಲೂ ಕೂಡಾ ಕೆಲಸ ಮಾಡಿದ ಅನುಭವ ನಮ್ಮ ಪಕ್ಷದ ಅನೇಕ ಮುಖಂಡರಿಗೆ ಚೆನ್ನಾಗಿ ಗೊತ್ತಿದೆ. ಅದಕ್ಕೆ ಆ ಕಾನೂನಿನಲ್ಲಿ, ನಮ್ಮ ಎದುರು ಪಕ್ಷದವರು ಜನತಾದಳದ ಸರ್ಕಾರ ತಂದ ಕಾನೂನಿನಲ್ಲಿ ಈ ಎರಡೂ ಅನುಭವವನ್ನು ಸೇರಿಸಿ ನಮ್ಮ ಜನರಿಗೆ ಹಳ್ಳಿಗಾಡಿನ ಜನರಿಗೆ ಏನು ಅವಶ್ಯಕವಾದ ಅನುಕೂಲಗಳನ್ನು ಮಾಡುವುದಕ್ಕೆ ಏನೇನು ತಿದ್ದುಪಡಿ ಬೇಕೋ ಆ ದೃಷ್ಟಿಯಿಂದ ಮಾಡಿದ್ದೇವೆಯೇ ಹೊರತು ಅವರ ಪಕ್ಷದ ಮೇಲಿನ ದ್ವೇಷದಿಂದ ಅಥವಾ ಅವರು ಮಾಡಿದ್ದೆಲ್ಲಾ ತಪ್ಪು ಇಲ್ಲವೇ ನಾವು ಮಾಡುವುದು ಸರಿ ಎಂದು ಮಾಡಿದ್ದು ಅಲ್ಲ ಎಂದು ವಿನಯಪೂರ್ವಕವಾಗಿ ನಾನು ಎದುರು ಪಕ್ಷದ ನಾಯಕರಿಗೆ ಹೇಳುವುದಕ್ಕೆ ಇಷ್ಟ ಪಡುತ್ತೇನೆ.

ಶ್ರೀ ಡಿ. ಬಿ. ಚಂದ್ರೇಗೌಡ :– ಮಾನ್ಯ ಅಧ್ಯಕ್ಷರೇ, ಎಸ್. ಹುಚ್ಚಮಾಸ್ತಿಗೌಡರು ಎಂದರೆ ಇವರೇ ಎಂದು ನಾನು ತಿಳಿದುಕೊಂಡಿದ್ದೇನೆ. ಈಗ ನನಗೆ ಅನುಮಾನ ಬಂತು. ಏಕೆಂದರೆ ಈ ಶಾಸನ ಇಲ್ಲಿ ಮಂಡನೆಯಾದಾಗ ಇದನ್ನು ನಾವು ಜಂಟೀ ಸಲಹಾ ಸಮಿತಿಗೆ ಕಳುಹಿಸಿದ್ದೆವು. ಇಷ್ಟು ಹೊತ್ತು ಕತೆ ಹೇಳಿದರಲ್ಲ, ಅದರ ಆಧಾರದ ಮೇಲೆ ಬಹಳ ಅನುಭವಿಗಳೂ, ಹಿರಿಯರೂ ಆದ ಎಸ್. ಹುಚ್ಚಮಾಸ್ತಿಗೌಡರು ಬಹಳ ಉತ್ತಮವಾದ ಮಸೂದೆಯನ್ನು ಕೊಡುತ್ತಾರೆ ಎಂದು ಹೇಳಿ ಅವರನ್ನೂ ಕೂಡಾ ಜಂಟೀ ಸಲಹಾ ಸಮಿತಿಯ ಸದಸ್ಯರನ್ನಾಗಿ ನೇಮಿಸಲಾಗಿತ್ತು. ಅವರು ಆಗ ಏನು ಸಲಹೆ ಕೊಟ್ಟಿದ್ದಾರೆ ಅಷ್ಟೂ ಸಲಹೆಗಳನ್ನು ಈ ಶಾಸನದಲ್ಲಿ ಅಳವಡಿಸಿ ಈ ಶಾಸನಸಭೆಯಲ್ಲಿ ಅದನ್ನು ಮಂಜೂರು ಮಾಡಿದಾಗ unanimously it was adopted and all the suggestions of Mr. Huchamasti Gowda were taken serious not of it under this report. This is numqer one, ಎರಡನೆಯದು, ನಾಲ್ಕು ವರ್ಷಗಳ ಅನುಭವದ ಮೇಲೆ ನಿಮಗೆ ಏನು ಸರಿ ಎಂದು ಕಾಣುತ್ತದಲ್ಲ, ಆ ಅನುಭವ ಆಗ ಜಂಟೀ ಸಲಹಾ ಸಮಿತಿಯಲ್ಲಿ ಕೊಟ್ಟಾಗ ಇಲ್ಲದೆ ಇದ್ದ ಅನುಭವ ಈಗ ಬಂದಿರಬಹುದು. ಇಲ್ಲವೆಂದು ನಾನು ಹೇಳುವುದಿಲ್ಲ. ನಾವೂ ಕೆಲವು ತಪ್ಪುಗಳನ್ನು ಮಾಡಿದ್ದೇವೆ. ಎಲ್ಲಿ ನಾವು ತಪ್ಪು ಮಾಡಿದ್ದೇವೆ ಎಂಬುದು ನಮಗೂ ಗೊತ್ತಾಗುತ್ತದೆ. ಹಿಂದೆ ಕರಡು ಮಸೂದೆ ಮಂಡನೆ ಆದಾಗ ಶಾಸಕರಿಗೆ ಜಿಲ್ಲಾ ಪರಿಷತ್ತುಗಳಲ್ಲಿ ಮತ ಹಾಕತಕ್ಕ, ಸ್ಪರ್ಧೆ ಮಾಡತಕ್ಕ ಅಧಿಕಾರ ಇರಲಿಲ್ಲ; ಅಧ್ಯಕ್ಷ ಸ್ಥಾನಕ್ಕೆ. ಜಂಟಿ ಸಲಹಾ ಸಮಿತಿಯೊಳಗೆ ಇದರ ಅಭಿಪ್ರಾಯದಂತೆ ಹಾಕಿದ್ದೇವೆ. ಈಗ ಅದು ತಪ್ಪು ಎಂದು ಗೊತ್ತಾ-ಗಿದೆ. ಏಕೆಂದರೆ ಪ್ರತಿಸರಿ ಶಾಸನ ಸಭೆಯ ಸ್ಟ್ರಕ್ಚರ್ ಬದಲಾವಣೆ ಆದಂತೆ ಜಿಲ್ಲಾಪರಿಷತ್‌ಗಳೂ ಬದಲಾವಣೆ ಆಗುತ್ತವೆ. ಇದು ತಪ್ಪು ಎಂದು ಗೊತ್ತಾಗುತ್ತದೆ. ಇಲ್ಲ ಎಂದು ನಾನು ಹೇಳುವುದಿಲ್ಲ. ಈಗ ಮಾನ್ಯ ಹುಚ್ಚಮಾಸ್ತಿಗೌಡರು ಏನು ಹೇಳಿದ್ದಾರೆ...

ಅಧ್ಯಕ್ಷರು :– ನಿಮಗೆ ಕೆಲವು ಗೊತ್ತಾಗಿದೆ. ಅವರಿಗೆ ಕೆಲವು ಗೊತ್ತಾಗಿದೆ.

ಶ್ರೀ ಡಿ. ಬಿ. ಚಂದ್ರೇಗೌಡ :– ಗೌಡರಿಗೆ ಗೊತ್ತಾದುದು ಮತ್ತು ನನಗೂ ಗೊತ್ತಾದುದಕ್ಕೆ ಮಧ್ಯೆ ಇರತಕ್ಕಂತಹ ರಾಜಕೀಯ ಭಿನ್ನಾಭಿಪ್ರಾಯಗಳನ್ನು ನೋಡಬಾರದು ಎನ್ನುವ ದೃಷ್ಟಿಯಿಂದ ಒಂದು ಮೌಲ್ಯ ಮಾಪನ ಸಮಿತಿಯನ್ನು ಮಾಡಿದ್ದೇವೆ. ಆ ಸಮಿತಿ ಏನು ಮಾಡಿದೆಯೆನ್ನುವುದನ್ನು ನೋಡೋಣ. ಇದು ಚಂದ್ರೇಗೌಡರ ಪರವೂ ಇಲ್ಲ, ಹುಚ್ಚಮಾಸ್ತಿಗೌಡರ ಪರವೂ ಇಲ್ಲ. ಕಾಂಗ್ರೆಸ್ ಪಕ್ಷದವರ, ಜನತಾದಳ,

ವಾಟಾಳ್ ನಾಗರಾಜ್‌ರವರ ಪಕ್ಷದ ಪರವಾಗಿಯೂ ಇಲ್ಲ. ನೀವು ತಿದ್ದುಪಡಿಯನ್ನು ತರುವುದಕ್ಕೆ ಇಂತಹವು ಆಧಾರ ಆಗ ಬೇಕೇ ಹೊರತು ನಿಮ್ಮ ವೈಯಕ್ತಿಕ ರಾಜಕೀಯ ಒಲವು, ನಿಲುವುಗಳು ಅಲ್ಲ. ಈ ಮೌಲ್ಯಮಾಪನ ಸಮಿತಿ ಏನೇನು ರೆಕಮಂಡ್ ಮಾಡಿದ್ದಾರೆನ್ನುವುದನ್ನು ಈಗ ಮಾನ್ಯ ಹಿರಿಯ ಸದಸ್ಯರು ಕೆಲವು ಮಾತುಗಳನ್ನು ಹೇಳಿದ್ದರಿಂದ ನಾನು ಹೇಳಬೇಕಾಗುತ್ತದೆ. ಅಲ್ಲಲ್ಲಿ ನಾನು ಗುರುತು ಹಾಕಿಕೊಂಡಿದ್ದೇನೆ. ಅದನ್ನು ವಿವರವಾಗಿ ಹೇಳುತ್ತೇನೆ. ಆದರೆ ಒಂದನ್ನು ಮಾತ್ರ ಈಗ ತಕ್ಷಣಕ್ಕೆ ಹೇಳತಕ್ಕಂಥಾದ್ದು ಇದೆ. ಸ್ಪಷ್ಟವಾಗಿ ನೀವು ಏನನ್ನು ಆಲೋಚನೆ ಮಾಡಿದಿರಿ ಅದೇ ಶಾಸನವಾಯಿತು. ಒಂದನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಈ ಶಾಸನ ಸಭೆಯಲ್ಲಿ ಅಂದಿನ ಜನತಾ ಪಕ್ಷ ಈ ಮಸೂದೆಯನ್ನು ಮಂಡನೆ ಮಾಡಿದಾಗ ಆ ಪಕ್ಷಕ್ಕೆ 224 ಸದಸ್ಯರ ಪೈಕಿ 96 ಜನ ಶಾಸಕರು ಜನತಾ ಪಕ್ಷಕ್ಕೆ ಸೇರಿದವರಾಗಿದ್ದರು. ಈ 96 ಜನ ಶಾಸಕರು ಮಾತ್ರ ಆಗ ಜನತಾ ಪಕ್ಷ-ದವರಾಗಿದ್ದರು. ಅವರು ನಿಮ್ಮ ಸಹಕಾರವಿಲ್ಲದೆ ನಿಮ್ಮ ಅಭಿಪ್ರಾಯ ಇಲ್ಲದೆ ನಿಮ್ಮ ಚಿಂತನೆಗೆ ಎಡೆಕೊಡದೇ ಇದ್ದಿದ್ದರೆ ಇದು ಮಸೂದೆಯಾಗುವುದಕ್ಕೆ ಅಂದು ಸಾಧ್ಯವಿರಲಿಲ್ಲ. ಇದರ ಅರ್ಥ 96 ಜನರು ಮಾತ್ರ ಸೇರಿ ಈ ಶಾಸನವನ್ನು ಮಾಡಲಿಲ್ಲ, ಇಡೀ ವಿಧಾನಸಭೆ ಚರ್ಚೆ ಮಾಡಿತು; ಇದು ಸಾಲದೆಂದು ಜಂಟಿ ಸಲಹಾ ಸಮಿತಿಯನ್ನು ಮಾಡಿದ್ದರು. ಅದಕ್ಕೆ ತಾವೂ ಕೂಡ ಸದಸ್ಯರಾಗಿದ್ದಿರಿ. ಅಲ್ಲದೆ ಬೇರೆ ಬೇರೆ ರಾಜ್ಯಗಳಿಗೆ ಹೋಗಿ ಬಂದು ನಿಮ್ಮ ಅನುಭವದ ಮೂಸೆಯಿಂದ ಆಗರ್ಭದಿಂದ ಹೊರಬಂದಂತಹ ಶಿಶುವೇ ಈ ಒಂದು ಶಾಸನ. ಈ ಶಾಸನವು 4 ವರ್ಷಗಳಲ್ಲಿಯೇ ನಿಮಗೆ ಹೆಚ್ಚೂ ಕಡಿಮೆ ಬೇಡವೆಂದು ಹೇಳಿದರೆ ಹೇಗೆ ? ಈಗ ಅವರು ಹೇಳಿದ ಮೇಲೆ ಈ ಮೌಲ್ಯ ಮಾಪನ ಸಮಿತಿ ಏನು ಹೇಳಿದೆ ಎಂಬುದನ್ನು ದೀರ್ಘವಾಗಿ ನೋಡಬೇಕಾಯಿತು. ನಾನು ಅದಕ್ಕೂ ಮುಂಚೆ ಮಾನ್ಯ ಬಸವಲಿಂಗಪ್ಪನವರು ಏನು ಹೇಳಿದರು,ಅದರ ಬಗ್ಗೆ ಉತ್ತರ ಹೇಳಬೇಕಾಗು-ತ್ತದೆ. ಈ ಮೌಲ್ಯ ಮಾಪನ ಸಮಿತಿ ಅಂದರೆ ಕೃಷ್ಣಸ್ವಾಮಿ ಸಮಿತಿ ಎಂದು ಏನು ಪ್ರಖ್ಯಾತವಾಗಿದೆ, ಈ ಸಮಿತಿಯ ವರದಿ ಅನುರೂಪವಾಗಿ ತಾವು ತಿದ್ದುಪಡಿಗಳನ್ನು ತಂದಿದ್ದರೆ ನಮ್ಮದೇನೂ ಅಭ್ಯಂತರವಿಲ್ಲ. ಅದರಲ್ಲಿ ರಾಜಕಾರಣ ಇಲ್ಲ. ಒಬ್ಬ ಪ್ರಜ್ಞಾವಂತ ವಿದ್ಯಾವಂತ ಮತ್ತು ಅನುಭವಿಗಳಾದ ಕೃಷ್ಣಸ್ವಾಮಿಯವರು ಏನು ಕೊಟ್ಟಿದ್ದಾರೆ, ಅದನ್ನು ಆಧರಿಸಿ ತಿದ್ದುಪಡಿ ಮಾಡಿದ್ದೇವೆಂದು ಹೇಳಿದರೆ ನಮ್ಮ ಅಭ್ಯಂತರವೇನೂ ಇಲ್ಲ. I don't call it a bad law; I call it a good law.

(INTERRUPTIONS)

ಶ್ರೀ ಬಿ. ಬಸವಲಿಂಗಪ್ಪ :– ಕೃಷ್ಣಸ್ವಾಮಿ ವರದಿಯನ್ನು ನಾನು ನೋಡಿದ್ದೇನೆ. ಓದುತ್ತಾ ಓದುತ್ತಾ ಓದಿ ಬೇಸರಾಯಿತು. ಬಿಟ್ಟು ಬಿಟ್ಟೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ :– ಇದನ್ನು ಓದಿದರೆ ಬೇಸರವಾಗುತ್ತದೆ. ಇದನ್ನೂ ಬಿಸಾಕಿಬಿಡಿ.

ಶ್ರೀ ಡಿ. ಬಿ. ಚಂದ್ರೇಗೌಡ :– ರಾಜ್ಯಾಂಗ ಓದಿದರೂ ಬೇಜಾರಾಗುತ್ತದೆ.

ಶ್ರೀ ಬಿ. ಬಸವಲಿಂಗಪ್ಪ :– ಅದರ ಬೆಲೆ ಹೇಳಿದೆ.

ಶ್ರೀ ಆರ್. ಎಲ್. ಜಾಲಪ್ಪ :– ಎಲ್ಲಾ ಬೇಸರವಾಯಿತು; ಮಂತ್ರಿ ಪದವಿ ಬೇಸರವಾಗಲಿಲ್ಲವಲ್ಲ ?

ಒಬ್ಬ ಮಾನ್ಯ ಸದಸ್ಯರು :– ಆ ಕಾಲವೂ ಹತ್ತಿರ ಬಂದಿದೆ.

ಶ್ರೀ ಬಿ. ಬಸವಲಿಂಗಪ್ಪ :– ಬನ್ನಿ, ಬನ್ನಿ ಎಂದು ಹೇಳಿದರು ಬಂದಿದ್ದೇನೆ. ನಾನು ಏನು ಮಾಡಲಿ ಹೇಳಿ. ಈಗ ಈ ತಿದ್ದುಪಡಿ ಮಂಡನೆಯಾದಮೇಲೆ, ತಾವು ತಮ್ಮ ಅಭಿಪ್ರಾಯಗಳನ್ನು ಹೇಳುತ್ತಿದ್ದೀರಿ. ರಾಜ್ಯಾಂಗದ 64ನೇ ತಿದ್ದುಪಡಿ ಏನಿದೆ, ಅದರ ಪ್ರಕಾಶ ಮಾಡಿಲ್ಲ, ಅದರ ಪ್ರಕಾರ ಮಾಡಿರಿ ಎಂದು ಹೇಳಿದರು. ಅದರ ಪ್ರಕಾರ ತಿದ್ದುಪಡಿಯನ್ನು ಮಾಡಿದ್ದೇವೆ. ಈಗ ಇವರು ಬಂದು ಕೃಷ್ಣಸ್ವಾಮಿಯವರು ಏನೋ ಹೇಳಿದ್ದಾರೆ, ಅದರ ಪ್ರಕಾರ ಮಾಡಿಯೆಂದು ಹೇಳಿದ್ದಾರೆ. ಅದನ್ನು ಓದಿದರೆ ತಲೆ ಕೆಟ್ಟು ಹೋಗುತ್ತದೆ. ಅದನ್ನು ತಾವು ಏತಕ್ಕೆ ಓದುತ್ತೀರಿ ? ಬಿಟ್ಟುಬಿಡಿ.

ಶ್ರೀ ಬಿ. ಹೆಚ್. ಬನ್ನಿಕೋಡ್ :– ಅದನ್ನು ಓದಿದರೆ ತಲೆ ಕೆಟ್ಟು ಹೋಗುತ್ತದೆ, ಸರ್ಕಾರ ತಂದಿರತಕ್ಕ ತಿದ್ದುಪಡಿಯನ್ನು ನೋಡಿದರೆ ರಾಜ್ಯದ ಜನತೆಗೆ ಬಹಳ ಸಂತೋಷ ಆಗಬಹುದು.

ಶ್ರೀ ಡಿ. ಬಿ. ಚಂದ್ರೇಗೌಡ :– ಕೃಷ್ಣಸ್ವಾಮಿಯವರು ರಿಪೋರ್ಟ್ ಕೊಟ್ಟಿದ್ದಾರೆ. ಸರ್ಕಾರ ಅದನ್ನು ಒಪ್ಪಿಕೊಂಡಿದೆ.

ಶ್ರೀ ವಾಟಾಳ್ ನಾಗರಾಜ್ :– ಅದನ್ನು ಒಪ್ಪಿಕೊಂಡಿರುವ ಸರ್ಕಾರಕ್ಕೆ ತಲೆ ಕೆಟ್ಟಿರಬೇಕು.

Sri. D. B. Chandregowda : The Govt. of Karnataka on 22nd March 1989 issued a Circular. I quote the following Circular No. RDP. 70 dated 8th June 89 :

"Some of the Zilla Parishads have been complained the Treasury and Sub-Treasury Officers are not honouring the bills presented by the Mandal Panchayats for their expenditure......

The Finance Department has clarified......

The Govt. of Karnataka accepted the report

ಶ್ರೀ ಬಿ. ಬಸವಲಿಂಗಪ್ಪ :– ನಮ್ಮ ಬುದ್ಧಿ ನಮಗೆ ಸಾಕಷ್ಟು ಇದೆ, ಅವರ ಬುದ್ಧಿ ನಮಗೆ ಏಕಪ್ಪ ?

ಶ್ರೀ ಡಿ. ಬಿ. ಚಂದ್ರೇಗೌಡ :– ಆ ಡೇಟ್ ನಾನು ಕೊಡುತ್ತೇನೆ. The Govt. of Karnataka has accepted the report.

ಅನುಕೂಲವಾದದ್ದು ಬುದ್ಧಿಹೀನರು ಕೊಟ್ಟಂಥ ವರದಿಯಾಗುವುದಿಲ್ಲ. ಅನಾನುಕೂಲವಾಗಿದ್ದರೆ ಬುದ್ಧಿ ಹೀನರು ಕೊಟ್ಟ ವರದಿಯಾಗುತ್ತದೆ. ನಾವು ಜನತಂತ್ರ ವ್ಯವಸ್ಥೆಯಲ್ಲಿ ಕೆಲಸಮಾಡುವಾಗ......

ಅಧ್ಯಕ್ಷರು :– ಅವರು ಬುದ್ಧಿಹೀನರು ಎಂದು ಹೇಳಲಿಲ್ಲ. ನನ್ನ ತಲೆ ಕೆಟ್ಟು ಹೋಗುತ್ತದೆಂದು ಹೇಳಿದರು. ಅಷ್ಟೇ ತಾನೇ ಮಾನ್ಯ ಮಂತ್ರಿಗಳು ಹೇಳಿದ್ದುದು ? ನಾನು ಸದನದ ಹೊರಗೆ ಇರತಕ್ಕವರ ಬಗ್ಗೆ ಯಾವ ರಿಫ್ಲೆಕ್ಷನ್‌ಗೂ ಅವಕಾಶ ಕೊಡುವುದಕ್ಕಾಗುವುದಿಲ್ಲವಲ್ಲ. ಅದಕ್ಕೋಸ್ಕರ ನಾನು ಅರ್ಥ ಮಾಡಿದ್ದು, ಅದನ್ನು ಓದಿದರೆ ನನ್ನ ತಲೆ ಕೆಟ್ಟು ಹೋಗುತ್ತದೆಂದು ಅವರ ಅಪ್ರಯಿನ್‌ಷನ್ ನಾನು ಹೇಳಿದ್ದು ಸರಿಯೇ ?

ಶ್ರೀ ಬಿ. ಬಸವಲಿಂಗಪ್ಪ :– ಓದುತ್ತಾ ಓದುತ್ತಾ ಬೇಸರವಾಗುತ್ತದೆ. ಅದನ್ನು ಬರೆದಿರತಕ್ಕ ಮಹಾ ಪುರುಷರು ಏನಿದ್ದಾರೆ ಅವರು ನಮಗೆ ಬುದ್ಧಿವಾದವನ್ನು ಸಾವಿರಾರು ವರ್ಷಗಳಿಂದ ಹೇಳಿಕೊಂಡು ಬಂದಿದ್ದಾರೆ. ಅದು ಬೇಡವೆಂದು ಬಿಟ್ಟಿದ್ದೇನೆ.

ಶ್ರೀ ವಾಟಾಳ್ ನಾಗರಾಜ್ :– ಹೆಸರಿನ ಮೇಲೆ ಏನೋ ಒಂದು ತೀರ್ಮಾನ ತೆಗೆದುಕೊಂಡಿದ್ದಾರೆ. ಆ ಹೆಸರಿನವರು ಯಾರು, ಅದರ ಹಿಂದೆ ಸಾವಿರಾರು ವರ್ಷಗಳಿಂದ ಬಹಳ ಕಥೆಗಳಿವೆ. ಕೃಷ್ಣಸ್ವಾಮಿ ಅಂದರೆ ಅದರ ಹಿಂದೆ ಏನೋ ಇದೆಯೆಂದು ಅಂದುಕೊಳ್ಳುತ್ತಾರೆ.

ಶ್ರೀ ಡಿ. ಬಿ. ಚಂದ್ರೇಗೌಡ :– ನನ್ನ ಬುದ್ಧಿ ಕೆಟ್ಟಿಲ್ಲವೆಂದು ಹೇಳಿದರು. ಬುದ್ಧಿ ಸರಿಯಿದೆ ಎಂದು ಗೊತ್ತಾಯಿತು. ಬುದ್ಧಿ ಸರಿಯಾಗಿ ಇದ್ದಿದ್ದರೆ ಈ ಶಾಸನ ಬರುತ್ತಿರಲಿಲ್ಲ; ಅದನ್ನು ಮುಂದೆ ಹೇಳುತ್ತೇನೆ ಏತಕ್ಕೆಂದು. ಹಾಗೆ ಇದ್ದರೆ ಇವರು ಇದನ್ನು ಓದುವುದಕ್ಕೂ ತಯಾರಾಗಿಲ್ಲ. ನಾನು ಇದನ್ನು ಕೋಟ್ ಮಾಡಿ ಏನು ಪ್ರಯೋಜನ ? ಸರ್ಕಾರಕ್ಕೆ ಇದನ್ನು ನೋಡುವುದಕ್ಕೂ ತಯಾರಾಗಿಲ್ಲ. ಆದರೆ ಅದನ್ನು ಏತಕ್ಕೆ ಒಪ್ಪಿಕೊಂಡಿದ್ದಾರೆನ್ನುವ ಪ್ರಶ್ನೆಗೆ ಉತ್ತರ ಹೇಳಿದರೆ ಸಾಕು.

ಶ್ರೀ ಬಿ. ಬಸವಲಿಂಗಪ್ಪ :– ಇದು 1988 ರಲ್ಲಿ ಆದದ್ದು.

ಶ್ರೀ ಡಿ. ಬಿ. ಚಂದ್ರೇಗೌಡ :– ಯಾರೇ ಒಪ್ಪಿಕೊಳ್ಳಲಿ, ಸರ್ಕಾರಗಳು ಬದಲಾವಣೆಯಾಗಬಹುದು. ನಿಮ್ಮ ಸರ್ಕಾರಬಂದ ತಕ್ಷಣ ಅದು ಸರ್ವಜ್ಞನ ಸರ್ಕಾರವಾಗುತ್ತದೆ ಉಳಿದವರ ಸರ್ಕಾರ ದಡ್ಡರ ಸರ್ಕಾರವಾಗುವುದಿಲ್ಲ. ಮಂತ್ರಿಮಂಡಲವನ್ನು ಬದಲಾಯಿಸುತ್ತಾರೆಯೇ ಹೊರತು ಸರ್ಕಾರ ಬದಲಾವಣೆಯಾಗುವುದಿಲ್ಲ.

ಶ್ರೀ ಹೆಚ್. ಏಕಾಂತಯ್ಯ :– ಸರ್ಕಾರ ಒಪ್ಪಿಕೊಂಡದ್ದನ್ನು ತಾವು ಏನಾದರೂ ಈಗ ರಿವರ್ಸ್ ಮಾಡಿದ್ದೀರಾ ?

ಶ್ರೀ ಡಿ. ಬಿ. ಚಂದ್ರೇಗೌಡ :– ಅದನ್ನು ನೋಡುವುದಕ್ಕೆ ಹೋಗಿಲ್ಲ. ಇವರಿಗೆ ಯಾವರೀತಿ ಬೇಕೋ ಆ ರೀತಿ ತಿದ್ದುಪಡಿ ತಂದಿದ್ದಾರೆ. ಅದನ್ನೆ ನಾನು ಬ್ಯಾಡ್ ಲಾ ಎಂದು ಅನೇಕ ಸಲ ಹೇಳಿದ್ದೇನೆ.

ಶ್ರೀ ಬಿ. ಬಸವಲಿಂಗಪ್ಪ :– ಕೃಷ್ಣಸ್ವಾಮಿಯವರು ಹೇಳಿರುವ ಒಟ್ಟು ಅರ್ಥ ಹೇಳುತ್ತೇನೆ. ಸರ್ಕಾರ ನಡೆಸತಕ್ಕದ್ದು ಸರಿಯಲ್ಲ, ಎಲ್ಲವೂ ಮಂಡಲ ಪಂಚಾಯಿತಿಗೆ ಹೋಗಬೇಕು ಜಿಲ್ಲಾ ಪರಿಷತ್ತುಗಳಿಗೆ ಹೋಗಬೇಕೆಂದು ಹೇಳಿದ್ದಾರೆ. ಆ ರೀತಿ ಮಾಡಿದರೆ ನಾವು ಈ ಸದನದಲ್ಲಿ ಕುಳಿತು ಕೆಲಸ ಮಾಡುವುದಕ್ಕಾಗುವುದಿಲ್ಲ. ಸರ್ಕಾರ ಮಾಡುವುದಕ್ಕಾಗುವುದಿಲ್ಲ, ಸರ್ಕಾರ ನಡೆಸುವುದಕ್ಕಾಗುವುದಿಲ್ಲ. ಅದಕ್ಕೆ ಈ ಮಾತು ಹೇಳಿದೆ.

ಶ್ರೀ ಡಿ. ಬಿ. ಚಂದ್ರೇಗೌಡ :– ಬರೀ ಇವರ ಮಾತನ್ನೇ ಕೇಳುವುದಾದರೆ, ನಾನು ಹೇಳುವುದೇನಿದೆ ? ತಿದ್ದುಪಡಿಯ ಮೇಲೆ ಚರ್ಚೆಯೇ ಬೇಡ. ನೀವು ಹೇಳುವುದನ್ನು ಹೇಳಿ. ಕೇಳುತ್ತೇವೆ. ಸ್ವಾಮಿ; ನೀವು ಹೇಳಿದ ಮೇಲೆ ಯಾವುದನ್ನು ಕೇಳಬೇಕೋ ಯಾವುದನ್ನು ಬಿಡಬೇಕೋ ಎಂದು ತೀರ್ಮಾನ ಮಾಡುತ್ತೇವೆ.

ಶ್ರೀ ಕೆ. ಹೆಚ್. ರಂಗನಾಥ :– ತಾವು ಅಧ್ಯಕ್ಷರ ಕಡೆ ನೋಡಿ ಹೇಳಿದರೆ ಸರಿಯಾಗುತ್ತದೆ. ಒಬ್ಬೊಬ್ಬರ ನ್ನೊಬ್ಬರು ನೋಡಿ ಹೇಳಿದರೆ ಹೀಗಾಗುತ್ತದೆ. ತಾವು ಇತ್ತಕಡೆ ನೋಡುತ್ತೀರಿ. ನೀವು ಅವರ ಕಡೆ ನೋಡು ತ್ತೀರಿ, ರೂಲ್ಸ್ ಪ್ರಕಾರ You are supposed to look at the Speaker and not at the Minister.

ಶ್ರೀ ಡಿ. ಬಿ. ಚಂದ್ರೇಗೌಡ :– ನಾನು ಮಾಜಿ ಸ್ಪೀಕರ್‌ರವರನ್ನು ಏತಕ್ಕೆ ನೋಡಬಾರದು ? ನಾನು ನಿಮನ್ನು ನೋಡುತ್ತೇನೆ. ಅದು ಹಳೆಯ ಅಭ್ಯಾಸ. ನಿಮ್ಮ ನೋಡಿ ನೋಡಿ ಅಭ್ಯಾಸ.

ಶ್ರೀ ಬಿ. ಹೆಚ್. ಬನ್ನಿಕೋಡ್ :– ಏನಾದರೂ ಬೆಳಕು ಚೆಲ್ಲಬಹುದು ಎಂದು ತಮ್ಮ ಕಡೆ ನೋಡು ತ್ತಿದ್ದಾರೆ.

ಶ್ರೀ ಡಿ. ಬಿ. ಚಂದ್ರೇಗೌಡ :– ಇಲ್ಲಿ ಸ್ಪೀಕರ್ ಅಂದರೆ—Once a Speakar Khayam Speakar ಆದ್ದರಿಂದ ಈ ಸರ್ಕಾರ ಮತ್ತು ಮಾನ್ಯ ಮಂತ್ರಿಗಳಿಗೆ ಮೌಲ್ಯ ಮಾಪನ ಸಮಿತಿಯ ವರದಿಯು ಅಗತ್ಯವಿಲ್ಲ. ಅದನ್ನು ಬಿಸಾಕಿಬಿಡೋಣ.

ಶ್ರೀ ವಾಟಾಳ್ ನಾಗರಾಜ್ :– ಅವರಿಗೆ ಬೇಕಿಲ್ಲ. ನೀವು ಯಾಕೆ ಬೀಸಾಕುತ್ತೀರಿ ?

ಶ್ರೀ ಡಿ. ಬಿ. ಚಂದ್ರೇಗೌಡ :– ನನಗೆ ಯಾವಾಗ ಬೇಕೋ ಆಗ ತೆಗೆದುಕೊಳ್ಳುತ್ತೇನೆ. ಈ ಒಂದು ವ್ಯವಸ್ಥೆಯನ್ನು......

ಶ್ರೀ ಎನ್. ಹುಚ್ಚಮಾಸ್ತಿಗೌಡ :– ನೀವು ಈ ಮೊದಲು ಮೌಲ್ಯಾಧಾರಿತ ಸರ್ಕಾರ ರಚನೆ ಮಾಡಿದ್ದು ಏನಾಯಿತು ? ಇವತ್ತು ಆಗಿರುವ ಬದಲಾವಣೆಗೆ ಕಾರಣವೇನು ? ಇದರ ಮೂಲ ಸಿದ್ಧಾಂತವನ್ನು ನೀವು ತಿಳಿದುಕೊಂಡ ಮೇಲೆ , ಅದನ್ನು ನಾವು ಮೌಲ್ಯಾಧಾರಿತ ಎನ್ನಬಹುದು. ನೀವು ಅದನ್ನು ಮೌಲ್ಯ ಮಾಪನ ಅನ್ನಬಹುದು.

ಶ್ರೀ ಡಿ. ಬಿ. ಚಂದ್ರೇಗೌಡ :– ಬದಲಾವಣೆ ಬಗ್ಗೆ ಹೇಳಬೇಕೆಂದರೆ ನೀವು ಇದ್ದಲ್ಲೇ ಇದ್ದೀರಿ. ನಾನು ಮಾತ್ರ ಇಲ್ಲಿಗೆ ಬಂದು ವಿರೋಧ ಪಕ್ಷದ ನಾಯಕನಾಗಿದ್ದೇನೆ. ನೀವು ತಪ್ಪು ತಿಳಿದುಕೊಂಡಿದ್ದೀರಿ ಅಷ್ಟೆ. ಬದ-ಲಾವಣೆ ಏನೂ ಆಗಿಲ್ಲವೆಂದು ನೀವು ಇದ್ದಲ್ಲಿಯೇ ಇದ್ದೀರಿ, ನಾನು ಇದ್ದಲ್ಲಿ ನಾನು ಇರುತ್ತೇನೆ. ಅದು ಹೀಗೆಯೇ ಇರುತ್ತದೆ. ಬಹಳ ದಿವಸ. ಹಿಂದಿನ ಸರ್ಕಾರಕ್ಕೆ ಈ ಮೂಲ ಸಿದ್ಧಾಂತದ ಬಗ್ಗೆ ಆಸಕ್ತಿ ಎಷ್ಟು ಇತ್ತು ಎಂಬುದಕ್ಕೆ ಹೇಳಿದೆ. ಬರೇ ಎಲ್ಲೋ ಚುನಾವಣೆ ಮಾಡಿದೆವು, ಅಧಿಕಾರ ಕೊಟ್ಟೆವು ಅವರು ಏನು ಮಾಡಿದರು, ಏನು ಬಿಟ್ಟರು; ಈ ಬಗ್ಗೆ ಇವರು ಏನನ್ನೂ ಆಲೋಚನೆ ಮಾಡಲಿಲ್ಲ. ಆದ್ದರಿಂದ ನಮ್ಮ ಸರ್ಕಾರ ಬಂದಮೇಲೆ ಬದಲಾವಣೆ ಮಾಡುತ್ತಿದ್ದೇವೆ ಎನ್ನತಕ್ಕಂಥ ವಾದ ಇದೆಯಲ್ಲ, ಇದು ಸರಿಯಲ್ಲ. ಅದನ್ನು ಮಾಡುವುದರ ಜೊತೆಗೆ ಈ ಒಂದು ಮೌಲ್ಯ ಮಾಪನ ಸಮಿತಿ ಅಷ್ಟಕ್ಕೇ ಸೀಮಿತವಾಗಲಿಲ್ಲ; Financial Evaluation Committee ಅಂತ ಮಾಡಿದರು. ಈ ಕಮಿಷನ್ನಿನ ಮುಖ್ಯವಾದ ವಿಚಾರಗಳನ್ನು ಹೇಳುವುದಕ್ಕಿಂತ ಮುಂಚೆ ಸರ್ಕಾರಕ್ಕೆ ಇದ್ದಂಥ ಈ ಒಂದು ಸಂಸ್ಥೆಗಳ ಬಗ್ಗೆ ಎಲ್ಲೆಲ್ಲಿ ಏನೇನು ಉತ್ತಮ ಪಡಿಸಬಹುದು ಎನ್ನತಕ್ಕಂಥ ಒಂದು ಆಸಕ್ತಿ ಇತ್ತು, ಕಾಳಜಿ ಇತ್ತು ಎಂಬ ಬಗ್ಗೆ ಈ ಹೆಸರು ಹೇಳಬೇಕೋ ಬೇಡವೋ ಎಂದು ನನಗೆ ತಿಳಿಯುತ್ತಿಲ್ಲ. ಮತ್ತೆ ಇವರು ಅವರ ಮೇಲೆ ಕಾಮೆಂಟರಿ ಮಾಡಿಬಿಟ್ಟರೆ ಕಷ್ಟ; ಈ ಹೊನ್ನಾವರ್ ಸಮಿತಿ ರಿಪೋರ್ಟ್......

ಶ್ರೀ ವಾಟಾಳ್ ನಾಗರಾಜ್ :– ಕೃಷ್ಣಸ್ವಾಮಿ ಕೆಟ್ಟಾಯ್ತು. ಈಗ ಹೊನ್ನಾವರ್ ಅವರನ್ನು ಕೆಡಿಸುತ್ತಿ-ದ್ದೀರಿ ನೀವು.

ಶ್ರೀ ಡಿ. ಬಿ. ಚಂದ್ರೇಗೌಡ :– ಒಂದು ಕಡೆ ಮೌಲ್ಯ ಮಾಪನ, ಮತ್ತೊಂದು ಕಡೆ ಆರ್ಥಿಕವಾದಂಥ ವಿಕೇಂದ್ರೀಕರಣಕ್ಕೆ ಸಾಧನಗಳನ್ನು ಹೇಗೆ ಮಾಡಬೇಕು ಎಂಬುದು ಇದಕ್ಕೆ ಮತ್ತೊಂದು ಕಮಿಟಿ ರಿಪೋರ್ಟ್ ಇದು ಯಾವುದಕ್ಕೂ ಮರ್ಯಾದೆ ಇಲ್ಲ. ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಮರ್ಯಾದೆ ಇಲ್ಲ. ಶ್ರೀ ಹುಚ್ಚಮಾಸ್ತಿಗೌಡರು ಕೊಟ್ಟ ರಿಪೋರ್ಟ್ ಹೊನ್ನಾವರ್ ಅವರು ಕೊಟ್ಟ ರಿಪೋರ್ಟ್ are you going to accept, I don't know. He is one of the renowned, well-know financial wizard, I can say. ಇದನ್ನಾದರೂ ಒಪ್ಪಿಕೊಳ್ಳುತ್ತೀರಾ ಎಂದು ಗೊತ್ತಿಲ್ಲ. ಇದು ಆತ ಕೊಟ್ಟಂಥ ರಿಪೋರ್ಟ್ ನಾನು ಸುಮ್ಮನೆ ಸ್ಯಾಂಪಲ್ಸ್ ಕೊಡುತ್ತೇನೆ ಅಷ್ಟೆ. ವಿವರಗಳಿಗೆ ನಾನು ಹೋಗುವುದಿಲ್ಲ.

The Commission's recommendations are given below, at page 189: I quote..

ಎಷ್ಟು ಪರ್ಸೆಂಟೇಜ್ ಜಿಲ್ಲಾ ಪರಿಷತ್ತುಗಳಿಗೆ ಹೋಗಬೇಕು ? In the planned allocations, 12% compound rate of growth should be provided for in the 8th Plan period ಎನ್ನ ತಕ್ಕಂಥ ಮಾತನ್ನು ಅವರು ಹೇಳುತ್ತಾರೆ.

This would give rhe following allocations:

1989-90 ... Rs. 270 Crores

1994-95 ... Rs. 476 Crores ಇದನ್ನು ಹೇಳುತ್ತಾ ಒಂದು ಸಿದ್ಧಾಂತವನ್ನು ಹೇಳಿದ್ದಾರೆ. The Zilla Parishads and Mandal Panchayats, an essence of fiscal independence by assigning a part of tax revenue rather than providing specific grants in aid from year to year. ಎಷ್ಟು ದೂರಕ್ಕೆ ಅವರು ಹೋಗುತ್ತಾರೆ ಎಂದರೆ ಇಲ್ಲಿಂದ ಸರ್ಕಾರ ಗ್ರ್ಯಾಂಟ್ ಕೊಟ್ಟಿತು; ನಿಮ್ಮ ಆಸ್ಥಾನಿಕ ಸಂಸ್ಥೆಗಳು ಅಂತ ಮಾಡಿಕೊಳ್ಳದೆ ತಮ್ಮದೇ ಆದ ಸ್ವಯಂ ಸೃಷ್ಟಿ ಮಾಡಿಕೊಳ್ಳುವ ಅಧಿಕಾರವನ್ನು ಅವರಿಗೆ ಕೊಡಿ ಎನ್ನತಕ್ಕಂಥ ಮಾತನ್ನು ಹೊನ್ನಾವರ್ ಕಮಿಷನ್ ರಿಪೋರ್ಟ್ ಹೇಳಿತು.

1-30 ಪಿ. ಎಂ.

"Non-plan expenditure has grown by six per cent between 87-88 and 89-90. We are keenly aware that the administrative expenditure should not be allowed to grow in resource scale situation nor do we want high cost urban administrative structure to be duplicated in the rural areas. But Economy should not be practised at the expense of essential service. We, therefore, cecommend that the non-plan allocation should grow at the same rate in coming years"
ಎಂದು ಈ ರೆಕಮೆಂಡೇಷನ್ಸ್ ಕೊಡುತ್ತಾರೆ. ಮುಂದೆ ಏನಾಗಿದೆ ಎಂಬುದನ್ನೂ ಹೇಳುತ್ತೇನೆ. ಈ ಶಿಫಾರಸ್ಸುಗಳೂ ಬೇಡ ಅಂದರೆ ಈ ಮಸೂದೆಯ ತಿದ್ದುಪಡಿಗಳಿಗೆ ಆಧಾರಗಳು ಏನು ? ಅನುಭವದ ಮೇಲೆ ಆಧಾರಗಳು ಎಂದು ಹೇಳಿದರೆ, ಯಾರು ನಿಮಗೆ ಜಿಲ್ಲಾ ಪರಿಷತ್ತಿನವರು ಹೇಳಿದರೋ ಮಂಡಲ್ ಪಂಚಾಯ್ತಿಯವರು ಹೇಳಿದರೋ, ವಿಭಿನ್ನ ಸಂಘ ಸಂಸ್ಥೆಗಳವರು ಹೇಳಿದರೋ ಅಲ್ಲಲ್ಲಿ ಹೊರಗಡೆ ಮೌಲ್ಯ ಮಾಪನ ಮಾಡುವಂಥ ವಿವಿಧ ಕೇಂದ್ರಗಳವರು ಹೇಳಿದರೋ ಅಥವಾ ಕೇಂದ್ರದಲ್ಲಿ ಇರತಕ್ಕ ಸರ್ಕಾರ, ಅದು ನಿಮ್ಮ ಸರ್ಕಾರ ಅಲ್ಲವೆಂದು ಹೇಳುತ್ತೀರೋ. ಅಲ್ಲಿಂದ ಏನಾದರೂ ಆದೇಶ ಬಂತೋ ಅಥವಾ ಹೈಕಮಾಂಡ್‌ನವರು ತಿದ್ದುಪಡಿ ಮಾಡಿ ಎಂದು ಹೇಳಿದರೋ ? ಅದೇ ನಜೀರ್‌ಸಾಬ್‌ರವರು ಹೇಳಿದಂಥ 33 ತಿದ್ದುಪಡಿಗಳನ್ನು ಅಕ್ಷರಶಃ ಚರ್ಚೆ ಇಲ್ಲದೆ ಒಪ್ಪಿಕೊಳ್ಳುವುದಕ್ಕೆ ಸಿದ್ಧನಿದ್ದೇನೆ; ಆದರೆ......

ಶ್ರೀಮತಿ ಚಂದ್ರಪ್ರಭಾ ಅರಸು :- ಮತದಾರ ಪ್ರಭುಗಳು ಹೇಳಿದರು...

ಶ್ರೀ ಜಿ. ಎಸ್. ಶಿವನಂಜಪ್ಪ :- ಹಾಲಿ ಇರತಕ್ಕ ಆಕ್ಟ್‌ನಲ್ಲಿ ಲೋಪದೋಷಗಳು ಇವೆ ಎಂದು ಮಾನ್ಯ ನಜೀರ್‌ಸಾಬ್‌ರವರೂ ಕೂಡ ಅನೇಕಸಾರಿ ಈ ಸದನದಲ್ಲೂ ಹೇಳಿದ್ದರು. ಹೊರಗಡೆಯೂ ಹೇಳಿದ್ದರು...

ಶ್ರೀ ಡಿ. ಬಿ. ಚಂದ್ರೇಗೌಡ :- ಮತದಾರರು ಏನು ಹೇಳಿದ್ದಾರೆ ? ನೀವು ಚುನಾವಣಾ ಪ್ರಣಾಳಿಕೆಯಲ್ಲಿ ಇದನ್ನು ಬದಲಾವಣೆ ಮಾಡುತ್ತೇವೆಂದು ಬರೆದಿದ್ದೀರಾ ? ಮತ್ತೆ ಮತದಾರರು ಹೇಗೆ ಹೇಳಿದರು. ನೀವು ಯಾವಾಗ ನನ್ನ ಪ್ರಶ್ನೆ ಕೇಳುವುದಿಲ್ಲ, ಆಗ, ಉತ್ತರ ಇದಕ್ಕೆ ಬಂತು ಎಂದು ಹೇಳಿದರೆ ಸರಿಯಾಗುವುದಿಲ್ಲ. ನೂರಕ್ಕೆ 57 ಜನ ಮತದಾರರು ನಮಗೆ ಮತ ಕೊಟ್ಟಿದ್ದಾರೆ. ನೂರಕ್ಕೆ 43 ಜನ ಮಾತ್ರ ನಿಮಗೆ ಮತ ಕೊಟ್ಟಿದ್ದಾರೆ. ಇದನ್ನು ತಾವು ಮರೆಯಬೇಡಿ. ನೂರಕ್ಕೆ 57 ಓಟು ಬಂದು ನಾವು ವಿರೋಧ ಪಕ್ಷದಲ್ಲಿ ಕುಳಿತಿದ್ದೇವೆ. ಇಷ್ಟು ಓಟು ಬಾರದ ನೀವು ಅಲ್ಲಿ ಕುಳಿತಿದ್ದೀರಿ. ಇದು ರಾಜ್ಯಾಂಗದ ವ್ಯವಸ್ಥೆಯಲ್ಲಿರತಕ್ಕ ದುರಂತ. 57 ಪರ್ಸೆಂಟ್ ಬಂದರೂ ಇಲ್ಲಿ ಕುಳಿತುಕೊಳ್ಳಬೇಕು. 43 ಪರ್ಸೆಂಟ್......

ಅಧ್ಯಕ್ಷರು :- ಈ ದ್ವಂದ್ವ ಕೇವಲ ರಾಜ್ಯಕ್ಕೆ ಅನ್ವಯಿಸುತ್ತದೆಯೋ ಅಥವಾ ರಾಷ್ಟ್ರಕ್ಕೂ ಅನ್ವಯಿಸುತ್ತದೆಯೋ ?

ಶ್ರೀ ಡಿ. ಬಿ. ಚಂದ್ರೇಗೌಡ :– ಇದು ರಾಜ್ಯಾಂಗದಲ್ಲಿರತಕ್ಕ ದ್ವಂದ್ವ. ಇದನ್ನು ಯಾವಾಗ ಸರಿಪಡಿಸುತ್ತಾರೋ ಗೊತ್ತಿಲ್ಲ. ಇದು ಇರತಕ್ಕ ವ್ಯವಸ್ಥೆ. ಆದರೆ ಅದು ಸತ್ಯವೆಂದು ವಾದ ಮಾಡತಕ್ಕಂತಾದ್ದು ಇದೆ. ನಾನು ನಾನ್‌ಪ್ಲಾನ್ ಅಲೋಕೇಷನ್ಸ್ ಬಗ್ಗೆ ಹೇಳುತ್ತಿದ್ದೆ. 1989 ರಲ್ಲಿ 670 ಕೋಟಿ ರೂಪಾಯಿ ಸ್ಟೇಟ್ ಪ್ಲಾನ್‌ನಲ್ಲಿ 270, ಅದು 940 ಕೋಟಿ ರೂಪಾಯಿ ಅದೇ ರೀತಿ ದಾಮಾಶ ಹೇಳಿಕೊಂಡು ಬಂದು 1994–95 ಕ್ಕೆ 896 ಕೋಟಿ ನಾನ್‌ಪ್ಲಾನ್ ಎಕ್ಸ್‌ಪೆಂಡೀಚರ್, 476 ಕೋಟಿ ಸ್ಟೇಟ್ ಪ್ಲಾನ್ ಎಕ್ಸ್‌ಪೆಂಡೀಚರ್; ಇದನ್ನು 1370 ಕೋಟಿ ವರೆಗೆ ಏರಿಸಬೇಕೆಂದು ಹೊನ್ನಾವರ್ ಕಮೀಷನ್ ರಿಪೋರ್ಟ್‌ನಲ್ಲಿ ಹೇಳಿದೆ.

ಪ್ರಕಟಣೆ

ವಿಧಾನ ಸಭೆಯ ಪ್ರಸ್ತುತ ಅಧಿವೇಶನ ಮುಂದುವರಿಸುವುದು

ಅಧ್ಯಕ್ಷರು :– ತಾವು ತಮ್ಮ ಭಾಷಣವನ್ನು ಮಧ್ಯಾಹ್ನದ ನಂತರ ಮುಂದುವರೆಸಿ ದಿನಾಂಕ 19ನೇ ಡಿಸೆಂಬರ್‌ನಲ್ಲಿ ನಡೆದ ನಿಧಾನ ಸಭೆಯ ಕಾರ್ಯಕಲಾಪಗಳ ಸಲಹಾ ಸಮಿತಿಯು ಪ್ರಸ್ತುತ ಅಧಿವೇಶನವನ್ನು ಮುಂದುವರಿಸಿ, ಈ ಕೆಳಕಂಡಂತೆ ಕಾರ್ಯಕಲಾಪಗಳನ್ನು ನಡೆಸಲು ತೀರ್ಮಾನಿಸಿತು. 21ನೇ ಡಿಸೆಂಬರ್ ಶಾಸನ ರಚನೆ ಹಾಗೂ ಖಾಸಗಿ ಕಾರ್ಯಕಲಾಪಗಳು, ನಿಯಮ 68 ರ ಮೇರೆಗೆ ರೈತರ ಸಾಲ ಮನ್ನಾ ಮಾಡುವ ಬಗ್ಗೆ ಚರ್ಚಿಸುವುದು; 22, 23, 24 ಮತ್ತು 25 ರಂದು ಅಧಿವೇಶನ ಇರುವುದಿಲ್ಲ. 26, ಶಾಸನ ರಚನೆ, 27, ಶಾಸನ ರಚನೆ, 26 ಮತ್ತು 27 ರಂದು, ಈ ಎರಡು ದಿವಸಗಳಲ್ಲಿ ಪ್ರಶ್ನೋತ್ತರದ ಅವಧಿ ಇರುವುದಿಲ್ಲ.

ಈಗ ಸಭೆ ಮುಂದುವರೆದು ಮತ್ತೆ 3 ಗಂಟೆಗೆ ಸಮಾವೇಶಗೊಳ್ಳುತ್ತದೆ.

(ಸದನವು ಮಧ್ಯಾಹ್ನ 1–35ಕ್ಕೆ ಮುಕ್ತಾಯವಾಗಿ ಮತ್ತೆ 3 ಗಂಟೆಗೆ ಸಮಾವೇಶಗೊಳ್ಳಲು ನಿಶ್ಚಯಿಸಿತು.)

ಸದನವು ಮತ್ತೆ ಮಧ್ಯಾಹ್ನ 3–20 ಕ್ಕೆ ಸಮಾವೇಶಗೊಂಡಿತು.

(ಉಪಾಧ್ಯಕ್ಷರು ಶ್ರೀಮತಿ ನಾಗಮ್ಮ ಕೇಶವಮೂರ್ತಿ ಅಧ್ಯಕ್ಷ ಸ್ಥಾನವನ್ನು ಅಲಂಕರಿಸಿದರು)

ಶಾಸನ ರಚನಾ ಕಾರ್ಯಕಲಾಪಗಳು

ಜಿಲ್ಲಾಪರಿತ್, ಮಂಡಲ್ ಪಂಚಾಯತ್ (ತಿದ್ದುಪಡಿ) ವಿಧೇಯಕ ಪರ್ಯಾಲೋಚಿಸುವುದು.

(ಮುಂದುವರಿದುದು)

Sri. D B. Chandregowda : Madam Deputy Speaker, I was referring to the earnestness of the previous Government reflected by appointing two Commissions, one Krishnaswamy's Committee report and the other was the Finance Commission which recommended the pattern and the range of a assistance that should be given to the Zilla Parishads and Mandal Panchayats.

ಈ ಎರಡು ವರದಿಗಳ ಆಧಾರದಿಂದ, ಅವು ಮಾಡಿರತಕ್ಕ ಒಂದು ರೆಕಮೆಂಡೇಷನ್ಸ್ ಈ ಬದಲಾವಣೆಗೆ ಆಧಾರವಾಗಿದ್ದರೆ ನಾನು ಇದನ್ನು ಸ್ವಾಗತ ಮಾಡುತ್ತಿದೆ ಎಂದು ಹೇಳುತ್ತಿದ್ದೆ. ಆದರೆ ಸರ್ಕಾರ ಈ ವರದಿಗಳನ್ನು ನೋಡುವುದಕ್ಕೆ ಸಿದ್ಧವಾಗಿಲ್ಲ ಎನ್ನುವುದನ್ನು ಸ್ಪಷ್ಟವಾಗಿ ಮಾನ್ಯ ಮಂತ್ರಿಗಳು ಅಪ್ಪಣೆ ಕೊಡಿಸಿರುವುದರಿಂದ ಅದರ ಬಗ್ಗೆ ನಾನು ಹೆಚ್ಚು ವ್ಯಾಖ್ಯಾನಕ್ಕೆ ಈಗ ಹೋಗುವುದಿಲ್ಲ. ಅಗತ್ಯ ಬಿದ್ದಾಗ ಅದನ್ನು ಹೇಳುತ್ತೇನೆ. ರಾಜ್ಯ ಸರ್ಕಾರದಲ್ಲಿರತಕ್ಕ ವಿಕೇಂದ್ರೀಕೃತ ವ್ಯವಸ್ಥೆಗೆ ತರಲು ಹೊರಟ ತಿದ್ದುಪಡಿಗಳು ಈ ವರದಿಗೆ ಆಧಾರವಾಗಿಲ್ಲ; ಮುಖ್ಯವಾಗಿ ರಾಜಕೀಯವೇ ಕಾರಣವೆಂದು ನಾವು Without conradiction ಒಪ್ಪಿಕೊಳ್ಳಬೇಕಾಗುತ್ತದೆ. ಆದ್ದರಿಂದ ಹೊನ್ನಾವರ್ ಸಮಿತಿ ಬಗ್ಗೆ ಆಗಲಿ ಕೃಷ್ಣಸ್ವಾಮಿ ಸಮಿತಿ ಬಗ್ಗೆ ಆಗಲಿ ನಾನು ವಿಸ್ತಾರವಾಗಿ ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಒಂದು ವೇಳೆ ಅವು ಆಧಾರವಾಗದಿದ್ದರೆ ಕನಿಷ್ಟಪಕ್ಷ ಮಾನ್ಯ ಮಂತ್ರಿಗಳು ಏನು ಹೇಳಿದರು, ನಮ್ಮ ನಾಯಕರ, ನಮ್ಮ ಪಕ್ಷದ ಆದೇಶದ ಮೇಲೆ ಈ ತಿದ್ದುಪಡಿಯನ್ನು ತಂದಿದ್ದೇವೆ; ಅದಕ್ಕೆ ಅನುಗುಣವಾಗಿ ತಂದಿದ್ದೇವೆ ಮತ್ತು ಅದನ್ನು ಬಿಟ್ಟು ನಾವು ಈ ತಿದ್ದುಪಡಿ ಮಸೂದೆ ಮಂಡನೆ ಮಾಡಿಲ್ಲ ಎಂದು ಏನು ಹೇಳಿದ್ದಾರೆ. ಅದಕ್ಕಾಗಿ ಹಿಂದಿನ ಪ್ರಧಾನ ಮಂತ್ರಿಗಳು ಇಂದಿನ ಗೌರವಾನ್ವಿತ ಕಾಂಗ್ರೆಸ್ (ಐ) ಪಕ್ಷದ ಅಧ್ಯಕ್ಷರು ಈ ಸಂಬಂಧ ಏನು ಹಿಂದೆ ಹೇಳಿದ್ದಾರೆ ಎನ್ನುವುದನ್ನು ಈ

ಸಭೆಯ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ಶ್ರೀಮಾನ್ ರಾಜೀವ್ ಗಾಂಧಿಯವರು ಹೇಳಿರುವುದು ದಿನಾಂಕ 30-4-1989 ರ ಹಿಂದೂ ಪತ್ರಿಕೆಯಲ್ಲಿ ವರದಿ ಆಗಿರುವುದನ್ನು ನಾನು ತಮ್ಮ ಮೂಲಕ ಸದನದ ಗಮನಕ್ಕೆ ತರಲು ಬಯಸುತ್ತೇನೆ. ಆಗ ಅವರು ಪ್ರಧಾನ ಮಂತ್ರಿಗಳಾಗಿದ್ದರು.

I quote: 'Dependence Syndrome' under the Caption in Hindu 'The Prime Minister wanted, the Syndrome of dependence of the Panchayati Raj institutions ended so that they became the grass-root institutions with the maximum devolution of powers and maximum democracy We must have a revolution for maximum devolution of powers and maximum democracy and the institution should have better financial discipline and fiscal responsibility It was not a State Centre issue, but it was the joint responsibility of both.
ಈ ಮಾತನ್ನು ಮಾನ್ಯ ರಾಜೀವ್ ಗಾಂಧೀಯವರು ತಮ್ಮ ವಿಕೇಂದ್ರೀಕೃತ ವ್ಯವಸ್ಥೆಗೆ ವ್ಯಾಖ್ಯಾನ ಮಾಡುತ್ತಾ ಹೇಳಿದ್ದಾರೆ. ಇದಕ್ಕೆ ನಿಮ್ಮ ತಿದ್ದುಪಡಿಯು ಪೂರಕವಾಗಿದೆಯೋ ? ಕನಿಷ್ಟಪಕ್ಷ ಇದಕ್ಕಾದರೂ ಪೂರಕವಾಗಿದೆಯೇ ? ಮಾನ್ಯ ಮುಖ್ಯಮಂತ್ರಿಯವರು ಈ ಬಗ್ಗೆ ವ್ಯಾಖ್ಯಾನ ಮಾಡುತ್ತಾ ಒಂದು ಪಟ್ಟಿಯನ್ನು ಕೊಟ್ಟರು. ಯಾವ ಯಾವ ತಿದ್ದುಪಡಿಯಲ್ಲಿ ಅಧಿಕಾರಿಗಳಿಗೆ ಸಣ್ಣ ಸಣ್ಣ ಜವಾಬ್ದಾರಿಗಳನ್ನು ಕೊಟ್ಟಿದ್ದೇವೆ.

Sri. B. Basavalingappa. :- Kindly clarify the develution of powers of democracy.

Sri. D. B. Chandregowda. :- I come to Article 40 of the constitution which you have referred and the authority of the Parliment for devolution of powers to State Legislatures and from State Legislatures to the Zilla Parishads.
ಇದನ್ನು ಚರ್ಚೆ ಮಾಡೋಣ ಈ ರೆವಲ್ಯೂಷನ್‌ಗೆ ಬರುತ್ತೇನೆ. ಈ ದೇಶದ ಜನ Dependence Syndrome ನಿಂದ ಸಫರ್ ಮಾಡುತ್ತಾ ಇದ್ದಾರೆ, ಅವರಿಗೆ ಸ್ವಾಯತ್ತತೆ ಬೇಕು. ಅವರಿಗೆ ಸ್ವರಾಜ್ಯ ಬೇಕು ಅವರಿಗೆ ಸ್ವಯಂ ಅಧಿಕಾರವನ್ನು ಮಾಡತಕ್ಕಂಥ ಹೊಣೆಗಾರಿಕೆಯನ್ನು ಹೊರಿಸಬೇಕೆನ್ನತಕ್ಕಂಥ ಮಾತನ್ನು ಶ್ರೀಮಾನ್ ರಾಜೀವ್ ಗಾಂಧೀಯವರು ಏನು ಹೇಳಿದ್ದಾರೆ. ಅದಕ್ಕೆ ತದ್‌ವಿರುದ್ಧವಾದಂಥ ತಿದ್ದುಪಡಿಗಳನ್ನು ತಾವು ಈ ಸದನದ ಮುಂದಿಟ್ಟಿದ್ದೀರಿ. Powers of the Commissioner ಅಂದರೆ ಏನು ? ಎಲ್ಲಿಯವರೆಗೆ ಅಪೀಲ್ಸ್ Please refer to 271 (a), (b) (c) (d) etc, 271 (b)-new section of enquiry, 2 1(c) intervention of the Zilla Parishads. Where it fails to perform its duty (d) meetings to be ordered being not held by the Zilla Parishads (f) Inspection by the officers, (g) Suspension of Resolutions.
ಇದು ಶ್ರೀಮಾನ್ ರಾಜೀವ್ ಗಾಂಧೀಯವರು ಬಳಸಿರತಕ್ಕಂಥ ಭಾಷೆ. ಅದಕ್ಕೆ ಪೂರಕವಾಗಿ ನಿಮ್ಮ ತಿದ್ದುಪಡಿ ಇದೆಯೇ ? ಅದಕ್ಕೆ ಪ್ರೇರಕವಾಗಿ ನಿಮ್ಮ ತಿದ್ದುಪಡಿ ಇದೆಯೇ ? ಈ ಒಂದು ಪ್ರಶ್ನೆಯನ್ನು ಮಾನ್ಯ ಸಚಿವರಲ್ಲಿ ಕೇಳುವುದಕ್ಕೆ ಇಚ್ಛಿಪಡುತ್ತೇನೆ. ಇದಾದಮೇಲೆ ಕನಿಷ್ಟ ಈ ಮಾತು ಪತ್ರಿಕೆಯಲ್ಲಿ ಕೂಡ ಬಂತು. ರಾಜೀವ್ ಗಾಂಧೀಯವರು ಸೆಪ್ಟೆಂಬರ್ 8ನೇ ತಾರೀಖು, 1989 ನೇ ಇಸವಿಯಲ್ಲಿ ನಮ್ಮ ರಾಜ್ಯದ ಸುಮಾರು 2,500 ಜನ ಮಂಡಳ ಪ್ರಧಾನರಿಗೆ ಕನ್ನಡದಲ್ಲಿ ಸಹಿ ಮಾಡಿರತಕ್ಕಂಥ ಒಂದು ಪತ್ರವನ್ನು ಬರೆಯುತ್ತಾರೆ. ಇದಕ್ಕಾದರೂ ನಿಮ್ಮ ತಿದ್ದುಪಡಿ ಪೂರಕವಾಗಿದೆಯೇ ಎಂಬುದನ್ನು ದಯವಿಟ್ಟು ಆಲೋಚನೆ ಮಾಡಿ. ಆ ಒಂದು ಪತ್ರದ ಕೆಲವೊಂದು ಭಾಗವನ್ನು ನಾನು ತಮ್ಮ ಮೂಲಕ ಸದನದ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. 1989 ರ ಸೆಪ್ಟೆಂಬರ್ 8ನೇ ತಾರೀಖ್‌ಗೆ ಮೊದಲು ಬಾರಿ ಶ್ರೀಮಾನ್ ರಾಜೀವ್ ಗಾಂಧೀಯವರು ಬಹುಶಃ ಇದುವರೆಗೆ ಬ್ಯೂರೋಕ್ರಸಿ ಏನು ? ಅಧಿಕಾರವನ್ನು inherit ಮಾಡಿತ್ತು ಇದು ಜನರ ಹಿತರಕ್ಷಣೆ ಮಾಡುವಲ್ಲಿ ಸ್ವಾತಂತ್ರ್ಯ ನಂತರ ಫಲಕಾರಿಯಾಗಿಲ್ಲ ಎನ್ನುವ ವಿಶ್ವಾಸವನ್ನು ವ್ಯಕ್ತಪಡಿಸುತ್ತಾ ಕೆಲವು ತಿಂಗಳುಗಳಿಂದ ನಾನು ನಿಮ್ಮ ಬಗ್ಗೆ ಯೋಚಿಸುತ್ತಿದ್ದೇನೆ ಎಂಬ ಶೀರ್ಷಿಕೆಯಿಂದ ಪ್ರಾರಂಭ ಮಾಡಿದರು. ನಿಮ್ಮ ಪಂಚಾಯಿತಿ ವ್ಯಾಪ್ತಿಗೆ ಬರುವ ಹಳ್ಳಿಗಳ ಕೆಲಸ ಕಾರ್ಯಗಳನ್ನೂ ನೋಡಿಕೊಳ್ಳಲು ಜನರು ನಿಮ್ಮನ್ನು ಹಾಗೂ ನಿಮ್ಮ ಜೊತೆಗಾರರನ್ನು ಪಂಚಾಯಿತಿಗೆ ಸದಸ್ಯರನ್ನಾಗಿ ಚುನಾಯಿಸಿದ್ದಾರೆ. ದುರದೃಷ್ಟವಶಾತ್ ನಿಮಗೆ ಕಾರ್ಯ ನಿರ್ವಹಿಸಲು ಸಾಕಷ್ಟು ಕಾರ್ಯಕ್ರಮಗಳನ್ನು ಕೊಟ್ಟಿಲ್ಲ. ಈ ಮಸೂದೆಯೊಳಗೆ ಸಮಾರು 27 ಇಲಾಖೆಗಳನ್ನು ಜಿಲ್ಲಾಪರಿಷತ್ತಿಗೆ ವರ್ಗಾವಣೆ ಮಾಡಿತ್ತು. ಅವರಿಗೆ ಅದು ಸರಿಯೆಂದು ಕಾಣಲಿಲ್ಲ. ಅದಕ್ಕಿಂತ ಮುಂದೆ ಕೊಡಬೇಕೆಂಬ ಅವರ ಅಭಿಪ್ರಾಯವನ್ನು ನಾನು ರಾಜ್ಯಾಂಗದ 64 ನೇ ತಿದ್ದುಪಡಿಯಲ್ಲಿ ತಮ್ಮ ಗಮನಕ್ಕೆ

ತರುತ್ತೇನೆ. ಅವರು ಕೊಟ್ಟಿಲ್ಲ ಎಂದು ಹೇಳುವುದು ಸರಿ. ಹಿಂದೆಯೇ ಕೊಡಬೇಕಾಗಿತ್ತು ಎಂಬ ಮಾತು ಸರಿ. ಅದನ್ನು ಕಾರ್ಯರೂಪಕ್ಕೆ ತರಲು ಸಾಕಷ್ಟು ಹಣಕಾಸು ಕೊಟ್ಟಿಲ್ಲ. ಅದಕ್ಕಾಗಿ ನಾನು ಫೈನಾನ್ಶಿಯಲ್ ಇವ್ಯಾಲುಯೇಷನ್ ಕಮಿಟಿಯ ವರದಿಯನ್ನು ಆಧರಿಸಿ ಎಷ್ಟು ಕೊಡಬೇಕೆಂದು ಅವರು ಸೂಚಿಸಿದ್ದಾರೆ, ಅಷ್ಟು ಕೊಟ್ಟಿಲ್ಲ ಎಂಬ ಅವರ ಮಾತನ್ನು ಒಪ್ಪುತ್ತೇನೆ. ಅಷ್ಟೇ ಏಕೆ, ಸ್ಥಳೀಯ ಜನರ ಆಶೋತ್ತರವನ್ನು ಈಡೇರಿಸಲು ಸಾಧ್ಯವಾಗುವಂತೆ ಮಾಡಲು ನಿಮಗೆ ಸಾಕಷ್ಟು ಅಧಿಕಾರವನ್ನೂ ಸಹ ಕೊಟ್ಟಿಲ್ಲ. ಈ ಅಧಿಕಾರ ಕೊಟ್ಟಿಲ್ಲ ಎನ್ನುವ ಅವರ ಅಭಿಪ್ರಾಯ ಏನಿದೆ, ಅದನ್ನು ಈಗ ಕಿತ್ತುಕೊಳ್ಳುವುದರಿಂದ ಸರಿಹೋಗುವುದೇ ? ಈ ಪ್ರಶ್ನೆಗೆ ಮಾನ್ಯ ಮಂತ್ರಿಗಳಿಂದ ಉತ್ತರ ಬಯಸುತ್ತೇನೆ. ನಾನು 29 ರ ಹಿಂದೂ ಪತ್ರಿಕೆಯಲ್ಲಿ ಏನು ವ್ಯಾಖ್ಯಾನಿಸಿದೆ, ಅದರದೇ ಭಾವಾರ್ಥವನ್ನು ಮತ್ತೆ ಈ ಒಂದು ಪತ್ರದಲ್ಲಿ ಅವರು ಬರೆಯುತ್ತಾರೆ. ಹಳ್ಳಿಗಳಲ್ಲಿ ಪ್ರಜಾಪ್ರಭುತ್ವವು ಶಕ್ತಿಯುತವಾಗದ ಹೊರತು ನಮ್ಮ ಪ್ರಜಾಸತ್ತೆ ಬಲಾಢ್ಯವಾಗಿರಲು ಸಾಧ್ಯವಿಲ್ಲ; ಹಳ್ಳಿಗಳಲ್ಲಿ ಅಭಿವೃದ್ಧಿ ಕಾರ್ಯಗಳ ಜವಾಬ್ದಾರಿಯನ್ನು ಪಂಚಾಯಿತಿಗೆ ಕೊಟ್ಟಹೊರತು ಮತ್ತು ಗ್ರಾಮ ವಾಸಿಗಳಿಗೆ ತಮ್ಮ ಅಭಿವೃದ್ಧಿ ಕಾರ್ಯದಲ್ಲಿ ತಾವೇ ಭಾಗವಹಿಸುವಂತೆ ಮಾಡದಿದ್ದರೆ ದೇಶದಲ್ಲಿ ನಾವು ನಿಜವಾದ ಪ್ರಜಾಭಿವೃದ್ಧಿಯನ್ನು ಸಾಧಿಸಲು ಆಗಲಾರದು.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ :– ಅದನ್ನೇ ನಮ್ಮ ಮಂತ್ರಿಗಳು ಮಾಡಿರುವುದು.

ಶ್ರೀ ಡಿ. ಬಿ. ಚುದ್ರೇಗೌಡ :– ನೀವೆಲ್ಲ ಇದನ್ನು ಓದಲಿ ಎಂದು ಧರಣಿ ಕುಳಿತು ಸಮಯ ಕೊಡಿಸಿದರೆ, ನೀವು ಇನ್ನೂ ಓದಿಲ್ಲವಲ್ಲ ! ಮುಂದೆ ಈ ರೀತಿ ಹೇಳುತ್ತಾರೆ. ಜನತೆಯ ಧ್ವನಿಗೆ ನಿಜವಾದ ಮಹತ್ವವನ್ನು ಮತ್ತು ಪಂಚಾಯಿತಿಗೆ ನಿಜವಾದ ಅಧಿಕಾರ ಮತ್ತು ಹೊಣೆಗಾರಿಕೆ ಕೊಡುವ ಉದ್ದೇಶದಿಂದ ನಾನು ಸಂಸತ್ತಿನಲ್ಲಿ ಪಂಚಾಯತ್‌ರಾಜ್ ಮಸೂದೆಯನ್ನು ಮಂಡಿಸಿದೆನು. ಈಗ ಜನರ ಧ್ವನಿಗೆ ನಿಜವಾದ ಮಹತ್ವ ಈ ತಿದ್ದುಪಡಿ ಯಿಂದ ಇದ್ದುದನ್ನು ಕಿತ್ತುಕೊಂಡಿದ್ದಾರೆ. ಧ್ವನಿಗೆ ಮಹತ್ವ ಇಲ್ಲ; ಮಹತ್ವ ಅಧಿಕಾರಿಗಳಿಗಿದೆ. ನಿಜವಾದ ಅಧಿಕಾರ ಮತ್ತು ಹೊಣೆಗಾರಿಕೆ ಕೊಡುವ ಉದ್ದೇಶ ನಿಮಗಿಲ್ಲ. ಹಾಗಿದ್ದರೆ ಈ ತಿದ್ದುಪಡಿಗೆ ಆಧಾರ ಏನು ? ಇದೇ ನನ್ನ ಮೂಲ ಪ್ರಶ್ನೆ. ಆದ್ದರಿಂದಲೇ ಒಂದು ರಾಷ್ಟ್ರವ್ಯಾಪ್ತಿಯಾದಂಥ ರಾಜ್ಯಾಂಗದ ತಿದ್ದುಪಡಿಯಾಗಬೇಕೆಂಬ ಸೂಚನೆಯನ್ನು ಆ ಕಾಲಕ್ಕೆ ಮಂಡಿಸಿದರು. ಆಗ ಏನಾಗುತ್ತಿತ್ತು ಪರಿಣಾಮ ಎಂಬುದನ್ನು ಹೇಳುತ್ತೇನೆ. ಆಗ ಯಾರೂ ನಿಮ್ಮ ಹಸ್ತದಿಂದ ಪ್ರಜಾಪ್ರಭುತ್ವವನ್ನು ಕಸಿದುಕೊಳ್ಳಲಾರರು. ಆಗ ನಿಮ್ಮ ಪಂಚಾಯಿತಿಯನ್ನು ಏಕಪಕ್ಷೀಯವಾಗಿ ಅಮಾನತ್ತಿನಲ್ಲಿಡಲು ಅಥವಾ ವಿಸರ್ಜಿಸಲು ಯಾರಿಗೂ ಸಾಧ್ಯವಿಲ್ಲ. ಇಲ್ಲಿ ಸರ್ಕಾರವೇ ವಿಸರ್ಜಿಸುವ ಅಧಿಕಾರವನ್ನು ತಿದ್ದುಪಡಿ ಮೂಲಕ ತೆಗೆದುಕೊಳ್ಳುತ್ತದೆ. ಯಾರು ಎಂದರೆ ಬಸವಲಿಂಗಪ್ಪ-ನವರನ್ನು ಹೊರತುಪಡಿಸಿ ಯಾರೂ ತೆಗೆದುಕೊಳ್ಳಲು ಸಾಧ್ಯವಿಲ್ಲವೆಂದು ಅರ್ಥವೇ ? ಅಥವಾ ಇದರ ಉದ್ದೇಶ ಏನು ? ನಿಮಗೆ ವಹಿಸಿಕೊಟ್ಟಿರುವ ಅಧಿಕಾರಗಳು ಹೊಣೆಗಾರಿಕೆ ಮತ್ತು ಹಣಕಾಸಿನ ವ್ಯವಹಾರಗಳನ್ನು ಕಸಿದುಕೊಳ್ಳಲು ಯಾರಿಗೂ ಸಾಧ್ಯವಾಗಲಾರದು. ಈಗ ಈ ತಿದ್ದುಪಡಿಯಲ್ಲಿ ಏನಾಗಿದೆ ?

ಶ್ರೀ ಬಿ. ಹೆಚ್. ಬನ್ನಿಕೋಡ್ :– ಪ್ರಜಾಪ್ರಭುತ್ವದ ಆಹುತಿ ತೆಗೆದುಕೊಳ್ಳಬೇಕಾದರೆ ಮಾನ್ಯ ಮಂತ್ರಿಗಳೊಬ್ಬರಿಗೆ ಸರಿ. ಬೇರೆ ಯಾರಿಗೂ ಸಾಧ್ಯವಾಗುವುದಿಲ್ಲ.

ಶ್ರೀ ಡಿ. ಬಿ. ಚಂದ್ರೇಗೌಡ :– ಹೊಣೆಗಾರಿಕೆ, ಹಣಕಾಸು ಹೀಗೆ ಎಲ್ಲವನ್ನೂ ಕಸಿದುಕೊಂಡಿದ್ದಾರೆ. ಈ ಮಸೂದೆಯನ್ನು ವಿರೋಧಿಸಿ ಜಿಲ್ಲಾ ಪರಿಷತ್ತಿನ ಕಾಂಗ್ರೆಸ್ ಸದಸ್ಯರೋ, ಮಂಡಲದ ಸದಸ್ಯರೋ ಮಂಡಲದ ಪ್ರಧಾನರೋ ಅಧ್ಯಕ್ಷರೋ ರಾಜೀನಾಮೆಯನ್ನು ಕೊಟ್ಟರೆ ಅವರ ಮೇಲೆ ಡಿಸಿಪ್ಲಿನರಿ ಆ್ಯಕ್ಷನನ್ನು ತೆಗೆದುಕೊಳ್ಳಬೇಕು ಎಂದು ಹೇಳುತ್ತಾರೆ. ಈ ಆದೇಶವನ್ನು ಉಲ್ಲಂಘನೆ ಮಾಡಿರತಕ್ಕಂಥ ಮಂತ್ರಿಗಳ ಮೇಲೆ ಈಗ ಏನು ಮಾಡಬೇಕು ? ಯಾರ ಮೇಲೆ ಸಸ್‌ಪೆನ್ಸನ್? ಜಿಲ್ಲಾ ಪರಿಷತ್ತಿನಲ್ಲಿ ಈ ಮಸೂದೆಯನ್ನು ವಿರೋಧ ಮಾಡಿದ ಕಾಂಗ್ರೆಸ್ ಸದಸ್ಯರು ರಾಜೀನಾಮೆಯನ್ನು ಕೊಟ್ಟರೆ ಅವರ ಮೇಲೆ ಸಸ್‌ಪೆನ್ಸನ್. ಕಾಂಗ್ರೆಸ್‌ನಿಂದ ವಜಾವೇ ? ಅಥವಾ ಈ ಆದೇಶವನ್ನು ಮೂಲೋತ್ಪಾದನೆ ಮಾಡಿ ಕಿತ್ತು ಹಾಕತಕ್ಕಂಥವರ ಮೇಲೆ ನಾವು ಸಸ್‌ಪೆನ್ಸನನ್ನು ತೆಗೆದುಕೊಳ್ಳಬೇಕೋ ? ಇದು ಕಾಂಗ್ರೆಸ್ ಪಕ್ಷಕ್ಕೆ ಬಿಟ್ಟಿರತಕ್ಕಂಥ ವಿಚಾರ. ನಾನು ಅದಕ್ಕೆ ಹೋಗುವುದಿಲ್ಲ. ಇಲ್ಲಿ ರಾಜೀವ್ ಗಾಂಧೀಯವರು 8 ನೇ ತಾರೀಖು ಒಂದು ಪತ್ರವನ್ನು ಬರೆದರು ಎನ್ನುವ ಕಾರಣಕ್ಕಾಗಿ ಪಂಚಾಯತಿಯ ಮೂರನೇ ಎರಡರಷ್ಟು ಬೆಂಬಲ ಅಲ್ಲಿಗೆ; ಜಿಲ್ಲಾಪರಿಷತ್ತಿನ ಬಗ್ಗೆ ಈ ರೀತಿ ಒಂದು ಕಾಗದವನ್ನು ಬರೆದಿರಲಿಲ್ಲ; ಆದುದರಿಂದ ಅದು ಅರ್ಧಕ್ಕೇ ಸಿಂಪಲ್ ಮೆಜಾರಿಟಿ. ಇವರು ಕಾಗದವನ್ನು ಬರೆದಿರುವ ಕಾರಣಕ್ಕಾಗಿ ಪಂಚಾಯತಿಗೆ ಮೂರನೇ ಎರಡು ಭಾಗ. ಒಂದು ವೇಳೆ ಇದರ ಕಾಪಿ ಪ್ರತಿ ಜಿಲ್ಲಾ ಪರಿಷತ್ತಿನ ಅಧ್ಯಕ್ಷರಿಗೆ ಹೋಗಿದ್ದರೆ ಅದು ಮೂರನೇ ಎರಡು ಭಾಗ ಉಳಿಯುತ್ತಿತ್ತು. ಅಂದರೆ ಎಲ್ಲಿ ತಾವು ಈ ಆದೇಶವನ್ನು ಮುರಿಯುವುದಕ್ಕೆ ಅವಕಾಶವಿದೆಯೋ ಅಲ್ಲೆಲ್ಲಾ ಮುರಿದಿದ್ದಾರೆ. ಈ ಪತ್ರ ಇನ್ನು ಸುದೀರ್ಘವಾಗಿದೆ. ನಾನು ಪೂರ್ತಿಯಾಗಿ ಓದುವುದಿಲ್ಲ. ಒಂದು ಮಾತನ್ನು ಅದರಲ್ಲಿ ಬರೆದಿದ್ದಾರೆ.

ಈಗ ಶೇಕಡ 30 ರಷ್ಟು ಸ್ಥಾನವನ್ನು ಮಹಿಳೆಯರಿಗಾಗಿ ಮೀಸಲಾಗಿರಿಸಿದ್ದೇವೆ, ನಾವು ಮಾಡಿದ್ದೇವೆ ಎನ್ನುವ ಒಂದು ಪ್ರತಿಷ್ಠೆಯ ಮೇಲೆ ಈ ಸರ್ಕಾರ ಮಂಡನೆಯನ್ನು ಮಾಡಿದರೆ ಮೂಲ ಪ್ರತಿ ಇದಕ್ಕೆ ಒಂದು ತರಹದ ಕರಡು ಶಾಸನ. ಆ ಕರಡು ಶಾಸನದಲ್ಲಿ ಏನು ಇದೆ ? ಕರಡು ವಿಧೇಯಕದ ಲಕ್ಷಣಗಳು; ಅಲ್ಲಿ ಹಿಂದುಳಿದವರ್ಗಕ್ಕೆ ಸೇರಿದ ವ್ಯಕ್ತಿಗೆ ಕನಿಷ್ಟಪಕ್ಷ ಒಂದು ಸ್ಥಳವನ್ನಾದರೂ ಮೀಸಲಿಡತಕ್ಕಂಥದ್ದು. ಮಂಡಲ ಪಂಚಾಯಿತಿಯ ರಾಜಸ್ವ ಸ್ಥಾನದಲ್ಲಿ ಮನೆ ತೆರಿಗೆ, ಭೂಮಿಯ ಮೇಲಿನ ತೆರಿಗೆ, ನೀರಿನ ದರ, ಉಪಕರಣಗಳು ಮನರಂಜನೆ ತೆರಿಗೆ, ಮಾರುಕಟ್ಟೆ ಶುಲ್ಕ ಮುಂತಾದವುಗಳು ಒಳಗೊಂಡಿದೆ. ಆಮೇಲೆ ಮಂಡಲ ಪಂಚಾಯಿತಿಯ

I am quoting from the Debates Dt: 11-8-1983 to 19-8 1983 page 237.

ಪ್ರತಿಯೊಂದು ಮಂಡಲ ಪಂಚಾಯಿತಿಯಲ್ಲಿ ಶೇಕಡ 30 ಕ್ಕೆ ಆದಷ್ಟು ಹತ್ತಿರವಾದ ಸಂಖ್ಯೆಯ ಸ್ಥಾನಗಳನ್ನು ಮಹಿಳೆಯರಿಗಾಗಿ ಮೀಸಲಿಡತಕ್ಕದ್ದು; ಏನು ಹೊಸದನ್ನು ಮಾಡಿದ್ದೇವೆ ಎಂದು ಹೇಳುತ್ತೀರಲ್ಲಾ, ಅದನ್ನೇ ನಾವು ಇಲ್ಲಿ ಹೇಳಿದ್ದೇವೆ. ಮಂಡಲ ಪಂಚಾಯಿತಿಯ ಒಟ್ಟು ಸದಸ್ಯರ ಶೇಕಡ 30 ರಷ್ಟು ಸ್ಥಾನಗಳನ್ನು ಮಹಿಳೆಯರಿಗಾಗಿ ಮೀಸಲಾಗಿಡತಕ್ಕದ್ದು. ಮಂಡಲ ಪಂಚಾಯಿತಿಯ ಒಟ್ಟು ಸ್ಥಾನಗಳಿಗೆ ಅನುಸೂಚಿತ ಜಾತಿ ಮತ್ತು ಅನುಸೂಚಿತ ಆದಿಮ ಜಾತಿಗಳಿಗೆ ಸಂಖ್ಯೆಯ ಪ್ರಮಾಣಕ್ಕನುಸಾರವಾಗಿ ಸ್ಥಾನಗಳನ್ನು ಮೀಸಲಿಡ ತಕ್ಕದ್ದು. ಈ ಪತ್ರಕ್ಕಾದರೂ ಈ ತಿದ್ದುಪಡಿ ಪೂರಕವಾಗಿದೆಯೇ ಅಂದರೆ, ಅದಿಲ್ಲ, ಹೋಗಲಿ, ಇವು ಯಾವುವೂ ಇಲ್ಲ, ರಾಜ್ಯಾಂಗದ 64 ನೇ ತಿದ್ದುಪಡಿ ಇದೆಯಲ್ಲಾ, ಆ 64ನೇ ತಿದ್ದುಪಡಿಗೆ ಅನುಗುಣವಾಗಿಲ್ಲ. ಈ ತಿದ್ದುಪಡಿ ಸಂಸತ್ತಿನ ಲೋಕಸಭೆಯಲ್ಲಿ ಮಂಡನೆ ಆಗಿ ಪಾಸ್ ಆಯಿತು; ರಾಜ್ಯ ಸಭೆಯಲ್ಲಿ ಮಸೂದೆಗೆ ವಿರುದ್ಧವಾಗಿ ಮತಕೊಟ್ಟವರಲ್ಲಿ ನಾನೂ ಒಬ್ಬ ಸದಸ್ಯ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ಅಲ್ಲಿ ಪರವಾಗಿ ಓಟು ಕೊಟ್ಟು ಇಲ್ಲಿ ಹೇಳಿದ್ದರೆ ಸರಿಯಾಗಿತ್ತು.

ಶ್ರೀ ಡಿ. ಬಿ. ಚಂದ್ರೇಗೌಡ :- ಇವತ್ತು ಯಾವುದನ್ನು ವಿರೋಧ ಮಾಡುತ್ತಿದ್ದೆವೋ ಅಂತಹದೇ ಒಂದು ಸ್ಥಿತಿಯನ್ನು ಅಲ್ಲಿ ವಿರೋಧ ಮಾಡಿದ್ದೇವೆ. ಅಲ್ಲಿ ಒಂದೇ ಒಂದು ಕಾರಣ ಏನಿತ್ತು ಅಂದರೆ, ಇವತ್ತು ಶ್ರೀಮಾನ್ ಬಸವಲಿಂಗಪ್ಪನವರು ಅಧಿಕಾರವನ್ನು ಸರ್ಕಾರಕ್ಕೆ ಎಂದು ಏನು ತೆಗೆದುಕೊಂಡಿದ್ದಾರೆ.

He wants to take the power to the State Government.

ಆ ಸ್ಟೇಟ್ ಗೌರ್ನ್‌ಮೆಂಟ್‌ಗೆ ಪವರ್ ಇರಲಿಲ್ಲವೆಂಬ ಕಾರಣಕ್ಕೆ ನಾವು ವಿರೋಧ ಮಾಡಿದ್ದೇವೆ.

Directly between Delhi to Theerthahalli or Sorab, by pssing the State Government. ಹೀಗೆ ಸ್ಟೇಟ್ ಗೌರ್ನ್‌ಮೆಂಟ್ ಅನ್ನು ಬೈಪಾಸ್ ಮಾಡಿದ್ದರು ಎಂಬ ಒಂದೇ ಒಂದು ಕಾರಣಕ್ಕಾಗಿ ಆ ಮಸೂದೆಯನ್ನು ತಿರಸ್ಕರಿಸಿದ್ದೇವೆ. ಅದನ್ನು ವಿರೋಧ ಮಾಡಿದ್ದೇವೆ. ಅದು ಒಂದನ್ನು ಅವರು ಒಪ್ಪಿಕೊಂಡಿದ್ದರೆ ನಾವು ತಿದ್ದುಪಡಿಗೆ ಒಪ್ಪಿಕೊಳ್ಳುವುದಕ್ಕೆ ತಯಾರಾಗಿದ್ದೇವೆಂದು ಪತ್ರ ಬರೆದಿದ್ದೇವೆ. ವ್ಯವಹಾರ ಮಾಡಿದ್ದೇವೆ. **Let me be frank**

ಶ್ರೀ ಎ. ಬಿ. ಜಕನೂರು :- ಅಷ್ಟೇ ತಿದ್ದುಪಡಿಯನ್ನು ಮಾಡಿ ಲೋಕಸಭೆಗೆ ರಾಜ್ಯಸಭೆಯವರು ಕಳುಹಿಸಲು ಬರುತ್ತಿತ್ತಲ್ಲಾ; ಅದಕ್ಕೆ ತಿದ್ದುಪಡಿ ತಂದು ರಾಜ್ಯಸಭೆಯಿಂದ ಲೋಕಸಭೆಗೆ ಕಳುಹಿಸಬಹುದಾಗಿತ್ತು.

ಶ್ರೀ ಡಿ. ಬಿ. ಚಂದ್ರೇಗೌಡ :- ಅದಕ್ಕೆ ನಾನು ಹೇಳಿದೆ. ಬೆಳಿಗ್ಗೆ ನೀವು ಒಂದು ಹೇಳಿದಿರಲ್ಲಾ; ಆ ತರಹ ಇದು. **Madam Deputy Speaker, let me refer 64th Amendment Bill.**

ಇಲ್ಲಿ ಒಂದು ಮುಖ್ಯವಾದದ್ದು ಏನು ? ನಮ್ಮ ಹಳೆಯ ಜಿಲ್ಲಾ ಪರಿಷತ್ತಿನ ಮಸೂದೆಯಲ್ಲಿರುವ ಭಾಷೆಯನ್ನೇ 64 ನೇ ತಿದ್ದುಪಡಿ ಮಸೂದೆಯಲ್ಲಿ ಬಳಸಿದ್ದಾರೆ. ಅರ್ಥಾತ್ 64 ನೇ ತಿದ್ದುಪಡಿಗೆ ಶ್ರೀಮಾನ್ ರಾಜೀವ್ ಗಾಂಧಿಯವರಿಗೆ ಪ್ರೇರಣೆ ಸ್ಫೂರ್ತಿ ಬಂದಿದ್ದು ಕರ್ನಾಟಕದ ನಜೀರ್‌ಸಾಬ್‌ರವರು ಮಾಡಿದರಲ್ಲಾ ಈ ಶಾಸನ ಮಸೂದೆ. ದಯಮಾಡಿ ತೆಗೆದು ನೋಡಿ ಇದು ಸರಿಯಾಗಿ ನಿಮಗೆ ಕಾಣಲಿಲ್ಲ; ಅದೇ ಭಾಷೆ ಬಳಸಿದ್ದಾರೆ ಈ ಮಸೂದೆ ಲೋಕಸಭೆಯಲ್ಲಿ ಮಂಜೂರಾಯಿತು. ಅಂದರೆ ಜನ ಪ್ರತಿನಿಧಿ ಸಭೆಯಲ್ಲಿ ಮಂಜೂರಾಯಿತು. ಆದರೆ ರಾಜ್ಯಸಭೆಯಲ್ಲಿ ಅದು ಬಿದ್ದುಹೋಯಿತು. ರಾಜ್ಯ ಸಭೆಯಲ್ಲಿ ಬಿದ್ದುಹೋದ ಮಸೂದೆಯನ್ನು ಮಾನ್ಯ ಸದಸ್ಯರು ಹೇಳಿದಂತೆ ತಿದ್ದುಪಡಿ ಮಾಡಿ ಲೋಕಸಭೆಯಲ್ಲಿ ತರಬಹುದಾಗಿತ್ತು. ತರುವುದಕ್ಕೆ ಸಾಧ್ಯವಿತ್ತು ಆದರೆ ಆಗಿನ ಪರಿಸ್ಥಿತಿ ಏನಾಯಿತೆಂದರೆ, ಸರ್ಕಾರಗಳು ಉರುಳಿದವು. ಅದೇ ಕಾರಣಕ್ಕಾಗಿ 106 ಜನ ಸದಸ್ಯರು ರಾಜೀನಾಮೆ ಕೊಟ್ಟರು. ಚುನಾವಣೆ ಬಂತು.

These are all political developments. I do not want to go in to the details. Please refer to 11th schedule, Ariicle 243(e)--Education including primary and secondary education. ಆದರೆ ನಮ್ಮ ಈ ಮಸೂದೆಯಲ್ಲಿ ಪ್ರೈಮರಿ ಎಜ್ಯುಕೇಷನ್ ಹೊರತುಪಡಿಸಿ ಎಲ್ಲಾ ಎಜ್ಯುಕೇಷನ್ ಅನ್ನು ವಾಪಸ್ಸು ತೆಗೆದುಕೊಳ್ಳುತ್ತಿದ್ದಾರೆ. Is it in consonance with the 64 the Amendment Bill ? When piloting the Bill, he said it. ಹೇಳಿದರು ಸ್ವಾಮಿ, ಇದು ಬೆಳಿಗ್ಗೆ 64ನೇ ತಿದ್ದುಪಡಿ ತದ್ರೂಪ ಎಂದು. 64ನೇ ರಾಜ್ಯಾಂಗದ ತಿದ್ದುಪಡಿ ಮಸೂದೆಗೆ ತದ್ರೂಪ ಎಂದು.

ಶ್ರೀ ಬಿ. ಬಸವಲಿಂಗಪ್ಪ :– ಬಹುತೇಕ.

ಶ್ರೀ ಡಿ. ಬಿ. ಚಂದ್ರೇಗೌಡ :– ನೀವು ಇರಲಿಲ್ಲ, ಮಂತ್ರಿಗಳು ಹೇಳಿದರು ಕೇಳಿ ಸ್ವಾಮಿ.

(ಶ್ರೀ ಎಸ್. ಹೆಚ್. ಕೌಜಲಗಿಯವರು ಅಧ್ಯಕ್ಷರ ಪೀಠವನ್ನು ಅಲಂಕರಿಸಿದರು)

ಶ್ರೀ ಬಿ. ಬಸವಲಿಂಗಪ್ಪ :– ನಾನು ಏನು ಹೇಳಿದೆ ಅಂದರೆ, 64 ನೇ ರಾಜ್ಯಾಂಗ ತಿದ್ದುಪಡಿ ಏನಿತ್ತು, ಅದಕ್ಕೆ ಬಹುತೇಕ ತಿದ್ದುಪಡಿಗಳನ್ನು ಇಲ್ಲಿ ಅಳವಡಿಸಿದ್ದೇನೆ ಎಂದು ಹೇಳಿದೆ.

ಶ್ರೀ ಡಿ. ಬಿ. ಚಂದ್ರೇಗೌಡ :– 64ನೇ ತಿದ್ದುಪಡಿಯಲ್ಲಿ ನಾನು ಏನು ತಿಳಿದುಕೊಂಡಿದ್ದೇನೆಂದರೆ, This is the directive of the Congress Party so far as other States are concerned and it is the manda:e of the Party as to what type of the Panchayat Raj insti:utions, what type of decentralisation that we should have in the ‹ ountry and the States ? ಕಾಂಗ್ರೆಸ್‌ನವರಿಗೆ ವಿಕೇಂದ್ರೀಕೃತ ವ್ಯವಸ್ಥೆಗೆ 64 ನೇ ತಿದ್ದುಪಡಿ ಒಂದು ಆದೇಶ.

ಶ್ರೀ ಕಾಗೋಡು ತಿಮ್ಮಪ್ಪ :– ಅದನ್ನು ಕಾಂಗ್ರೆಸ್‌ನವರು ಹೇಳಬೇಕು.

ಶ್ರೀ ಹೆಚ್. ಏಕಾಂತಯ್ಯ :– ನೀವು ಹೇಳದೇ ಇರುವುದರಿಂದ ಅವರು ಹೇಳುತ್ತಿದ್ದಾರೆ.

ಶ್ರೀ ಬಿ. ಬಸವಲಿಂಗಪ್ಪ :– ಈಗ ಶ್ರೀಮಾನ್ ಚಂದ್ರೇಗೌಡರು ಹುಟ್ಟುತ್ತಾ ಕಾಂಗ್ರೆಸ್‌ನವರು. ಮಧ್ಯೆ ಕಾಂಗ್ರೆಸ್‌ನವರು. ಈಗ ನೀವು ಕಾಂಗ್ರೆಸ್‌ನವರು ಅಲ್ಲ ಎಂದು ಹೇಳುತ್ತೀರಾ. ಈಗ ಅದು ಏನಾಗಿದೆ, ಇವರಿಗೆ ಪರಿಸ್ಥಿತಿ ಹೇಗೆ ಆಯಿತು ಅಂದರೆ ಜನತಾದಳ, ಜನತಾದಳ (ಎಸ್) ಆಯಿತು; ಈಗ ಏನಾಗಿದೆ ಕಾಂಗ್ರೆಸ್ ನಲ್ಲಿಯೇ ಇದ್ದರೆ ಚೆನ್ನಾಗಿತ್ತು ಅಂತ ನಿಮ್ಮ ಮನಸ್ಸಿನಲ್ಲಿ ಭಾವನೆ. ಈಗ ಜನತಾದಳದಲ್ಲಿರಬೇಕೋ, ಜನತಾದಳ (ಎಸ್) ನಲ್ಲಿರಬೇಕೋ ಎಂದು ಜಿಜ್ಞಾಸೆ ಬಂದಿದೆ. ಸ್ವಾಮಿ ನೀವು ಅದನ್ನೆಲ್ಲಾ ಬಿಟ್ಟು ನೀವು ಮೊದಲಿಂದಲೂ ಕಾಂಗ್ರೆಸ್‌ನವರು. ದಯಮಾಡಿ ನೀವು ಏತಕ್ಕೆ ಮನಸ್ಸು ಬದಲಾವಣೆ ಮಾಡಬಾರದು. ದಯಮಾಡಿ ಈ ಕಡೆ ಬಂದರೆ ಬಹಳ ಸಂತೋಷ.

ಶ್ರೀ ಡಿ. ಬಿ. ಚಂದ್ರೇಗೌಡ :– ಶ್ರೀಮಾನ್ ದೇವರಾಜ್ ಅರಸರವರನ್ನು ಕಾಂಗ್ರೆಸ್‌ನಿಂದ ಹೊರ ಹಾಕಿದಾಗ ನೀವು ಯಾವ ಕಾಂಗ್ರೆಸ್‌ನಲ್ಲಿದ್ದಿರಿ. ಇದೇ ಕಾಂಗ್ರೆಸ್‌ನಲ್ಲಿದ್ದಿರಿ ಅಲ್ಲ. ಅದು ರೆಕಾರ್ಡ್‌ನಲ್ಲಿರಲಿ, ನಾನು ಆಮೇಲೆ ಮಾತನಾಡುತ್ತೇನೆ; ಯಾವ ಕಾಂಗ್ರೆಸ್ ಎಂದು;

ಶ್ರೀ ಬಿ. ಬಸವಲಿಂಗಪ್ಪ :– ನಾವು ಆಹ್ವಾನ ಮಾಡುತ್ತೇವೆ.

ಶ್ರೀ ಡಿ. ಬಿ. ಚಂದ್ರೇಗೌಡ :– ತಮ್ಮ ಆಹ್ವಾನ ಸರಿ, ಆದರೆ ನೀವು ಯಾವ ಕಾಂಗ್ರೆಸ್‌ಗೆ ಆಹ್ವಾನ ಮಾಡುತ್ತೀರಿ ಎಂದು ಗೊತ್ತಾಗಬೇಕಲ್ಲ. ಏಕೆಂದರೆ, ನೀವು ಯಾವ ಯಾವುದೋ ಸಮಯಕ್ಕೆ ಒಂದೊಂದು ಕಾಂಗ್ರೆಸ್‌ನಲ್ಲಿ ಇರುತ್ತೀರಿ; ಅದು ಯಾವ ಕಾಂಗ್ರೆಸ್. ಹೇಳಿ.

ಶ್ರೀ ಬಿ. ಬಸವಲಿಂಗಪ್ಪ :– ಈಗ ನಾನು ಎಲ್ಲಿ ಇದ್ದೇನೋ ಅಲ್ಲೇ ಇದ್ದೇನೆ. ನಾವು ಜನತಾದಳ ಎಂದು ಮಾಡಿಕೊಂಡು ಹೋಗಲಿಲ್ಲ. ತಮ್ಮ ಹಾಗೆ. ಈಗ ನೀವು ಓರಿಜಿನಲ್ ಕಾಂಗ್ರೆಸ್, ಕಾಂಗ್ರೆಸ್‌ನವರು ಬಿಲ್ಲಿನ ಮೇಲೆ ಏನು ಹೇಳಬೇಕಾಗಿತ್ತೋ ಅದೇ ಭಾಷೆ ಈ ವಿಚಾರದಲ್ಲಿ ನೀವು ಹೇಳುತ್ತಿದ್ದೀರಿ, ಬಹಳ ಸಂತೋಷ.

ಶ್ರೀ ಡಿ. ಬಿ. ಚಂದ್ರೇಗೌಡ :– ನಾನು ಕಾಂಗ್ರೆಸ್‌ನಲ್ಲಿ ಇಲ್ಲದೇ ಇದ್ದರೂ, ಕಾಂಗ್ರೆಸ್‌ನವರು ದಾರಿ ತಪ್ಪಿದಾಗ ಸರಿಮಾಡುವುದು ಬೇಡವೇ ? ನೀವು ದಾರಿ ತಪ್ಪುತ್ತಿದ್ದೀರಿ; ಸರಿಯಾದ ದಾರಿಯಲ್ಲಿ ಹೋಗಿ ಎಂದು ಹೇಳು-ವುದು ಬೇಡವೇ ?

ಶ್ರೀ ಬಿ. ಎಸ್. ಯಡಿಯೂರಪ್ಪ :– ಮಾನ್ಯ ವಿರೋಧ ಪಕ್ಷದ ನಾಯಕರು ನಮ್ಮ ಸಮಾಧಾನಕ್ಕಾದರೂ ಕಾಂಗ್ರೆಸ್‌ಗೆ ಬರುವುದಿಲ್ಲ ಎಂದು ಹೇಳಿ, ಏಕೆಂದರೆ ಅದು ರೆಕಾರ್ಡ್‌ಗೆ ಹೋಗಿದೆ.

ಶ್ರೀ ಎಂ. ವಿ. ವೆಂಕಟಪ್ಪ :– ನಮ್ಮ ಕಾಂಗ್ರೆಸ್ ಅಧ್ಯಕ್ಷರಾದ ರಾಜೀವ್ ಗಾಂಧಿಯವರ ಹತ್ತಿರ ಅವರ ಪ್ರತಿನಿಧಿಗಳನ್ನು ಕಳುಹಿಸುತ್ತಾರೆ; ಅದು ಏತಕ್ಕೆ ಬೇಕು ?

3.50 ಪಿ. ಎಂ.

ಶ್ರೀ ಡಿ. ಬಿ. ಚಂದ್ರೇಗೌಡ :– ಇದು ವಿಕೇಂದ್ರೀಕೃತ ವ್ಯವಸ್ಥೆಗೆ ಪೂರಕವಾಗಿ ಯಾರಿದ್ದಾರೆ, ಅವರು ಕಾಂಗ್ರೆಸ್ ಅಧ್ಯಕ್ಷರಾಗಿದ್ದರೂ ಕಳುಹಿಸುತ್ತೇವೆ, ಕಮ್ಯುನಿಸ್ಟ್ ಅಧ್ಯಕ್ಷರಿದ್ದರೂ ಕಳುಹಿಸುತ್ತೇವೆ, ಬಿ.ಜೆ.ಪಿ.ಯ ಅಧ್ಯಕ್ಷರಿದ್ದರೂ ಕಳುಹಿಸುತ್ತೇವೆ, ಕೊನೆಗೆ ರೈತ ಸಂಘದ ಮುಖಂಡರಿದ್ದರೂ ಕಳುಹಿಸುತ್ತೇವೆ. ವಿಕೇಂದ್ರೀಕೃತ ವ್ಯವಸ್ಥೆಯ ಬಗ್ಗೆ ಯಾರು ಆಲೋಚನೆ ಮಾಡುತ್ತಾರೋ, ಅದರ ಬಗ್ಗೆ ಪರಿಪೂರ್ಣವಾದ ವಿಶ್ವಾಸವನ್ನು ಇಟ್ಟುಕೊಂಡಿರತಕ್ಕ ನಾವು, ಅವರ ಜೊತೆಯಲ್ಲಿ ಚರ್ಚೆ ಮಾಡಿದರೆ ಏನು ತಪ್ಪು ?

ಶ್ರೀ ಕಾಗೋಡು ತಿಮ್ಮಪ್ಪ :– ಅಂದರೆ ಶರಣಾಗತಿ ಆದಿರಿ ಅಂತ ಆಯಿತು.

ಶ್ರೀ ಡಿ. ಬಿ. ಚಂದ್ರೇಗೌಡ :– ಅದು ಶರಣಾಗತಿ ಅಲ್ಲ. ನಿಮಗೆ ಬುದ್ಧಿಯನ್ನು ಕಲಿಸುವುದಕ್ಕೆ. ನಿಮಗೆ ಏನು ಮಾಡಿದರೂ ಬುದ್ಧಿ ಬರುವುದಿಲ್ಲವಲ್ಲಾ, ನಾವು ಏನು ಮಾಡಬೇಕು ? ದಿಲ್ಲಿಯ ದರ್ಬಾರ್ ಆದರೂ ನಿಮಗೆ ಬುದ್ಧಿಯನ್ನು ಹೇಳಬಹುದೆಂದು ತಿಳಿದು, ಇವರು ತಪ್ಪು ಮಾಡಿದ್ದಾರೆಂದು ಅವರಿಗೆ ತಿಳಿಸುವುದಕ್ಕೆ ಹೋಗಿದ್ದಾರೆ. ಕೇಳುವುದಕ್ಕೆ ಹೋಗಿಲ್ಲ. ತಿಳಿಸುವುದಕ್ಕೆ ಹೋಗಿದ್ದಾರೆ; ಅದನ್ನೂ ತಿಳಿಸುತ್ತಾರೆ.

(ಗೊಂದಲ)

ಶ್ರೀ ಡಿ. ಬಿ. ಚಂದ್ರೇಗೌಡ :– ಇಲ್ಲಿ ಯಾರು ಕಾಂಗ್ರೆಸ್, ಯಾರು ಅಲ್ಲ ಎಂದು ಈಗಿನ ವ್ಯವಸ್ಥೆಯಲ್ಲಿ ಒಂದೂ ಕೂಡ ತಿಳಿಯುತ್ತಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ :– ನಮ್ಮ ರಾಷ್ಟ್ರದ ಪ್ರಜಾಪ್ರಭುತ್ವದ ಇತಿಹಾಸದಲ್ಲಿ ಮೊದಲನೇ ಸಾರಿ ಒಂದು ರಾಜಕೀಯ ಪಕ್ಷದವರು ಇನ್ನೊಂದು ರಾಜಕೀಯ ಪಕ್ಷದ ನಾಯಕರ ಮೊರೆ ಹೊಕ್ಕು......

(ಗೊಂದಲ)

ಶ್ರೀ ಡಿ. ಬಿ. ಚಂದ್ರೇಗೌಡ :– ಪಕ್ಷ ಒಂದೇ ಹೋಗಿಲ್ಲ. ಚುನಾಯಿತ ಜಿಲ್ಲಾ ಪರಿಷತ್ತುಗಳ ಅಧ್ಯಕ್ಷರುಗಳೇ ಹೋಗಿದ್ದಾರೆ. ಹಾಗಾದರೆ ಅವರು ಯಾವ ಪಕ್ಷಕ್ಕೆ ಸೇರಿರಬಹುದು ?

ಶ್ರೀ ಕಾಗೋಡು ತಿಮ್ಮಪ್ಪ :– ರಾಜಕೀಯ ತಂತ್ರವನ್ನು ನಿರೂಪಿಸುವ ಜವಾಬ್ದಾರಿ ಪ್ರತಿಯೊಂದು ರಾಜಕೀಯ ಪಕ್ಷಕ್ಕೂ ಇರುತ್ತದೆ. ಅದರಲ್ಲಿ ನಮ್ಮ ಸಿದ್ಧಾಂತ ನಮ್ಮ ಕಾರ್ಯಕ್ರಮಗಳನ್ನು ನಾವು ಒಪ್ಪಿ-ಕೊಂಡಿದ್ದೇವೆ, ನಾವು ಮಾಡುತ್ತೇವೆ. ತಾವೂ ಕೂಡ ಅಧಿಕಾರದಲ್ಲಿದ್ದವರು. ಇವತ್ತು ತಮಗೇನಾದರೂ ತೊಂದರೆಯಾಗಿದ್ದರೆ ನಿಮ್ಮ ಪಕ್ಷದ ವ್ಯಾಪ್ತಿಯಲ್ಲಿ ಅದನ್ನು ನಿವಾರಣೆ ಮಾಡಿಕೊಳ್ಳುವುದನ್ನು ಬಿಟ್ಟು ನಮ್ಮ ಪಕ್ಷದ ಅಧ್ಯಕ್ಷರನ್ನು ಭೇಟಿ ಮಾಡಿ ನಿಮ್ಮ ಕಷ್ಟಸುಖಗಳನ್ನು ಹೇಳಿಕೊಳ್ಳುವ ಪರಿಸ್ಥಿತಿ ಬಂತು ಎಂದರೆ ಅದು ಅತ್ಯಂತ ಹೀನ ಸ್ಥಿತಿ. ಅದರ ಬದಲು ನೀವು ನಮ್ಮ ಪಕ್ಷಕ್ಕೆ ಸೇರಿಕೊಂಡರೆ ಆಗ ನಿಮ್ಮ ಕಷ್ಟ ಸುಖಗಳು ಏನು ಎಂದು ಕೇಳಬಹುದು. ಏಕೆ ಸಂಕೋಚಪಟ್ಟುಕೊಳ್ಳುತ್ತೀರಿ ?

ಶ್ರೀ ಡಿ. ಬಿ. ಚಂದ್ರೇಗೌಡ :– ನಿಮಗೆ ರಾಜೀವ್ ಗಾಂಧಿಯವರ ಬಗ್ಗೆ ಎಷ್ಟು ಗೌರವ ಇದೆ ಎಂಬುದು ಚೆನ್ನಾಗಿ ತಿಳಿಯಿತು. ಅದು ಹೋಗಲಿ; ಆದರೆ ಇಲ್ಲಿ ಜನತಾದಳದವರು ಯಾರೂ ಕೂಡ ಅಲ್ಲಿಗೆ ಹೋಗಿಲ್ಲ. ಆದರೆ ಜಿಲ್ಲಾ ಪರಿಷತ್ತಿನ ಅಧ್ಯಕ್ಷರುಗಳು, ಇಲ್ಲಿ ಮೂರ್ಖತನ ನಡೆಯುತ್ತಿದೆ, ನಿಮ್ಮ ಆದೇಶಕ್ಕೆ ವಿರುದ್ಧವಾಗಿ ನಡೆದುಕೊಳ್ಳುತ್ತಿದ್ದಾರೆ. ಎಂದು ತಿಳಿಸುವುದಕ್ಕೆ ಹೋಗಿದ್ದಾರೆ; ಅದು ಬೇಡ ಅಂದರೆ ಬೇಡ.

(ಗೊಂದಲ)

ಶ್ರೀ ಎ. ಕೆ. ಅನಂತಕೃಷ್ಣ :— ಅದು ಬೇಡ.

ಶ್ರೀ ಡಿ. ಬಿ. ಚಂದ್ರೇಗೌಡ :— ಅದು ಬೇಡ ಎಂದರೆ ಬೇಡ. ನಿಮ್ಮ ಅಭಿಪ್ರಾಯ ನಿಮ್ಮ ಹತ್ತಿರವೇ ಇರಲಿ; ಇಲ್ಲಿ ಯಾರು ಏತಕ್ಕೆ ಹೋಗಿದ್ದಾರೆಂಬುದು ಮುಖ್ಯವಲ್ಲ; ವಿಕೇಂದ್ರೀಕೃತ ವ್ಯವಸ್ಥೆಯ ಬಗ್ಗೆ ಯಾರಿಗೆ ಆಸಕ್ತಿ ಇದೆ ಎಂದು ಅವರ ಭಾಷೆಯಿಂದಲೇ ಗೊತ್ತಾಗುತ್ತದೆ. ಅವರು ಒಂದು ಪಕ್ಷದ ಅಧ್ಯಕ್ಷರಾದ ಅಪರಾಧಕ್ಕೆ ಅವರ ಬಳಿ ಹೋಗಬಾರದೆಂದು ಎಲ್ಲಿದೆ ?

ಶ್ರೀ ಕಾಗೋಡು ತಿಮ್ಮಪ್ಪ :— ಇನ್ನೊಂದು ರಾಜಕೀಯ ಪಕ್ಷ ಇದೆ.

ಶ್ರೀ ಡಿ. ಬಿ. ಚಂದ್ರೇಗೌಡ :— ರಾಜಕೀಯ ಪಕ್ಷವನ್ನು ಹುಟ್ಟುಹಾಕಿದವರು ನಾವೂ ನೀವೂ ಸೇರಿ ಒಂದು ಪಕ್ಷದಲ್ಲಿ ಇವತ್ತು ಅದು ಇದೆಯೇ ?

ಶ್ರೀ ಕಾಗೋಡು ತಿಮ್ಮಪ್ಪ :— ಇನ್ನೊಂದು ಪಕ್ಷದ ಮೊರೆಗೆ ನಾವು ಯಾವಾಗಲೂ ಯಾವತ್ತೂ ಖಂಡಿತ ಹೋಗಿರಲಿಲ್ಲ.

ಶ್ರೀ ಡಿ. ಬಿ. ಚಂದ್ರೇಗೌಡ :— ಸಮಾಜವಾದಿ ಪಕ್ಷದಿಂದ ಹುಟ್ಟುಹಾಕಿದವರು ನಾವು. ಈಗ ನಿಮ್ಮ ಸಮಾಜವಾದಿ ಪಕ್ಷವೂ ಇಲ್ಲ, ನಮ್ಮ ಸಮಾಜವಾದಿ ಪಕ್ಷವೂ ಇಲ್ಲ. ಆ ಲೇಬಲ್‌ಗಳೆಲ್ಲಾ ಬದಲಾವಣೆ ಆದವು.

(ಗೊಂದಲ)

ಶ್ರೀ ಬಿ. ಹೆಚ್. ಬನ್ನಿಕೋಡ್ :— ಸಮಾಜವಾದ, ಸಮತಾವಾದ ಎಲ್ಲವೂ ಹೋಗಿ ಈಗ ಎಲ್ಲ ಕಡೆಗೆ ಕೇವಲ ಮಜಾವಾದ ಬಂದಿದೆ.

ಶ್ರೀ ಡಿ. ಬಿ. ಚಂದ್ರೇಗೌಡ :— 64ನೇ ತಿದ್ದುಪಡಿಯಲ್ಲಿ ಒಂದು ಮಾತನ್ನು ಮುಖ್ಯವಾಗಿ ಹೇಳಿದ್ದಾರೆ. **243(c) says, Panchayat means an institution of self-government. 'An institution of self-government'** ಸ್ವಯಂ ಸರ್ಕಾರ. ಅಂದರೆ ಯಾವ ರಾಜ್ಯ ಸರ್ಕಾರ ಅಥವಾ ಕೇಂದ್ರ ಸರ್ಕಾರದವರ ಮಧ್ಯ ಪ್ರವೇಶ ಇಲ್ಲದೇ ಇರತಕ್ಕ ಸ್ವಯಂ ಸರ್ಕಾರ ಎನ್ನತಕ್ಕ ಮಾತನ್ನು ಇದರಲ್ಲಿ ಬಳಸಿದ್ದಾರೆ. ಈ ಸೆಲ್ಫ್ ಗೌರ್ನ್‌ಮೆಂಟ್ ಎನ್ನತಕ್ಕ ಪದ ಎಲ್ಲಿಂದ ಬಂತು ?

ಶ್ರೀ ಎ. ಕೆ. ಅನಂತಕೃಷ್ಣ :— ಕರ್ನಾಟಕ ರಾಜ್ಯದಲ್ಲಿ......

ಶ್ರೀ ಡಿ. ಬಿ. ಚಂದ್ರೇಗೌಡ :— ಈ ಪದ ಬಂದಿದ್ದು ರಾಜ್ಯಾಂಗದ ನಿರ್ದೇಶನ ಸೂತ್ರದಲ್ಲಿ **Directive principles of the Constitution** ನಲ್ಲಿ ಆರ್ಟಿಕಲ್ 40 ರಲ್ಲಿ ಬಳಸಿರತಕ್ಕ ಪದ ಇದು.

''The State shall take steps to organise village Panchayats and endow them with such powers and authority as may be necessary to enable them to function as units of self-government.''

ಸೆಲ್ಫ್ ಗೌರ್ನಮೆಂಟ್ ಎನ್ನತಕ್ಕಂಥದ್ದು ಡೈರೆಕ್ಟೀವ್ ಪ್ರಿನ್ಸಿಪಲ್ ಆಫ್ ದಿ ಕಾನ್‌ಸ್ಟಿಟ್ಯೂಷನ್ನಿನ ನಿರ್ದೇಶನದ ಸೂತ್ರದಲ್ಲಿ ಬಂದಿದೆ ಎನ್ನತಕ್ಕಂಥ ಕಾರಣಕ್ಕಾಗಿ ಅದೇ ಪದವನ್ನು ಇಲ್ಲಿ ಬಳಕೆ ಮಾಡಿದ್ದಾರೆ. ಇದನ್ನು ರಾಜ್ಯಾಂಗದ 64ನೇ ತಿದ್ದುಪಡಿಯಲ್ಲಿ ಬಳಕೆ ಮಾಡಿದ್ದಾರೆ ಈ ಪದದ ಬಳಕೆಯ ಉದ್ದೇಶ ಏನು "ಸ್ವರಾಜ್ಯ ಘಟಕ" ಈ ಸ್ವರಾಜ್ಯ ಘಟಕವನ್ನು ಬಹಳ ವಿಸ್ತಾರವಾಗಿ, ವಿಸ್ತೃತವಾಗಿ ಅಶೋಕ ಮೆಹತಾ ಕಮಿಟಿಯಲ್ಲಿ ವರದಿ ಮಾಡಿದ್ದಾರೆ. ಅಶೋಕ ಮೆಹತಾ ಕಮಿಟಿ ಈ ಒಂದು ಗ್ರಾಮ ಜನರ ಮೇಲೆ ಬಹಳ ವರ್ಷಗಳಿಂದ, ಸ್ವಾತಂತ್ರ್ಯ ಬಂದಾಗಿನಿಂದ ಮತ್ತು ಸ್ವಾತಂತ್ರ್ಯ ಪೂರ್ವಕ್ಕೂ ಕೂಡ ಈ ಗ್ರಾಮ ಸ್ವರಾಜ್ಯವನ್ನು ಒಂದು ಪ್ರಯೋಗ ಶಾಲೆಯಾಗಿ ಪರಿವರ್ತಿಸಿದ್ದೇವೆ. ಎಲ್ಲ ಪ್ರಯೋಗಗಳು ನಡೆಯತಕ್ಕಂಥದ್ದು ಗ್ರಾಮೀಣ ಪ್ರದೇಶಗಳಲ್ಲಿ 1920ರ ಸುಮಾರಿನಿಂದಲೂ ಇದು ಚರ್ಚೆಯಾಗುತ್ತಾ ಬಂದಿತ್ತು. ಬಲವಂತರಾಯ ಮೆಹತಾ ಕಮಿಟಿ ಆಯಿತು, ಅದಾಯಿತು, ಇದಾಯಿತು ಕಟ್ಟಕಡೆಗೆ ಅಶೋಕ ಮೆಹತಾ ಕಮಿಟಿ ಒಂದು ಸ್ವರಾಜ್ಯ ಘಟಕದ ಕಲ್ಪನೆ ಕೊಟ್ಟಿತು. ನಿಶ್ಚಿತವಾದಂಥ ಸ್ವರೂಪವನ್ನು ಕೊಟ್ಟಿತು. ಏನು ನಿಶ್ಚಿತವಾದ ಸ್ವರೂಪ. ಈ ಸ್ವರಾಜ್ಯ ಘಟಕ ಪರಿಣಾಮಕಾರಿಯಾಗಿ ತನ್ನನ್ನು ತಾನು ಆಳಿಕೊಳ್ಳಬೇಕಾದರೆ ಏನು ಬದಲಾವಣೆಗಳು ಅಗತ್ಯವೆನ್ನುವುದನ್ನು ಅವರು

ರೂಪ ಮಾಡುತ್ತಾರೆ. ಆ ಕಲ್ಪನೆಯು ಪ್ರಕಾರ ನಾನು ಇದನ್ನು ಬಹಳ ದೂರಕ್ಕೆ ತೆಗೆದುಕೊಂಡು ಹೋಗುವುದಿಲ್ಲ. ಈ ಕಲ್ಪನೆಯ ಪ್ರಕಾರ ಭಾರತ ಎನ್ನುವಂಥದ್ದು ಸ್ವಯಮ್ ಆಡಳಿತವುಳ್ಳ ಅಸಂಖ್ಯಾತ ಗ್ರಾಮಗಳ ಭಾರತ· ಇಂಥ ಅಸಂಖ್ಯಾತ ಸ್ವಯಮ್ ಸರ್ಕಾರಗಳು ಸೇರಿ ಒಂದು ಮಹಾನ್ ಭಾರತವಾಗಿದೆ. ಇದರ ಮುಂದಿನ ಹಂತ ಕಿರು ಗ್ರಾಮ ಘಟಕಗಳಿಗೂ ಭಾರತ ಎಂಬ ಬಹು ವಿಶಾಲವಾದ ರಾಷ್ಟ್ರಕ್ಕೂ ನಡುವೆ ಇರತಕ್ಕಂಥ ಸಂಬಂಧ ಏನು ? ನಡುವೆ ಇರತಕ್ಕಂಥ ಸಹಕಾರ ಏನು ? ನಡುವೆ ಇರತಕ್ಕಂಥ ಭಾಂದವ್ಯ ಏನು ? ಇದನ್ನು ಬಹಳ ವಿಸ್ತಾರವಾಗಿ ಪ್ರಸ್ತಾಪ ಮಾಡಿದ್ದಾರೆ. ಹಾಗೆ ಪ್ರಸ್ತಾಪ ಮಾಡುತ್ತಾ ಎರಡು ಕಾರಣಗಳನ್ನು ಕೊಡುತ್ತಾರೆ. ಜಿಲ್ಲಾ ಪರಿಷತ್ತು ಮತ್ತು ಮಂಡಲ್ ಪಂಚಾಯತ್‌ಗಳ ವ್ಯವಸ್ಥೆಯಲ್ಲಿ ಸುಮಾರು ಈ ದೇಶದಲ್ಲಿ 53 ಸಾವಿರ ತಾಲ್ಲೂಕು ಕೇಂದ್ರಗಳಿವೆ. ಈ 53,000 ತಾಲ್ಲೂಕು ಕೇಂದ್ರಗಳಲ್ಲಿರುವ ನಮ್ಮ ಜನಸಂಖ್ಯೆಯನ್ನು ಆಧರಿಸಿ ನೋಡಿದರೆ, ಆಳ್ವಿಕೆಗೆ ಇಂಥ ಘಟಕಗಳು ಚಿಕ್ಕದಾಗುತ್ತವೆ· ಅರ್ಥಾತ್ ಜನಸಂಖ್ಯೆಯ ದೃಷ್ಟಿಯಿಂದ ದೊಡ್ಡದಾಗುತ್ತದೆ. ಆ ಕಾರಣದಿಂದ ಈ ಒಂದು ತಾಲ್ಲೂಕು ಘಟಕಗಳನ್ನು ಬಿಟ್ಟು ಸುಮಾರು 24 ಸಾವಿರ ಗ್ರಾಮಪಂಚಾಯತಿಗಳೇನಿವೆ. ಅವುಗಳ ಸರಾಸರಿ ಆದಾಯ 5 ಸಾವಿರಕ್ಕಿಂತಲೂ ಕಡಿಮೆ ಇದೆ. ಆದರೆ 53 ಸಾವಿರ ತಾಲ್ಲೂಕುಗಳಲ್ಲಿ ಗ್ರಾಮ ಪಂಚಾಯತಿಗಳನ್ನು ರಚನೆ ಮಾಡುವುದಕ್ಕೆ ಜನಸಂಖ್ಯೆಯು ಒಂದು ಆಲೋಚನೆಗೆ ಹೊಂದಿಕೊಳ್ಳತಕ್ಕಂಥ ಘಟಕಗಳಾಗುವುದಿಲ್ಲ. ಆದ್ದರಿಂದ 53 ಸಾವಿರ ತಾಲ್ಲೂಕು ಪಂಚಾಯತಿಗಳು ಬೇಡ, 24 ಸಾವಿರ ಹಳ್ಳಿಗಳ ಗ್ರಾಮ ಪಂಚಾಯತಿಗಳೂ ಬೇಡ. 24 ಸಾವಿರ ಗ್ರಾಮಗಳ ವಾರ್ಷಿಕ ಆದಾಯ 5 ಸಾವಿರಕ್ಕಿಂತ ಕಡಿಮೆ ಇದೆ· ಆದ್ದರಿಂದ ಗ್ರಾಮಗಳಿಗೆ ಬೇಕಾಗಿರತಕ್ಕಂಥ ಸೌಲಭ್ಯಗಳನ್ನು ಒದಗಿಸುವುದು ಕಷ್ಟ ಸಾಧ್ಯವಾಗುತ್ತದೆ. ಈ ಕಾರಣದಿಂದ ಈ ಶಿಫಾರಸ್ಸನ್ನು ಮಾಡುತ್ತಾರೆ. ಅದನ್ನು ಅವರು ತಮ್ಮದೇ ಆದ ಭಾಷೆಯಲ್ಲಿ ಹೇಳುತ್ತಾರೆ: ಆಡಳಿತದ ಹೊಸ ಸಂಸ್ಕೃತಿ ಎಂದು ಕರೆದು ಸ್ವಯಂ ಸರ್ಕಾರ (ಸೆಲ್ಫ್ ಗವರ್ನಮೆಂಟ್) ಎಂದು ಏನು ಹೇಳುತ್ತಾರೆ, ಇದರ ಉದ್ದೇಶ ಮತ್ತು ಆಡಳಿತಾತ್ಮಕ ವ್ಯವಸ್ಥೆಯ ಬಗ್ಗೆ ನಿಶ್ಚಿತವಾದ ಒಂದು ಸ್ವರೂಪವನ್ನು ಕೊಡುತ್ತಾರೆ. ಈ ನಿಶ್ಚಿತವಾದ ಸ್ವರೂಪ ಮತ್ತು ಈ ಸ್ವರೂಪ ನೆಲೆಯಾಗಿರಬೇಕೆಂಬ ದೃಷ್ಟಿಯಿಂದ ಈ ಘಟಕಗಳನ್ನು ಅವರು ಶಿಫಾರಸ್ಸು ಮಾಡಿದ್ದಾರೆ. ಈ ಶಿಫಾರಸ್ಸನ್ನು ಆಧರಿಸಿ ಒಂದು ಪ್ರಶ್ನೆ ಏಳುತ್ತದೆ. ಇಲ್ಲಿ ನಾವು ನಡೆಸುತ್ತಿರತಕ್ಕ ಅಧಿಕಾರದ ಕಟ್ಟಾಟವನ್ನು ಸುಭದ್ರವಾದ ಭಾರತವನ್ನು ನಿರ್ಮಾಣ ಮಾಡಲಿಕ್ಕೆ ಹೇಗೆ ಸಾಧ್ಯ ? ಯಾವ ರೂಪದಲ್ಲಿ ಮಾಡಬೇಕು ? ರಾಜ್ಯ ಶಕ್ತಿ ಯಾರ ಕೈಯಲ್ಲಿ ಇರಬೇಕು, ಯಾರು ರಾಜ್ಯ ಶಕ್ತಿಯನ್ನು ನಡೆಸಬೇಕೆಂಬುದು ಮೂಲತಃ ಸಿದ್ಧಾಂತ. ಇವೆಲ್ಲವನ್ನು ಗಮನಕ್ಕೆ ತೆಗೆದುಕೊಂಡು 1983ರ ಶಾಸನವನ್ನು ಏನು ಮಾಡಿದ್ದೇವೆ, ಇದು ಹದವಾದ ಮಾದರಿ. ಈ ಹದವಾದಂಥ ಮಾದರಿಯನ್ನು ವಿಕೃತಗೊಳಿಸತಕ್ಕ ಪ್ರಯತ್ನ ಇದು. ಎಲ್ಲಿ ವಿಕೃತವಾಗುತ್ತದೆಂದರೆ, ನಾವು 12 ಸಾವಿರದಿಂದ 8 ಸಾವಿರ ಎಂದು ಜನಸಂಖ್ಯೆಯನ್ನು ಆಧರಿಸಿದ್ದೇವೆ. ಇದನ್ನು ಒಂದು ಸಾರಿ 8 ಸಾವಿರದಿಂದ 4 ಸಾವಿರ ಅನ್ನುವುದನ್ನು ಮತ್ತೊಂದು ಸಾರಿ 5 ರಿಂದ ಹತ್ತು ಸಾವಿರ ಅನ್ನುವುದು; ಇದಕ್ಕೆ ನಿಶ್ಚಿತವಾದ ನೆಲೆ ಎಲ್ಲಿದೆ ? ಇದಕ್ಕೆ ಕಾರಣಗಳು ಏನು ? ಈ ಯಾವ ಕಾರಣಗಳು ನಿಮಗೆ ಆಧಾರ ಅಲ್ಲದಿದ್ದರೆ ಕಾರಣವೇನು ? ಕಾರಣ, ಈಗಿರತಕ್ಕ 4 ಅಥವಾ 8 ಸಾವಿರ, 8 ಅಥವಾ 12 ಸಾವಿರ ಸ್ವಯಂ ಅಧಿಕಾರ ಮಾಡತಕ್ಕ ನಿಶ್ಚಿತವಾದ ಘಟಕಗಳು ಆಗಿಲ್ಲ ಎಂಬುದಾದರೆ ಅದಕ್ಕೆ ಕಾರಣಗಳನ್ನು ಕೊಡಬೇಕು. ನಮಗೆ ಇಚ್ಛೆ ಬರುತ್ತದೆ. ನಾವು ಬಹು ಸಂಖ್ಯೆಯಲ್ಲಿದ್ದೇವೆಂದು ಒಂದು ಶಾಸನ ತರತಕ್ಕದ್ದು ಅಲ್ಲ. ಆಡಳಿತಾತ್ಮಕ ವ್ಯವಸ್ಥೆ, ಆರ್ಥಿಕ ಪರಿಮಿತಿ ಭೌಗೋಳಿಕವಾದ ಹೊಂದಾಣಿಕೆ ಇವುಗಳನ್ನೆಲ್ಲ ಆಧಾರವಾಗಿಟ್ಟುಕೊಂಡು 8 ಅಥವಾ 12 ಸಾವಿರ ಜನಸಂಖ್ಯೆ ಎಂದು ಮಾಡಿದ್ದೇವೆ. ಒಂದು ವೇಳೆ ಭೌಗೋಳಿಕವಾಗಿ ಸರಿ ಇಲ್ಲದಿದ್ದರೆ ಅದನ್ನು ಸರಿಪಡಿಸುವುದಕ್ಕೆ ಈ ಶಾಸನದಲ್ಲಿ ಅವಕಾಶ ಇದೆ. ಇದಕ್ಕೆ ಏತಕ್ಕೆ ತಿದ್ದುಪಡಿ ತರುತ್ತೀರಿ ?

ಶ್ರೀ ಎಂ. ವಿ. ವೆಂಕಟಪ್ಪ :— ಶಾಸನದಲ್ಲಿ ಇರುವುದನ್ನು ಸಿಂಗಲ್ ಆಗಿ ಮಾಡಬಹುದು, ಹೋಲ್‌ಸೇಲ್ ಆಗಿ ಮಾಡುವುದಕ್ಕಾಗುವುದಿಲ್ಲ. ಅಲ್ಲಿ, ಇಲ್ಲಿ ಏನಾದರೂ ತಪ್ಪಿದ್ದರೆ ಮಾಡಬಹುದು, ಹೋಲ್‌ಸೇಲ್ ಆಗಿ ಬದಲಾವಣೆ ಮಾಡುವುದಕ್ಕಾಗುವುದಿಲ್ಲ.

ಶ್ರೀ ಡಿ. ಬಿ. ಚಂದ್ರೇಗೌಡ :— ನಾನು ಒಪ್ಪುತ್ತೇನೆ. ಶ್ರೀಮಾನ್ ಕರಿಯಣ್ಣನವರು ಅಥವಾ ನಾವು ಹೇಳಿದ ಹಾಗೆ ಎಲ್ಲಿ ನಿಮಗೆ ವೈಯಬಿಲಿಟಿ ಬರುವುದಿಲ್ಲ ಅಲ್ಲಿ ಬದಲಾವಣೆ ಮಾಡಿ. ಹೋಲ್‌ಸೇಲ್ ಆಗಿ ಬದಲಾವಣೆ ಮಾಡತಕ್ಕ ಅಗತ್ಯವೇನು ? ಏನಾದರೂ ದೂರು ಬಂದಿದೆಯೇ ? ಯಾರಾದರೂ ಬಂದು ಕೇಳಿಕೊಂಡಿದ್ದಾರೆಯೇ ? ಮಂಡಲದಲ್ಲಿ ಕೆಲಸ ಮಾಡತಕ್ಕವರು ಹೊಂದಾಣಿಕೆ ಇಲ್ಲವೆಂದು ಹೇಳಿದ್ದಾರೆಯೇ?

ಶ್ರೀ ಜಿ. ಎಸ್. ಶಿವನಂಜಪ್ಪ :— ಹಳ್ಳಿಗಾಡಿನ ಚುನಾವಣೆಯಲ್ಲಿ ಅದೇ ಮುಖ್ಯ ವಿಷಯ ಆಗಿತ್ತು. ಅಧಿಕಾರಕ್ಕೆ ಬಂದು 4 ವರ್ಷವಾದರೂ ಒಂದು ಫರ್ಲಾಂಗ್ ರಸ್ತೆ ಮಾಡುವುದಕ್ಕಾಗಲಿಲ್ಲ, ಬಾವಿ ತೋಡಿಸುವ

ದಕ್ಕಾಗಲಿಲ್ಲ, ಏನು ಇಂಪ್ರೂವ್‌ಮೆಂಟ್ ಆಗಲಿಲ್ಲ; ಆದ್ದರಿಂದ ಮೊದಲು ಇದ್ದ ವಿಲೇಜ್ ಪಂಚಾಯಿತಿಯನ್ನೇ ಮಾಡಿ ಎಂದು ಜನ ಹೇಳುತ್ತಿದ್ದರು.

ಶ್ರೀ ಪಿ. ಜಿ. ಆರ್. ಸಿಂಧ್ಯ :– ಮೊನ್ನೆ ಎಲೆಕ್ಷನ್ ಕ್ಯಾಂಪೈನ್‌ನಲ್ಲಿ ಇದನ್ನೇ ಹೇಳಿದ್ದಿರಾ ?

ಶ್ರೀ ಜಿ. ಎಸ್. ಶಿವನುಜಪ್ಪ :– ನಮ್ಮ ಎಲೆಕ್ಷನ್‌ನಲ್ಲಿ ಅದೇ ನಡೆದಿದ್ದು ಜನ ಹೇಳಿದ್ದನ್ನು ನಾವು ಹೇಳುತ್ತಿದ್ದೇವೆ.

ಶ್ರೀ ಡಿ. ಬಿ. ಚಂದ್ರೇಗೌಡ :– ಈಗ ವಿಷಯವನ್ನು ಡೀವಿಯೇಟ್ ಮಾಡುವುದು ಬೇಡ. ಮುಖ್ಯ ಪ್ರಶ್ನೆಯನ್ನು ನಾನು ಏನು ಹೇಳುತ್ತಿದ್ದೇನೆಂದರೆ.........

ಶ್ರೀ ಜಿ. ಎಸ್. ಶಿವಸಂಜಪ್ಪ :– ಸ್ಮಾಲರ್ ಯೂನಿಟ್ಸ್ ಅಂದರೆ ಇನ್ನೂ ಕಡಿಮೆ ಜನಸಂಖ್ಯೆ ಇರಬೇಕಾಗಿತ್ತು.

ಶ್ರೀ ಡಿ. ಬಿ. ಚಂದ್ರೇಗೌಡ :– ಆ ಪ್ರಶ್ನೆ ಅಲ್ಲ. ನಾವು ಬಹುತೇಕ ಜನರು ಗ್ರಾಮಾಂತರ ಪ್ರದೇಶಗಳಿಂದ ಬಂದಿರತಕ್ಕವರು. ನಾವು ನಮ್ಮ ಗ್ರಾಮಗಳಿಗೆ ಒಂದು ನಿಶ್ಚಿತವಾದ ನೆಲೆಯನ್ನು ಕೊಡದೆ ಎಲ್ಲಿಯೋ ಅರ್ಬನ್‌ನಿಂದ ಬಂದ ಮಂತ್ರಿಗಳು ಕೊಟ್ಟ ಈ ವ್ಯಾಖ್ಯಾನವನ್ನು ನೀವು ಒಪ್ಪುವುದಕ್ಕೆ ಮೊದಲು ನಾವು ಗ್ರಾಮಾಂತರ ಪ್ರದೇಶಗಳಿಂದ ಬಂದಿರತಕ್ಕವರು, ಈ ಬಗ್ಗೆ ಯೋಚನೆ ಮಾಡೋಣ.

ಶ್ರೀ ಕರಿಯಣ್ಣ :– ಮಾನ್ಯ ಬಸವಲಿಂಗಪ್ಪನವರು ಅನೇಕ ಸಾರಿ ಸ್ಪಷ್ಟಪಡಿಸಿದ್ದಾರೆ. ನಮ್ಮ ಪಕ್ಷದ ಹಿರಿಯ ಶಾಸಕರು ಚರ್ಚಿಸಿದ್ದಾರೆ, ಇದು ಅವರ ಮೂಲಕ ಬಂದಿರತಕ್ಕದ್ದು ಎಂದು ಹೇಳಿದ್ದಾರೆ. ಇದು ಬಸವಲಿಂಗಪ್ಪನವರ ತಿದ್ದುಪಡಿ ಅಲ್ಲ.

ಶ್ರೀ ಡಿ. ಬಿ. ಚಂದ್ರೇಗೌಡ :– ಕರಿಯಣ್ಣನವರೇ, ನಾನು ಈ ವಿಷಯವನ್ನು ಪಕ್ಷಾತೀತವಾಗಿ ಚರ್ಚೆ ಮಾಡುವುದಕ್ಕೆ ಸಿದ್ಧನಿದ್ದೇನೆ. ನೀವು ನನ್ನನ್ನು ಒಪ್ಪಿಸುವುದಾದರೆ ನಾನು ಒಪ್ಪಿಕೊಳ್ಳುವುದಕ್ಕೆ ಸಿದ್ಧನಿದ್ದೇನೆ. ರಾಜಕೀಯ ಕಾರಣಕ್ಕೆ ನಾನು ಚರ್ಚೆ ಮಾಡುತ್ತಿಲ್ಲ.

ಶ್ರೀ ಕರಿಯಣ್ಣ :– ಚರ್ಚೆ ನಡೆಯಬೇಕು. ಅದರಿಂದ ಏನಾದರೂ ಇದ್ದರೆ ನಾವು ತಿಳಿದುಕೊಳ್ಳುವುದಕ್ಕೆ ಅವಕಾಶವಾಗುತ್ತದೆ. ಇಲ್ಲ ಎಂದು ಹೇಳುವುದಿಲ್ಲ. ಆದರೆ ಬಸವಲಿಂಗಪ್ಪನವರಿಂದ ಬರುತ್ತಿದೆ ಎಂದು ಹೇಳಿದ್ದರಿಂದ ಇದು ಬಸವಲಿಂಗಪ್ಪನವರದಲ್ಲ ಎಂಬುದನ್ನು ಹೇಳಿದೆ ಅಷ್ಟೆ.

ಶ್ರೀ ಡಿ. ಬಿ. ಚಂದ್ರೇಗೌಡ :– ಅದನ್ನು ಅವರೇ ಹೇಳುತ್ತಾರೆ. ನೀವು ಏತಕ್ಕೆ ಹೇಳುತ್ತೀರಿ ? ಅವರಿಗೆ ಗೊತ್ತಾಗುವುದಿಲ್ಲವೆ ? ನಾನು ಏನು ವಾದ ಮಾಡುತ್ತಿದ್ದೆ ಅಂದರೆ, ನಾವು ಈ ಗ್ರಾಮ ಸ್ವರಾಜ್ಯದ ಹೆಸರಿನಲ್ಲಿ ಗ್ರಾಮಗಳ ಮೇಲೆ ಪದೇ ಪದೇ ಏನು ಪ್ರಯೋಗ ಮಾಡುತ್ತಿದ್ದೇವೆ ಇದು ಎಲ್ಲಾದರೂ ಒಂದು ಕಡೆ ನಿಂತು ಬಿಟ್ಟರೆ, ಈಗ ನೀವು ಸರಿ ಅನ್ನುವುದು, ಮುಂದೆ ಇನ್ನೊಂದು ಸರ್ಕಾರ ನಮ್ಮದು ಬಂದಾಗ, ಇಲ್ಲ ನಾವು ಹಿಂದೆ ಮಾಡಿದ್ದು ಸರಿ ಅನ್ನುವುದು; ಹೀಗೆ ಮಾಡಿದರೆ ಯಾರಮೇಲೆ ಪ್ರಯೋಗವಾಗುತ್ತದೆ. ಪ್ರಯೋಗ ಗ್ರಾಮೀಣ ಜನರ ಮೇಲೆ ಆಗುತ್ತದೆ.

(ಒಬ್ಬ ಮಾನ್ಯ ಸದಸ್ಯರು ಸ್ವಿಚ್ ಹಾಕದೆ ಮಾತನಾಡಿದರು).

ಶ್ರೀ ಡಿ. ಬಿ. ಚಂದ್ರೇಗೌಡ :– ಪಾಪ ಅವರಿಗೆ ನಾನು ಹೇಳಿದ್ದು ತಿಳಿಯುತ್ತದೋ ಇಲ್ಲವೋ. ಅವರಾಗಿಯೇ ತಿಳಿದುಕೊಳ್ಳುವುದಕ್ಕೆ ಶಕ್ತಿ ಇಲ್ಲ. ಅದಕ್ಕಾಗಿ ಅಶೋಕ ಮೆಹತಾ ಸಮಿತಿಯ ವರದಿಯನ್ನು ಕೊಟ್ಟೆ. ಅಶೋಕ ಮೆಹ್ತಾ ಅವರ ಹೆಸರನ್ನು ಕೇಳಿದ್ದೀರಾ ನಾವು ? ದಯಮಾಡಿ ಅ [illegible]. ಅಶೋಕ ಮೆಹ್ತಾ ಅವರ ನೇತೃತ್ವದಲ್ಲಿ ರಾಷ್ಟ್ರವ್ಯಾಪಿಯಾದ ಒಂದು ಸಮಿತಿಯನ್ನು ಮಾ[illegible]ತಿ 25 ಸಾವಿರ ಮಂಡಲಗಳಿವೆ, 5300 ತಾಲ್ಲೂಕುಗಳು ಈ ದೇಶದಲ್ಲಿವೆ. 5,300 ತಾ[illegible] ಒಂದು ಘಟಕವಾಗಿ ಇಟ್ಟುಕೊಳ್ಳುವುದು ಜನಸಂಖ್ಯೆ ದೃಷ್ಟಿಯಿಂದ, ಆಡಳಿತಾತ್ಮಕ ದೃಷ್ಟಿಯಿಂ[illegible]ದಲ್ಲ; 24 ಸಾವಿರ ಗ್ರಾಮಪಂಚಾಯಿತಿಗಳಿವೆ; ಈ ಗ್ರಾಮ ಪಂಚಾಯಿತಿಗಳಲ್ಲಿ ಪ್ರತಿಯೊಂದ[illegible] ಸಾವಿರಕ್ಕಿಂತ ಕಡಿಮೆ ಇದೆ; 5 ಸಾವಿರಕ್ಕಿಂತ ಕಡಿಮೆ ಇರತಕ್ಕ ಯೂನಿಟ್‌ಗಳು ವಯಬಲ್ ಯೂನಿಟ್‌ಗಳಾಗುವುದಿಲ್ಲ, ಎಕನಾಮಿಕ್ ವಯಬಲಿಟಿ ಅವಕ್ಕೆ ಬರುವುದಿಲ್ಲ ಎಂಬ ಆಧಾರ ಇಟ್ಟುಕೊಂಡು ಮಾಡಿದ್ದೇವೆ ಎಂದು ಹೇಳಿದರು. ಅದರ ನಂತರ ಮಾಡಿದ ಬದಲಾವಣೆಯಿಂದ ಆದ ಪರಿಣಾಮ ಏನು ? ಇಲ್ಲಿ ನೀವು ಏನು ಸ್ಟೇಟ್‌ಮೆಂಟ್ ಆಫ್ ಆಬ್ಜೆಕ್ಟ್ಸ್ ಆ್ಯಂಡ್ ರೀಸನ್ಸ್ ಕೊಟ್ಟಿದ್ದೀರಿ. ಈ ಮಸೂದೆಯಲ್ಲಿ ಮುಂದೆ ಬರತಕ್ಕ ತಿದ್ದುಪಡಿಯಿಂದಾಗಿ

it loses every bit of its status, ಸ್ಟೇಟ್‌ಮೆಂಟ್ ಆಫ್ ಆಬ್ಜೆಕ್ಟ್ಸ್ ಮತ್ತು ರೀಸನ್ಸ್‌ನಲ್ಲಿ "With a view to improve the functioning of the Panchayat Raj institutions in the State......"

ಪ್ರಾರಂಭಿಕ ಭಾಷೆಯೇ ಉದ್ದೇಶಿತ ತಿದ್ದುಪಡಿ ಮತ್ತು ಭಾಷೆ ಅರ್ಥಾತ್ ಸಂಬಂಧ ಇಲ್ಲ.

'Statement of objects and reasons'

"With a view to improve the functioning of the Panchayat Raj institutions in the State.....

......(1) to increase the number of existing Mandals by reducing their minimum and maximum population limit to 4000 to 8000 respectively."

ಹೋಗಲಿ ಇದಕ್ಕಾದರೂ ಸ್ಟಿಕ್ ಆನ್ ಆಗಿದ್ದೀರಾ ? 4 ಸಾವಿರದಿಂದ 8 ಸಾವಿರ ಎಂದಿದೆ. ಇದಕ್ಕಾದರೂ ಸ್ಟಿಕ್ ಆನ್ ಆಗಿದ್ದೀರಾ ? ಮತ್ತೆ ಅದನ್ನು 5 ಸಾವಿರ, 10 ಸಾವಿರ ಎನ್ನುವುದು. ಅಂದರೆ ಇದರಲ್ಲಿ ಪ್ರತಿಷ್ಠೆ ಏನು ? ಇದರಿಂದ ಆಗತಕ್ಕ ಪರಿಣಾಮಗಳೇನು ? ಮಂಡಲ ಪಂಚಾಯಿತಿಗಳು ಇವತ್ತು ಏನಿವೆ, ಇವು ಆರ್ಥಿಕವಾಗಿ ವಯಬಲಿಟಿಯನ್ನು ಕಳೆದುಕೊಳ್ಳುತ್ತವೆ. ಮಾನ್ಯ ಮಂತ್ರಿಗಳು ತಮ್ಮ ಫೈನಾನ್ಷಿಯಲ್ ಮೆಮೊರ್ಯಾಂಡಮ್‌ನಲ್ಲಿ ಹೇಳಿರುವಂತೆ ಸರಿ ಸುಮಾರು ಎರಡು ಸಾವಿರ ಪಂಚಾಯತಿಗಳು ಜಾಸ್ತಿ ಆಗುತ್ತವೆ ಎರಡು ಸಾವಿರ ಪಂಚಾಯತಿಗಳಿಗೆ ತಗಲತಕ್ಕ ವೆಚ್ಚ ತಲಾ ಐವತ್ತು ಸಾವಿರದಂತೆ 10 ಕೋಟಿ ರೂ. ಗಳು. ಈ ಹತ್ತು ಕೋಟಿ ರೂಪಾಯಿಯಲ್ಲಿ ಡೀಲಿಮಿಟೇಷನ್ಸ್ ಆಫ್ ದಿ ಕಾನ್ಸ್‌ಸ್ಟಿಟ್ಯುಯೆನ್ಸಿ ಇನ್ನೂ ಲೆಕ್ಕ ತೆಗೆದು ಕೊಂಡಿಲ್ಲ. ಅದು ಅಡ್ಮಿನಿಸ್ಟ್ರೇಟೀವ್ ಛಾರ್ಜಸ್. ಈ ಹತ್ತು ಮತ್ತು ನಿನ್ನೆ ಎಲ್ಲೋ ಒಂದು ಕಡೆ ಸುಮಾರು ಇಪ್ಪತ್ತು ಕೋಟಿ ರೂಪಾಯಿ ಆಗುತ್ತದೆ ಎಂದು ಹೇಳಿದ್ದೀರಿ. ಈ ಇಪ್ಪತ್ತು ಕೋಟಿ ಪ್ಲಸ್ ಡೀಲಿಮಿಟೇಷನ್ ಛಾರ್ಜಸ್. ಅದು ಏನು ಸೆಕ್ರೆಟರಿಗಳ ಸ್ಯಾಲರಿ, ಪ್ರಧಾನರ ಮತ್ತು ಉಪ ಪ್ರಧಾನರ ಸ್ಯಾಲರಿಗಳು, ಕಾಂಟಿಂಜೆನ್ಸಿ ಇಷ್ಟನ್ನು ಮಾತ್ರ ಲೆಕ್ಕಕ್ಕೆ ತೆಗೆದುಕೊಂಡು; ಯಾರ ಸಲುವಾಗಿ ಇದನ್ನು ಖರ್ಚು ಮಾಡುತ್ತೀರಿ ? ಏತಕ್ಕಾಗಿ ಖರ್ಚು ಮಾಡುತ್ತೀರಿ ? ಸಾರ್ವಜನಿಕರ ಹಣವನ್ನು ಇಷ್ಟು ಲಘುವಾಗಿ ಖರ್ಚು ಮಾಡತಕ್ಕ ಅಧಿಕಾರವನ್ನು ನಿಮಗೆ ಕೊಟ್ಟಿದ್ದಾರೆಯೇ ?

ಶ್ರೀ ವೆಂಕಟರಮಣಪ್ಪ :– ಪ್ರಧಾನರ ಮತ್ತು ಉಪ ಪ್ರಧಾನರ ಸ್ಯಾಲರಿಗಳನ್ನು ಮಾಡಿದ್ದು ನೀವು. ಹಿಂದೆ ಇದು ಇರಲಿಲ್ಲ. ನೀವು ಹತ್ತು ಜನಕ್ಕೆ ಕೊಟ್ಟಿದ್ದೀರಿ, ನಾವು ಇನ್ನೂ ಐದು ಜನಕ್ಕೆ ಅಧಿಕಾರ ಕೊಡಲು ಹೊರಟಿದ್ದೇವೆ.

ಶ್ರೀ ಡಿ. ಬಿ. ಚಂದ್ರೇಗೌಡ :– ನೀವು ಮಾತನಾಡಿದ್ದು ತಿಳಿಯುವುದಿಲ್ಲ. ಮುಂದೆ ಬಂದು ಕುಳಿತುಕೊಳ್ಳಿ ನೀವು ಅಧಿಕಾರ ಕೊಡಿ, ನಾನು ಏನು ಬೇಡ ಎಂದು ಹೇಳುವುದಿಲ್ಲ......

ಶ್ರೀ ವೆಂಕಟರಮಣಪ್ಪ :– ನೀವು ಮಾಡಿದ್ದೇ......

ಶ್ರೀ ಡಿ. ಬಿ. ಚಂದ್ರೇಗೌಡ :– ನಾವು ಮಾಡಿದ್ದೇ ಅದೇ ನಮಗೆ ಹೆಮ್ಮೆ ಅದನ್ನು ತೆಗೆಯುತ್ತೀರಲ್ಲ ಎಂದು ನಮಗೆ ಸಂಕಟ; ನಿಮಗೆ ಇದು ತಿಳಿಯದಿದ್ದರೆ ಹೇಗೆ ?

ಶ್ರೀ ಜಿ. ಎಸ್. ಶಿವನಂಜಪ್ಪ :– ಮೊದಲು ವಿಲೇಜ್ ಪಂಚಾಯತ್, ತಾಲ್ಲೂಕು ಬೋರ್ಡ್ ಇತ್ತು. ಆದರೆ ಈ ತರಹ ಸಂಬಳ ಕೊಡುವುದಕ್ಕೆ ಮಾಡಿರಲಿಲ್ಲ. ನೀವು ಇದನ್ನು ಶುರು ಮಾಡಿದಿರಿ. ಇದನ್ನು ಖರ್ಚು ಮಾಡುವುದಕ್ಕೆ ನೀವೇ ತೋರಿಸಿದಿರಿ. ಆಸೆ ತೋರಿಸಿದವರೂ ನೀವೇ ? ಹಳ್ಳಿಯ ಕಡೆಯಲ್ಲಿ ಜನ ಸೆಲ್ಫ್‌ಲೆಸ್ ಆಗಿ ವರ್ಕ್ ಮಾಡುತ್ತಿದ್ದರು ಸಾಮಾಜಿಕ ಸೇವೆ ಮಾಡುತ್ತಿದ್ದರು. ಆಸೆ ಹುಟ್ಟಿಸಿದವರು ನೀವು ಎಂದು ಅವರು ಹೇಳುತ್ತಿದ್ದಾರೆ.

ಶ್ರೀ ಡಿ. ಬಿ. ಚಂದ್ರೇಗೌಡ :– ನಾನು ನಿಮಗೆ ಹೇಳುತ್ತೇನೆ. ಹಳೆಯ ಮೈಸೂರು ಶಾಸನಸಭಾ ಸದಸ್ಯರಿಗೆ ಸಂಬಳ ಇತ್ತೇನು ? ಆಮೇಲೆ ಕೆಲವು ದಿವಸಗಳಾದ ಮೇಲೆ ಐವತ್ತು ರೂಪಾಯಿ ಮಾಡಿದರು. ಇವತ್ತು ನಮಗೆ ಎಷ್ಟು ಸಂಬಳ ಬರುತ್ತಿದೆ. ಏಕೆ ಇದನ್ನು ಮಾಡಿದಿರಿ ?

ಶ್ರೀ ಬಿ. ಎಸ್. ಯಡಿಯೂರಪ್ಪ :– ಕೇಂದ್ರ ಎಂದು ಇದ್ದುದನ್ನು ಮಂಡಲ ಎಂದು ಕರೆಯಲಾಗುತ್ತಿತ್ತು. ಈಗ ಅದನ್ನು ಪಂಚಾಯತಿ ಎಂದು ಕರೆದರೆ ಏನು ಕ್ರಾಂತಿ ಆಗುತ್ತದೆ. ಬೋರ್ಡ್ ಬರೆಯುವುದಕ್ಕೆ ನೀವು ಕೋಟಿ ಗಟ್ಟಲೆ ಹಣ ಖರ್ಚು ಮಾಡಬೇಕು. ಏನು ಸ್ವಾಮಿ ? ಬರಗಾಲದಿಂದ ಜನ ಸಾಯುತ್ತಿದ್ದಾರೆ.

ಮೊದಲು ಪಂಚಾಯತಿ ಇರಲಿಲ್ಲವೇ ? ಪಂಚಾಯತಿ ಇದ್ದಾಗಲೂ ಜನ ಸಾಯುತ್ತಿದ್ದರು. ನೀವು ಈಗ ಬದಲಾವಣೆ ಮಾಡಿದರೂ ಸಹ ಅವರ ಸ್ಥಿತಿ ಏನೂ ಸುಧಾರಣೆ ಆಗುವುದಿಲ್ಲ.

ಶ್ರೀ ಬಿ. ಬಸವಲಿಂಗಪ್ಪ :– ಮಾನ್ಯ ಅಧ್ಯಕ್ಷರೇ.........

ಶ್ರೀ ಡಿ. ಬಿ. ಚಂದ್ರೇಗೌಡ :– ನನ್ನ ಲೈನ್ ಆಫ್ ಥಿಂಕಿಂಗ್ ಹೊರಟು ಹೋಗಿಬಿಡುತ್ತದೆ. ಒಂದೇ ಸಲ ನೀವು ಉತ್ತರ ಹೇಳಿಬಿಡಿ.

ಶ್ರೀ ಬಿ. ಬಸವಲಿಂಗಪ್ಪ :– ಮಾನ್ಯ ಅಧ್ಯಕ್ಷರೇ, ನಾವು ಮೊದಲು ಯೋಜನೆಯಂತೆ ನಾಲ್ಕು ಸಾವಿರದಿಂದ ಎಂಟು ಸಾವಿರ ಮಾಡಬೇಕೆಂದು ಮಾಡಿದ್ದೆವು ಕೊನೆಗೆ ಏನು ಆಯಿತು ? ಈ ಒಂದು ಖರ್ಚಿನ ವಿಚಾರ ತೆಗೆದುಕೊಂಡು ಐದು ಸಾವಿರದಿಂದ ಹತ್ತು ಸಾವಿರದವರೆಗೆ ಮಾಡಿದರೆ 2532 ರಿಂದ 3520 ಈಗ ಪಂಚಾಯತಿಗಳು ಆಗುತ್ತವೆ. ಅದನ್ನು ಬಿಟ್ಟರೆ ಮತ್ತೆ ಇನ್ನಾವುದೇ ಕಾರಣ ಇಲ್ಲ. ಇದು ಒಂದು· ಎರಡನೆಯದು ಏನು ಎಂದರೆ ಪಂಚಾಯತಿಗಳು ಹಿಂದೆ ಇದ್ದವಲ್ಲ ಆವಾಗ ಸಣ್ಣ ಸಣ್ಣ ಪಂಚಾಯತಿಗಳು ಇದ್ದವು. ಆಗ ಕೆಲಸ ಕಾರ್ಯಗಳು ಸರಿಯಾಗಿ ನಡೆಯುತ್ತಾ ಇರಲಿಲ್ಲ. ಈಗ 1971 ನೇ ಇಸವಿಯ ಸೆನ್ಸಸ್ ಪ್ರಕಾರ ನಾವು ಇದನ್ನು ಮಾಡಬೇಕು. ಮಾನ್ಯ ನಜೀರ್ ಸಾಬ್‌ರವರು ಮಾಡಿವಾಗ 1971ರ ಸೆನ್ಸಸ್ ಪ್ರಕಾರ ಮಾಡಿದ್ದರು. ನಾವು ಹಾಗೆಯೇ ಮಾಡಿದ್ದೇವೆ. ಈಗ ಕಮ್ಮಿ ಇತ್ತು. ಈಗ 1981 ನೇ ಇಸವಿಯ ಪ್ರಕಾರ ಮಾಡುತ್ತಿದ್ದೇವೆ. ಜನಸಂಖ್ಯೆ ಜಾಸ್ತಿ ಆಗಿದೆ. ಈಗ 1981 ಹೋಗಿ 1991 ಬಂದಿದೆ. ಜಾಸ್ತಿ ಆಗುತ್ತದೆ. ಅದಕ್ಕೋಸ್ಕರವಾಗಿ ಇದು ಸಮಂಜಸ ಆಗಿದೆ ಎಂದು ನಾನು ಹೇಳುತ್ತಿದ್ದೇನೆ. ಇದರ ಬಗ್ಗೆ ತಾವು ವಿಚಾರ ಮಾಡಿ; ನಾನೂ ಕೂಡ ವಿಚಾರ ಮಾಡುತ್ತೇನೆ.

ಶ್ರೀ ಡಿ. ಬಿ. ಚಂದ್ರೇಗೌಡ :– ನಾನು ವಿಚಾರ ಮಾಡುತ್ತೇನೆ. ಆದರೆ ನಾನು ಏನು ಹೇಳುತ್ತೇನೆ ಎಂದರೆ ಎಲ್ಲಿ ಜನಸಂಖ್ಯೆ ಜಾಸ್ತಿ ಆಗುತ್ತದೆ, ಅಲ್ಲಿ ಡೀ ಲಿಮಿಟೇಷನ್ಸ್ ಮಾಡುವುದಕ್ಕೆ ಮತ್ತು ಜನಸಂಖ್ಯೆಯನ್ನು ಆಧರಿಸಿ ನೀವು ತೀರ್ಮಾನ ತೆಗೆದುಕೊಳ್ಳುವುದಕ್ಕೆ ಈ ಕಾನೂನಿನಲ್ಲಿ ಅಧಿಕಾರ ಇದೆ. ನೀವು ತಿದ್ದುಪಡಿ ಮಾಡುವುದರಿಂದ ಆಗತಕ್ಕ ಪರಿಣಾಮ ಏನು ಅಂದರೆ, ಅನಗತ್ಯ ಖರ್ಚು ಬರುತ್ತದೆ. ಜೊತೆಗೆ ಕಾಲ ಎಷ್ಟು ವ್ಯಯ ಆಗುತ್ತದೆ. ಪುನಃ ನಾವು ರೀ-ಡಿಫೈನ್ ಮಾಡಬೇಕು. ಡೀಲಿಮಿಟೇಷನ್ ಮಾಡಬೇಕು. ಅದಕ್ಕೆ ನಾನು ತಮಗೆ ಹೇಳಿದ್ದುದು, ಇದು ಅವರಿಗೆ ಪಾಪ ಗೊತ್ತಿಲ್ಲ ಎಂದು ನೀವು ಕೊಟ್ಟಿರಿ ಮುನ್ನೂರು, ನೀವು ಕೊಟ್ಟಿರಿ ಮುನ್ನೂರು ಎಂದು ಹೇಳುತ್ತಿದ್ದಾರೆ.

ಶ್ರೀ ವೆಂಕಟರಮಣಪ್ಪ :– ಜಿಲ್ಲಾ ಪರಿಷತ್ತು ಅಧ್ಯಕ್ಷರು ಮತ್ತು ಉಪಾಧ್ಯಕ್ಷರಿಗೆ ಟಿ. ಎ. ಮತ್ತು ಡಿ. ಎ. ಎಷ್ಟು ಖರ್ಚಾಗುತ್ತಿದೆ, ಅಷ್ಟು ಇವತ್ತು ಆಗುತ್ತಿಲ್ಲ. ನೀವು ಇವತ್ತು 10 ಕೋಟಿ 20 ಕೋಟಿ ರೂಪಾಯಿ ಖರ್ಚು ಆಗುತ್ತದೆ ಎಂದು ಹೇಳುತ್ತಿದ್ದೀರಿ. ಆದರೆ ಟಿ.ಎ. ಡಿ.ಎ.ಗೆ ಎಷ್ಟು ಖರ್ಚಾಗುತ್ತದೆಂಬುದನ್ನು ತಿಳಿದುಕೊಳ್ಳಿ. ಇವತ್ತು ಅವರ ಸಂಬಳ ಸಾರಿಗೆಗಳು ಎಷ್ಟಾಗುತ್ತದೆಂಬುದನ್ನು ತಾವು ಅರ್ಥ ಮಾಡಿಕೊಳ್ಳಿ. ಇದನ್ನು ನೀವು ಮಾಡಿರತಕ್ಕಂಥಾದ್ದು; ಆ ತಪ್ಪನ್ನು ನಾವು ಸರಿ ಮಾಡುವುದಕ್ಕೆ ಹೊರಟಿದ್ದೇವೆ.

4–20 ಪಿ. ಎಂ.

ಶ್ರೀ ಡಿ. ಬಿ. ಚಂದ್ರೇಗೌಡ :– ಅದು ಎಷ್ಟಾಗುತ್ತದೆಂಬುದನ್ನು ಲೆಕ್ಕ ಹಾಕಿ ಹೇಳಿ, ಅಲ್ಲಿಯವರೆಗೆ ನಾನು ಕುಳಿತುಕೊಳ್ಳುತ್ತೇನೆ.

ಒಬ್ಬ ಮಾನ್ಯ ಸದಸ್ಯರು :– ತಮಗೇ ಗೊತ್ತಿದೆ; ಗೊತ್ತಿಲ್ಲದೇ ಏನೂ ಇಲ್ಲ.

ಶ್ರೀ ಜಿ. ಎಸ್. ಶಿವನಂಜಪ್ಪ :– ಅವರು ಹಿಂದೆ ಮಂಡಲ ಪಂಚಾಯತಿ ಮತ್ತು ವಿಲೇಜ್ ಪಂಚಾಯತಿ ಸೆಕ್ರೆಟರಿಗೆ ಸಂಬಳ ಇರಲಿಲ್ಲವೆಂದು ಹೇಳುವುದಕ್ಕೆ ಹೊರಟಿದ್ದಾರೆ. ಈಗ ನೀವೇ ಲೆಕ್ಕ ಹಾಕಿ ನೋಡಿ 2500 ಮಂಡಲ ಪಂಚಾಯತಿಗಳು ಈಗ ಇರತಕ್ಕಂಥಾದ್ದು ಇವುಗಳ ಖರ್ಚು ಮತ್ತು ಈಗ ಆಗುತ್ತಿರುವ ಖರ್ಚನ್ನು ಸೇರಿಸಿದರೆ ಎಷ್ಟಾಗುತ್ತದೆಯೋ ಅಷ್ಟು ಒಟ್ಟು ಖರ್ಚು ಬರುತ್ತದೆ.

ಶ್ರೀ ಸಿ. ಬೈರೇಗೌಡ :– ಮಾನ್ಯ ಸದಸ್ಯರು ಖರ್ಚಿನ ಬಗ್ಗೆ ಮಾತನಾಡುತ್ತಿದ್ದಾರೆ. ನಮಗೆಲ್ಲರಿಗೂ ಇದರ ಬಗ್ಗೆ ಕಾಳಜಿ ಇದೆ. ಅನಾವಶ್ಯಕವಾಗಿ ಯಾವ ಬಾಬಿನಲ್ಲೂ ಕೂಡ ಹಣ ಖರ್ಚಾಗುವುದು ಬೇಕಾಗಿಲ್ಲ. ಅನಾವಶ್ಯಕವಾಗಿ ಎಲ್ಲೆಲ್ಲಿ ಹಣ ಖರ್ಚಾಗುತ್ತದೆ ಅಲ್ಲಿ ಕಡಿಮೆ ಮಾಡಬೇಕಾಗಿರುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ. ಅದನ್ನು ದೃಷ್ಟಿಯಲ್ಲಿಟ್ಟುಕೊಂಡು ಈ ಬಾಬಿನಲ್ಲಿ ಅಂದರೆ ಅಧ್ಯಕ್ಷ, ಉಪಾಧ್ಯಕ್ಷರಿಗೆ ಇಷ್ಟು ಖರ್ಚಾಗುತ್ತಿತ್ತು. ಅದನ್ನು ಕಡಿಮೆ ಮಾಡಬೇಕೆಂದು ಸಲಹೆ ಮಾಡುವುದಾದರೆ ನಾವೂ ಕೂಡ ಒಪ್ಪಿಕೊಳ್ಳುವುದಕ್ಕೆ ತಯಾರಿದ್ದೇವೆ. ಅದನ್ನು ಅವರು ಹೇಳಲಿ.

ಒಬ್ಬ ಮಾನ್ಯ ಸದಸ್ಯರು :– ಕೋಟ್ಯಾಂತರ ರೂಪಾಯಿ ಜಿಲ್ಲಾ ಪರಿಷತ್ತಿನಲ್ಲಿ ಲೂಟಿ ಆಗುತ್ತಿದೆ. ಅದನ್ನು ಕೇಳುವವರಿಲ್ಲ; ಬರೀ ಚಪಲಕ್ಕಾಗಿ ಮಾತನಾಡುತ್ತೀರಿ.

ಶ್ರೀ ಆರ್. ವಿ. ದೇಶಪಾಂಡೆ :– ಅವರು ಹೇಳಿದಂತೆ ಅಮೆಂಡ್‌ಮೆಂಟ್ ಮಾಡಿದರೆ ಇವರನ್ನು ದೇವರೇ ಕಾಪಾಡಬೇಕು.

(ಗೊಂದಲ)

ಶ್ರೀ ಸಿ. ಬೈರೇಗೌಡ :– ಮಂತ್ರಿಗಳು ಇಲ್ಲೇ ಇದ್ದಾರೆ ಅವರು ಹೇಳಲಿ. ನಾವು ಇಲ್ಲಿ ಕೂತು ಅವರ ಸಂಬಳ ಸಾರಿಗೆ ಬಗ್ಗೆ ವಿಚಾರ ಮಾಡಿದರೆ ಅವರು ಅಲ್ಲಿ ಕೂತು ಶಾಸಕರ, ಮಂತ್ರಿಗಳ ಸಂಬಳವನ್ನು ಕೇಳುತ್ತಾರೆ ಆದ್ದರಿಂದ ಆ ವಿಷಯಕ್ಕೆ ಹೋಗುವುದು ಬೇಡ.

(ಗೊಂದಲ)

ಶ್ರೀ ಸಿ. ಬೈರೇಗೌಡ :– ಅವರು ಪ್ರಸ್ತಾಪ ಮಾಡಿದ್ದಕ್ಕೋಸ್ಕರ ನಾನು ಪ್ರಸ್ತಾಪ ಮಾಡುತ್ತಿದ್ದೇನೆ. ಇಲ್ಲದಿದ್ದರೆ ಪ್ರಸ್ತಾಪ ಮಾಡುವುದಕ್ಕೆ ಹೋಗುತ್ತಿರಲಿಲ್ಲ. ಮಂತ್ರಿಗಳು ಹೇಳಲಿ ಅಧ್ಯಕ್ಷರಿಗೆ, ಉಪಾಧ್ಯಕ್ಷರಿಗೆ ಸಂಬಳ ಸಾರಿಗೆ ಟಿ.ಎ. ಡಿ.ಎ. ಏನೂ ಕೊಡುವುದಿಲ್ಲ; ಆ ಖರ್ಚನ್ನು ಉಳಿಸುತ್ತೇವೆಂದು. ಆ ರೀತಿ ತಿದ್ದುಪಡಿ ತಂದರೆ ಅದನ್ನು ಒಪ್ಪಿಕೊಳ್ಳುವುದಕ್ಕೆ ತಯಾರಿದ್ದೇವೆ ತನ್ನಿ. ನೀವು ಆ ರೀತಿ ಮಾಡಲು ತಯಾರಿದ್ದೀರಾ ?

ಶ್ರೀ ಬಿ. ಬಸವಲಿಂಗಪ್ಪ :– ಮಾನ್ಯ ಸದಸ್ಯರಲ್ಲಿ ನಾನು ವಿನಂತಿ ಮಾಡುತ್ತೇನೆ. ವಿರೋಧ ಪಕ್ಷದ ನಾಯಕರು ಮಾತನಾಡುವಾಗ ಅವರ ಪರವಾನಗಿ ತೆಗೆದುಕೊಂಡು ತಾವು ಮಾತನಾಡಬೇಕು. ಅವರು ಪರವಾನಗಿ ಕೊಡದಿದ್ದರೆ ನಾವು ಮಾತನಾಡಬಾರದು; ದಯಮಾಡಿ ಈ ಒಂದು ಸತ್ಸಂಪ್ರದಾಯವನ್ನು ನಾವು ಕಾಪಾಡಿಕೊಳ್ಳಬೇಕು. ಅವರು ಮಾತನಾಡುವಾಗ ಈ ರೀತಿ ಮಧ್ಯದಲ್ಲಿ ಮಾತನಾಡಿದರೆ ಹೇಗೆ ? ದಯಮಾಡಿ ಎಲ್ಲರೂ ಕುಳಿತುಕೊಳ್ಳಬೇಕು.

ಶ್ರೀ ಡಿ. ಬಿ. ಚಂದ್ರೇಗೌಡ :– ನಾನು ಈ ಫೈನಾನ್ಷಿಯಲ್ ಮೆಮೊರ್‍ಯಾಂಡ್ ಅನ್ನು ಚರ್ಚೆ ಮಾಡು-ವಂಥಾದ್ದು, ಯಾರಿಗೆ ಎಷ್ಟು ಕೊಡಬೇಕು ಎಷ್ಟು ಬಿಡಬೇಕೆಂದು ಅಲ್ಲ. ಇರುವ ವ್ಯವಸ್ಥೆ ಬಗ್ಗೆ ಹೇಳಬೇಕಾಗುತ್ತದೆ. ಮೊದಲು ಮೈಸೂರು ರೆಪ್ರಸಂಟೇಟಿವ್ ಅಸೆಂಬ್ಲಿ ಸದಸ್ಯರಿಗೆ ಸಂಬಳ ಇರಲಿಲ್ಲ. ಮಾನ್ಯ ಶಿವನಂಜಪ್ಪನವರೇ, ಇದು ತಮಗೆ ಗೊತ್ತು, ಹೊಸ ಸದಸ್ಯರಿಗೆ ಗೊತ್ತಾಗುವುದಿಲ್ಲ. ಮತ್ತೆ ಶಾಸನ ಸಭಾ ಸದಸ್ಯರಾದಾಗ 50 ರೂಪಾಯಿ ಸಂಬಳ ಇತ್ತು. ಅದಾದಮೇಲೆ ಅದು ಮರು ಪರಿಶೀಲನೆಯಾಗಿ ಆಗಿ ಹೆಚ್ಚಾಯಿತು. ನಾವು ಇಲ್ಲಿ ಕುಳಿತುಕೊಂಡು ಮಂಡಲ ಪ್ರಧಾನರಿಗೆ ಕೊಡತಕ್ಕಂತಹ 300 ರೂಪಾಯಿಯ ಬಗ್ಗೆ ಪ್ರಶ್ನೆ ಮಾಡುವಾಗ ನಾವು ಇಲ್ಲಿ ಕುಳಿತುಕೊಂಡು ನಾವು ಏನು ತೆಗೆದುಕೊಳ್ಳುತ್ತಿದ್ದೇವೆಂಬ ಕಲ್ಪನೆ ಸದಸ್ಯರಿಗೆ ಇರಬೇಕಾಗುತ್ತದೆ. ಇನ್ನೊಬ್ಬರನ್ನು ಹತೋಟಿಗೆ ತೆಗೆದುಕೊಳ್ಳಬೇಕೆಂದು ಹೇಳುವಾಗ ನಾವು ಏನು ಮಾಡಿದ್ದೇವೆ ಏನು ಮಾಡುತ್ತಿ-ದ್ದೇವೆ ಎಂಬುದು ಬಹಳ ಮುಖ್ಯವಾಗುತ್ತದೆ. ಆದ್ದರಿಂದ ಆ ಪ್ರಶ್ನೆಗೆ ಹೋಗುವುದು ಬೇಡ. ಒಂದು ಶಾಶ್ವತ ನೆಲಗಟ್ಟಿನ ಮೇಲೆ ಇರುವುದನ್ನು ಪದೇ ಪದೇ ಕದಡಿಸತಕ್ಕಂಥಾದ್ದು ಏಕೆ. ಇಂತಹ ಅಗತ್ಯ ಎಲ್ಲಿ ಇದೆ, ಎಲ್ಲಿ ಅಗತ್ಯವಿದೆ ಎಂದು ಕಾಣುತ್ತದೋ What is that we get geographical quantity ದೃಷ್ಟಿಯಿಂದ ಅಥವಾ ಆವಳಿತಾತ್ಮಕವಾದ ವ್ಯವಸ್ಥೆ ದೃಷ್ಟಿಯಿಂದ ಅಲ್ಲಿ ಮಾಡುವುದಕ್ಕೆ ಈಗಿನ ಶಾಸನದಲ್ಲಿ ಅಧಿಕಾರ ಇದೆ. ಆದ್ದರಿಂದ ಇದರ ಅಗತ್ಯ ವೇನು ? ಮೇಲಾಗಿ ತಮಗೆ ಗೊತ್ತು. ಡೀ ಲಿಮಿಟೇಷನ್ ಆಫ್ ದಿ ಕಾನ್‌ಸ್ಟಿಟ್ಯೂಷನ್ ಮಾಡತಕ್ಕಂಥಾದ್ದಕ್ಕೆ ಎಷ್ಟು ಸಮಯ ಬೇಕಾಗುತ್ತದೆ. ಎಂದರೆ ಕನಿಷ್ಠ ಒಂದು ವರ್ಷ ಸಮಯ ಬೇಕಾಗುತ್ತದೆ ಆಮೇಲೆ ಚುನಾವಣೆಗೆ ಎಷ್ಟು ಸಮಯ ಬೇಕಾಗುತ್ತವೆನ್ನುವುದನ್ನು ತಾವು ದಯಮಾಡಿ ಆಲೋಚನೆ ಮಾಡಿ. ಡೀ ಲಿಮಿಟೇಷನ್ ಆಫ್ ದಿ ಕಾನ್‌ಸ್ಟಿಟ್ಯೂಯನ್ಸಿಗೆ ಒಂದು ವರ್ಷ ಬೇಕಾಗುತ್ತದೆ. ಒಂದು ತಿಂಗಳಲ್ಲಿ ಬೇಕಾದರೆ ಮಾಡಿಸಿ; ಸಂತೋಷ ಪಡುತ್ತೇನೆ. ಇದನ್ನು ನಮ್ಮ ಅನುಭವದಿಂದ ಹೇಳುತ್ತಿದ್ದೇನೆ. ಡೀ ಲಿಮಿಟೇಷನ್ ಮಾಡಲು ಕನಿಷ್ಠ ಒಂದು ವರ್ಷ ಬೇಕು. ಆ ಮಧ್ಯೆ ಈ ವ್ಯವಸ್ಥೆ ಏನಾಗುತ್ತದೆಂಬುದನ್ನು ವಿಚಾರ ಮಾಡಬೇಕು. ಡೀ ಲಿಮಿಟೇಷನ್ ಆಗಿ ಪುನಃ ಚುನಾವಣೆ ಯಾಗುವವರೆಗೂ ಈಗಿನ ವ್ಯವಸ್ಥೆ ಏನಾಗುತ್ತದೆ.

ಶ್ರೀ ಎಂ. ವಿ. ವೆಂಕಟಪ್ಪ :– ಈ ವರ್ಷ ಇದೆಯಲ್ಲ. ಮಾಡಿದ್ದೀರಾ ?

ಶ್ರೀ ಡಿ. ಬಿ. ಚಂದ್ರೇಗೌಡ :– ಅಂದರೆ 4 ವರ್ಷ ಇದ್ದುದನ್ನು 5 ವರ್ಷ ಎಂದು.

ಶ್ರೀ ಎಂ. ವಿ. ವೆಂಕಟಪ್ಪ :– ಮಾಡಿದ್ದಾರೆ.

ಶ್ರೀ ಆರ್. ಎನ್. ನಾಯಕ :– ಹಿಂದೆ ಡೀ ಲಿಮಿಟೇಷನ್ ಮಾಡಲು ಎಷ್ಟು ವೇಳೆ ಬೇಕಾಗುತ್ತದೆಂದು ಹೇಳುತ್ತಿದ್ದರು ಅಷ್ಟೇ ವೇಳೆ ಈಗ ಇದಕ್ಕೆ ಬೇಕಾಗುತ್ತದೆ.

ಶ್ರೀ ಡಿ. ಬಿ. ಚಂದ್ರೇಗೌಡ :– ಬೇಕಾಗುತ್ತದೆ ಎಂದು ಹೇಳಿದೆ ಡೀ ಲಿಮಿಟೇಷನ್‌ಗೆ ಎಷ್ಟು ವೇಳೆ ಹಿಂದೆ ಬೇಕಾಗಿತ್ತೋ ಈಗಲೂ ಅಷ್ಟೇ ವೇಳೆ ಬೇಕಾಗುತ್ತದೆ. ತಾವು ಮಧ್ಯೆ ಬಂದು ಹೇಳುತ್ತೀರಿ; ನನಗೆ ತೊಂದರೆಯಾಗುತ್ತದೆ. ನಾನು ಯಾವ ಧಾಟಿಯಲ್ಲಿ ಹೋಗುತ್ತಿದ್ದೇನೆಂದು ಅರ್ಥ ಮಾಡಿಕೊಳ್ಳಿ. ನಾನು ಗ್ರಾಮೀಣ ಜೀವನದ ಪ್ರತಿ ಹಂಥಗಳನ್ನು ಸ್ವತಃ ಅನುಭವಿಸಿ ಬಂದವನಾಗಿರುತ್ತೇನೆ. ಆದುದರಿಂದ ಕೆಲವು ವಿಚಾರಗಳನ್ನು ಇಲ್ಲಿ ಹೇಳುತ್ತೇನೆ. ಇಲ್ಲಿರುವ ಬಹುತೇಕ ಜನ ಗ್ರಾಮೀಣ ಪ್ರದೇಶವನ್ನು ಪ್ರತಿನಿಧಿಸತಕ್ಕಂತಹವರು ನಾವು ಈ ಸಮಸ್ಯೆಗಳನ್ನು ಇಲ್ಲಿ ಚರ್ಚೆ ಮಾಡೋಣ. ಅನಿವಾರ್ಯವಾದಂಥ ಸಂದರ್ಭ ಇದ್ದರೆ ಡೀ ಲಿಮಿಟೇಷನ್ ಮಾಡೋಣ. ಹೆಚ್ಚು ಪಂಚಾಯತಿಗಳನ್ನು ಮಾಡೋಣ. ಆದರೆ ಈಗ ಏಕೆ ಬೇಕು ? ಈ ಒಂದು ಪ್ರಯೋಗವನ್ನು ಬರೀ ಗ್ರಾಮೀಣ ಪ್ರದೇಶಗಳಲ್ಲಿ ಮಾತ್ರ ಏಕೆ ಮಾಡಬೇಕು ? ಗ್ರಾಮೀಣ ಪ್ರದೇಶವನ್ನು ಪ್ರಯೋಗ ಶಾಲೆಯನ್ನಾಗಿ ಒಂದೊಂದು ಸರಕಾರ ಬಂದಾಗ ಒಂದೊಂದು ರೀತಿ ಮಾಡುವುದು. ಏಕೆ ಇಲ್ಲಿ ಪ್ರಯೋಗ ಮಾಡಬೇಕು; ಅವರ ಪಾಡಿಗೆ ಅವರನ್ನು ಬಿಡಿ. ಅಪರಾಧಗಳಾಗಿದ್ದರೆ ಎಲ್ಲೆಲ್ಲಿ ನಮ್ಮ ವ್ಯಾಪ್ತಿಗೆ ಬರುತ್ತದೆಯೋ ಅದಷ್ಟಕ್ಕೆ ಮಾತ್ರ ಸೀಮಿತವಾಗಿ ನಾವು ಪ್ರವೇಶ ಮಾಡೋಣ. ಇದರ ಜೊತೆಗೆ ಈ ಫೈನಾನ್ಷಿಯಲ್ ಮೆಮೊರ್ಯಾಂಡಮ್‌ನಲ್ಲಿ ಮಾನ್ಯ ಯಡಿಯೂರಪ್ಪನವರು ಹೇಳಿದ ಹಾಗೆ ಒಂದೊಂದು ಜಿಲ್ಲಾ ಪರಿಷತ್ತಿನಲ್ಲಿ ಎಷ್ಟು ನಾಮ ಫಲಕಗಳು ಇರಬಹುದು ಎಂದು ಅಂದಾಜು ಮಾಡಿದೆ. ಮಂಡಲದಲ್ಲಿ ಹೋಗಿ ನೋಡಿದರೆ ಸರಿ ಸುಮಾರಾಗಿ ಒಂದು ಮಂಡಲದಲ್ಲಿ ಕನಿಷ್ಠ 18 ಇವೆ. ಅವು ಮ್ಯಾಕ್ಸಿಮಮ್ 52 ಕ್ಕೆ ಹೋಗಬಹುದು. ಒಂದು ಜಿಲ್ಲಾ ಪರಿಷತ್ತಿನಲ್ಲಿ ಸರಿ ಸುಮಾರು 10 ಸಾವಿರ ನಾಮ ಫಲಕಗಳು ಇವೆ. ತಾವು ಹೇಳಿದಿರಿ ಕೋಟಿ ಎಂದು. ಒಂದು ಬೋರ್ಡ್ ಬರೆಸುವುದಕ್ಕೆ ನೂರು ರೂಪಾಯಿ ಸಾಕೆಂದು ನಾನು ಲೆಕ್ಕ ಹಾಕಿದೆ. ನಿನ್ನೆ ನಾರ್ತ ಕೆನರಾದಿಂದ ಬಂದವರು ಒಬ್ಬರು ಹೇಳಿದರು; ಒಂದು ಬೋರ್ಡಿಗೆ 800 ರೂಪಾಯಿ ಖರ್ಚು ಮಾಡಿದ್ದೇವೆ ಎಂದು. ನಾನು 800 ಕ್ಕೂ ಹೋಗುವುದಿಲ್ಲ ನನ್ನ ಲೆಕ್ಕದ ಪ್ರಕಾರ 100 ಕ್ಕೂ ಇಳಿಸುವುದಿಲ್ಲ. ಸರಿ ಸುಮಾರು 200 ರೂ.ಗಳಾದರೂ ಆಗಬಹುದು ಎಂದರೂ ಕೂಡ 10 ಸಾವಿರ ಒಂದು ಜಿಲ್ಲಾಪರಿಷತ್ತಿನಲ್ಲಿ ಖರ್ಚು ಆದರೆ ಇಪ್ಪತ್ತು ಜಿಲ್ಲಾ ಪರಿಷತ್ತುಗಳಲ್ಲಿ ಎಷ್ಟಾಗಬಹುದು ಎಂದರೆ ಸುಮಾರು 2 ಲಕ್ಷ ಆಗುತ್ತದೆ; 2 ಲಕ್ಷ ಇಂಟು 200 ಎಷ್ಟಾಯಿತು ಲೆಕ್ಕ ಹಾಕಿ.

ಶ್ರೀ ಬಿ. ಎಸ್. ಯಡಿಯೂರಪ್ಪ :– 200 ರೂಪಾಯಿ ನಾವೂ ನೀವೂ ಬರೆಸಿದರೆ ಸರಕಾರ ಬರೆಸಿದರೆ 500–800 ರೂಪಾಯಿಯಾಗುತ್ತದೆ. ನೀವು ಇದನ್ನು ಹೇಗೆ ಲೆಕ್ಕ ಹಾಕಿದಿರಿ ಎಂದು ನನಗೆ ಗೊತ್ತಿಲ್ಲ; ತಾವು ತಪ್ಪು ದಾರಿಗೆ ಹೋಗುತ್ತಿದ್ದೀರಿ ಎಂದು ಅನಿಸುತ್ತದೆ. ನಂತರ ಇದೇ ಸಚಿವರನ್ನು ಕೇಳಿ; ಅವರ ಲೆಕ್ಕದ ಪ್ರಕಾರ ಒಂದು ಬೋರ್ಡಿಗೆ 600–800 ರೂಪಾಯಿಯಾಗುತ್ತದೆ. ಅದರ ಅಂದಾಜನ್ನು ಅವರು ಖಂಡಿತ ಮಾಡಿರುತ್ತಾರೆ; ಮಾನ್ಯ ಮಂತ್ರಿಗಳನ್ನೇ ಕೇಳಿ.

ಶ್ರೀ ಜಿ. ಎಸ್. ಶಿವನಂಜಪ್ಪ:– ಮಾನ್ಯ ಯಡಿಯೂರಪ್ಪನವರು ಕೇಳಿದ ಪ್ರಶ್ನೆ ಇರಲಿ. ಈಗ ಬೋರ್ಡನ್ನು ಏನು ಬರೆಸಿದ್ದಾರೆ ಅದನ್ನು ಲೆಕ್ಕ ಹಾಕಿದರೆ ಸಾಕು. ಅವರ ಲೆಕ್ಕವನ್ನೇ ತರಿಸಿ ನೋಡಿ; ಸಾಕಾಗುತ್ತದೆ.

ಶ್ರೀ ಡಿ. ಬಿ. ಚಂದ್ರೇಗೌಡ :– ಶ್ರೀ ಶಿವನಂಜಪ್ಪನವರೇ, ನಿಮಗೆ ಬಹಳ ವಂದನೆಗಳು. ಏಕೆಂದರೆ ಇದು ನಿಮಗೆ ಅರ್ಥವಾಯಿತು. ಈಗ ಬರೆಸಿರುವ ಬೋರ್ಡುಗಳಿಗೆ ಖರ್ಚು ಎಷ್ಟಾಗಿದೆ ಎಂದು ತರಿಸಿದರೆ, ಮುಂದೆ ಬರೆಸುವುದಕ್ಕೆ ಎಷ್ಟು ಬೇಕು ಎಂದು ಗೊತ್ತಾಗುತ್ತದೆ.

ಶ್ರೀ ಬಿ. ಎಸ್. ಯಡಿಯೂರಪ್ಪ :– ಈ ಬಗ್ಗೆ ಭ್ರಷ್ಟಾಚಾರ ನಡೆದಿದೆ ಎಂದರೆ ನಾವು ನೀವು ಸೇರಿ ಪ್ರತಿಭಟನೆ ಮಾಡಲೇಬೇಕು. ನೆಲಕ್ಕೆ ಹಾಕುವ ಚಾಪೆಗೆ ಇನ್ನೂರು ರೂಪಾಯಿ ಕೊಟ್ಟು ಜಿಲ್ಲಾ ಪರಿಷತ್ತಿನಲ್ಲಿ ತಂದಿದ್ದಾರೆ. ಇದು ನಡೆದಿರತಕ್ಕಂಥ ಕತೆಗಳನ್ನು ನೋಡಿದರೆ, ಇದು ಒಂದು ಕರ್ಮಕಾಂಡ; ಇದೆಲ್ಲಾ ನಡೆದಿರುವಂತಹದ್ದು. ಮುಂದೆ ಈ ಬಗ್ಗೆ ವಿಚಾರ ಮಾಡೋಣ.

ಶ್ರೀ ಬಿ. ಬಸವಲಿಂಗಪ್ಪ :– ಮಾನ್ಯ ಅಧ್ಯಕ್ಷರೇ, ಕೈವಾರ ನಾರಾಯಣಪ್ಪನವರು ಕಾಲಜ್ಞಾನವನ್ನು ಬರೆದಿದ್ದಾರೆ. ಅವರು ಹೇಳಿದ್ದಾರೆ— ಬರುತ್ತಾ ಬರುತ್ತಾ ಶ್ಯಾನಭೋಗರಿಂದ ಹಿಡಿದು ಸರ್ಕಾರಿ ನೌಕರರು ಮತ್ತು ಸರ್ಕಾರದವರೆಗಿನ ಕೂಡ ಸುಳ್ಳು ಲೆಕ್ಕ ತಯಾರು ಮಾಡುವಂಥ ಒಂದು ಜ್ಞಾನವನ್ನು ಸಂಪಾದನೆ ಮಾಡುತ್ತಾರೆ; ಸುಳ್ಳು ಲೆಕ್ಕ ತಯಾರುಮಾಡಿ ಅದಕ್ಕೆ ಸರ್ಕಾರದ ಬೊಕ್ಕಸದಿಂದ ಹಣ ಪಡೆದು ಇನ್ನುಮೇಲೆ ಸರ್ಕಾರಕ್ಕೆ ಮೋಸ ಮಾಡುತ್ತಾರೆ ಅಂತ ಬರೆದಿದ್ದಾರೆ. ಇದನ್ನು ಸುಮ್ಮನೆ ನಿಮ್ಮ ಗಮನಕ್ಕೆ ತಂದೆ.

ಶ್ರೀ ಡಿ. ಬಿ. ಚಂದ್ರೇಗೌಡ :– ಅನುಮಾನ ಇಲ್ಲದಹಾಗೆ ಮತ್ತೊಂದು ಮಾತನ್ನು ಹೇಳಲೇನು ?

The power and Corruption are the two faces of the same coin.

Sri. C. Byregowda :- They go and in hand……

Sri. D. B. Chaudregowda :— Bigger the powers, bigger will be corruption, smaller will be are area, smaller corruption.

ಡಿಸೆಂಟ್ರಲೈಸೇಶನ್ ಆಫ್ ಪವರ್ ಜೊತೆಗೆ ಡಿಸೆಂಟ್ರ ಲೈಸೇಶನ್ ಆಫ್ ಕರಪ್ಶನ್ ಆಗಿದೆಯೆಂದು ನಾನು ಒಪ್ಪುತ್ತೇನೆ. ಇದು ಆಗಿದೆಯೆಂದು ಹೇಳುವಾಗ ನೀವು ಎದೆಮುಟ್ಟಿಕೊಂಡು ಹೇಳುತ್ತೀರಾ, ವಿಧಾನಸೌಧದಲ್ಲಿ ಕರಪ್ಶನ್ ಇಲ್ಲ ಅಂತ ?

ಶ್ರೀ ವಾಟ್ಸಾಳ್ ನಾಗರಾಜ್ :— ಎಲ್ಲಿದೆ ತೋರಿಸಿ ? ಎಲ್ಲೆಲ್ಲೂ ಇಲ್ಲ.

ಶ್ರೀ ಆರ್. ಎನ್. ನಾಯ್ಕ :— ಈ ರಾಜ್ಯದಲ್ಲಿ ಲಂಚಗುಳಿತನ ಇಲ್ಲವೆಂದು ಇವರ ನಾಯಕರು ಅಧಿಕಾರದಲ್ಲಿದ್ದಾಗ ಡಿಕ್ಲೇರ್ ಮಾಡಿದ್ದರು.

ಛೇರ್ಮನ್ :— ನಾಯಕ್ ಅವರೇ ಅವರಿಗೆ ಮಾತನಾಡುವುದಕ್ಕೆ ಅವಕಾಶ ಕೊಡಿ.

ಶ್ರೀ ವಾಟ್ಸಾಳ್ ನಾಗರಾಜ್ :— ಅದಕ್ಕೇ 'ಸರ್ಕಾರದ ಕೆಲಸ ದೇವರ ಕೆಲಸ' ಎಂದು ಹೊರಗಡೆ ಶ್ರೀ ಕೆಂಗಲ್ ಹನಮಂತಯ್ಯನವರು ಬೋರ್ಡು ಬರೆಯಿಸಿರುವುದು. ಆದ್ದರಿಂದ ಲಂಚ ಎಲ್ಲೆಲ್ಲೂ ಇಲ್ಲ.

(ಉಪಾಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು.)

ಶ್ರೀ ಡಿ. ಬಿ. ಚಂದ್ರೇಗೌಡ :— ಆದ್ದರಿಂದ ನಾನು ತಮ್ಮಲ್ಲಿ ಕೇಳುವುದು ಏನೆಂದರೆ, ಈ ವಿಚಾರದ ವ್ಯಾಖ್ಯಾನಕ್ಕೆ ಹೋದರೆ ಬಹಳ ದೀರ್ಘವಾಗಿ ಹೋಗುತ್ತದೆ. ನಾನು ಕೆಳಗೆ ಇರುವವರೆಲ್ಲರೂ ಸರ್ವಜ್ಞ ರೆಂದು ಹೇಳುತ್ತಿಲ್ಲ. ಆದರೆ ನಾವು ಒಂದು ಶಾಸನ ಮಾಡುವಾಗ ಜಿಲ್ಲಾ ಪರಿಷತ್ ಮುದ್ದಾದ ಹೆಸರು. ಇದನ್ನು ಏಕೆ ಬದಲಾವಣೆ ಮಾಡಬೇಕು ? ಕೋಟ್ಯಾಂತರ ರೂಪಾಯಿ ಖರ್ಚು ಮಾಡುವ ಅಗತ್ಯವೇನು ? ಇದರಿಂದ ಆಗಿರತಕ್ಕ ಲಾಭವೇನು ಏನು? 'ಮಂಡಲ್ ಪಂಚಾಯತ್' ಮುದ್ದಾದ ಹೆಸರು ಈಗ ಜಿಲ್ಲಾ ಪಂಚಾಯತ್ ಅಭಿವೃದ್ಧಿ ಮಂಡಲಿ. ಈ ಬೋರ್ಡು ಬರೆಸಲಿಕ್ಕೆ ಈಗ ಎಷ್ಟು ಖರ್ಚು ಮಾಡಿದ್ದಾರೋ ಇದರ ಮೂರು ಪಟ್ಟು ಬೇಕು. ಏಕೆಂದರೆ ಈಗ ಜಿಲ್ಲಾ ಪಂಚಾಯತ್ ಅಭಿವೃದ್ಧಿ ಸಮಿತಿ ಅಂತ ಮಾಡಿದಿರಿ. ಮತ್ತೇನು ಕಡಿಮೆ ಆಗುತ್ತದೆ ? ಇದು ಐಎ ದೊರೆಗಳು ಮಾಡುವ ಕೆಲಸ ಎಂದು ಹೇಳಬೇಕೋ ಬೇಡವೋ ?

ಶ್ರೀ ಬಿ. ಬಸವಲಿಂಗಪ್ಪ :— ಈಗ ಬಂದಿರುವ ಸಲಹೆಗಳನ್ನು ಗಮನದಲ್ಲಿಟ್ಟುಕೊಂಡು ಬರೇ 'ಕರ್ನಾಟಕ ಪಂಚಾಯತ್ ರಾಜ್' ಎಂದು ಮಾಡಿದ್ದೇವೆ.

ಶ್ರೀ ಡಿ. ಬಿ. ಚಂದ್ರೇಗೌಡ :— ಕರ್ನಾಟಕ ಪಂಚಾಯತ್ ರಾಜ್ ಎಂದು ಬರೆಯುವುದಕ್ಕೆ ಒಂದು ಬೋರ್ಡು. ಜಿಲ್ಲಾ ಅಭಿವೃದ್ಧಿ ಸಮಿತಿ ಎಂದು ಬರೆಯುವುದಕ್ಕೆ ಹತ್ತು ಸಾವಿರ ಬೋರ್ಡುಗಳು. ಮಂಡಲ್ ಪಂಚಾಯತಿ ಎನ್ನುವುದನ್ನು ಬದಲಾವಣೆ ಮಾಡುವುದಕ್ಕೆ ಮತ್ತೆ ಲಕ್ಷಾಂತರ ಬೋರ್ಡುಗಳು.

ಶ್ರೀ ಬಿ. ಎಸ್. ಯಡಿಯೂರಪ್ಪ :— ಸನ್ಮಾನ್ಯ ಉಪಾಧ್ಯಕ್ಷಿಣಿಯವರೇ, ಆಶ್ಚರ್ಯ ಏನೆಂದರೆ ಇದರಲ್ಲಿ ಯಾರನ್ನೂ ದೂರುವುದಿಲ್ಲ. ಇದಕ್ಕೆ ನಾವೆಲ್ಲರೂ ಜವಾಬ್ದಾರರು. ಜಿಲ್ಲಾ ಪರಿಷತ್ತಿನಿಂದ, ಯಾವುದೇ ಮಂಡಲ್ ಪಂಚಾಯಿತ್ತಿಯಿಂದ ನಮಗೆ ಇಂತಹ ಫಾರಂ ಬೇಕೆಂದು ಕೇಳಿರಲಿಲ್ಲ. ನೀವು ನಂಬುತ್ತೀರೋ ಇಲ್ಲವೋ, ಕಣ್ಣಲ್ಲಿ ನೀರು ಬರುತ್ತದೆ. ನಿಜಕ್ಕೂ ಅಧಿಕಾರಿಗಳಿಗೆ ಎಂತಹ ಶಿಕ್ಷೆ ಕೊಡಬೇಕೋ ಗೊತ್ತಿಲ್ಲ ಇನ್ನು 10 ವರ್ಷಗಳು ಮಂಡಲ ಪಂಚಾಯಿತ್ತಿಗಳಲ್ಲಿ ಬರೆದರೂ ಮುಗಿಯದಿರುವಷ್ಟು ಫಾರಂಗಳನ್ನು ಪ್ರಿಂಟ್ ಮಾಡಿ ಕಳುಹಿಸಿದ್ದಾರೆ. ಇದಕ್ಕೆ ಕೋಟಿಗಟ್ಟಲೆ ಹಣ ಖರ್ಚು ಮಾಡಿದ್ದಾರೆ. ಈಗ ಆ ಫಾರಂಗಳನ್ನೆಲ್ಲಾ ಕಿತ್ತೊಗೆದು, ಬೆಂಕಿ ಹಚ್ಚಿ, ಮತ್ತೆ ಹೊಸ ಫಾರಂ ಪ್ರಿಂಟ್ ಮಾಡಬೇಕು. ಈಗಿರುವ ವ್ಯವಸ್ಥೆಯೇ ಉಳಿದರೂ ಈ ರಾಜ್ಯದಲ್ಲಿ ಇನ್ನೂ 10 ವರ್ಷ ಈ ಫಾರಂಗಳು ಮುಗಿಯುವುದಿಲ್ಲ. ಅಷ್ಟು ಪ್ರಿಂಟ್ ಮಾಡಿ ಕಳುಹಿಸಿದ್ದಾರೆ.

ಶ್ರೀ ಕರಿಯಣ್ಣ :— ಅಷ್ಟು ಅಧಿಕಾರ ಜಿಲ್ಲಾ ಪರಿಷತ್ತಿಗೆ ಇತ್ತು. ಎಷ್ಟು ಬೇಕಾದರೂ ಪ್ರಿಂಟ್ ಮಾಡಿ ಮಂಡಲ ಪಂಚಾಯಿತ್ತಿಗಳಿಗೆ ಕಳುಹಿಸುವ ಅಧಿಕಾರ ಜಿಲ್ಲಾ ಪರಿಷತ್ತಿಗೆ ಇದೆ......

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ :— ಈ ವ್ಯವಸ್ಥೆ ಬದಲಾವಣೆಯಾದ ತಕ್ಷಣ, ಹೆಸರು ಬದಲಾವಣೆ ಯಾದ ತಕ್ಷಣ, ಈ ಲೂಟಿ ಹೊಡೆಯುವುದು ನಿಲ್ಲುವುದಿಲ್ಲ. ಇದಕ್ಕೆ ಏನಾದರೂ ತಿದ್ದುಪಡಿ ಇದ್ದರೆ ಹೇಳಿ ಅದನ್ನು ನಾವು ಸ್ವಾಗತ ಮಾಡುತ್ತೇವೆ.

ಶ್ರೀ ಡಿ. ಬಿ. ಚಂದ್ರೇಗೌಡ :– ಅದಕ್ಕೆ ನಾನು ಹೇಳಿದೆ. ಏನೆಂದರೆ, ಇದು ಐಎ ದೊರೆಗಳು ಮಾಡುವ ಕೆಲಸ ಎಂದು; ಡೆಲ್ಲಿಯಿಂದ ದೇವಗಿರಿಗೆ ರಾಜಧಾನಿಯನ್ನು ಬದಲಾಯಿಸಬಾರದೆಂದು ಯಾರೂ ಹೇಳಲಿಲ್ಲ. ಬದಲಾಯಿಸಬೇಕಾಯಿತು. ಆದರೆ ಬದಲಾಯಿಸಿದಾಗ ಅಲ್ಲಿ ಯಾರು ಉಳಿಯುತ್ತಾರೆಂದು ನೋಡಬೇಕು. ಡೆಲ್ಲಿಯಿಂದ ದೇವಗಿರಿಗೆ ಹೋಗಿ ಎಂದಾಗ, ಎಲ್ಲಾ ಜನಗಳೂ ಇಲ್ಲಿಗೆ ಬಂದರು. ಅವರಲ್ಲಿ ಕುಂಟ, 2–3 ಜನ ಹೆಳವರು, ಮೂಕರು ಉಳಿದಿದ್ದರೆ, ಅವರನ್ನು ಕುದುರೆ ಕಾಲಿಗೆ ಕಟ್ಟಿ ಎಳೆದುಕೊಂಡು ಬನ್ನಿ. ಇಂತಹ ಐಎ ದೊರೆ ತೀರ್ಮಾನ, ಹೆಸರು ಬದಲಾವಣೆ ಮಾಡುವುದು ಯಾವ ಪುರುಷಾರ್ಥಕ್ಕೆ ಹೇಳಿ. ಇದರಿಂದ ಆಗ-ತಕ್ಕಂತಾದ್ದು, ಮಾನ್ಯ ಯಡಿಯೂರಪ್ಪನವರು ಹೇಳಿದಹಾಗೆ, ನಾವು ಫಲಕಗಳನ್ನು ಬರೆಯುವುದಕ್ಕೆ ಎಷ್ಟು ದುಡ್ಡು ಬೇಕು, ಈಗಾಗಲೇ ಪ್ರಿಂಟ್ ಮಾಡಿರುವ ಫಾರಂಗಳನ್ನು ಸುಡುವುದಕ್ಕೆ ಎಷ್ಟು ಹಣ ಬೇಕು, ಮತ್ತೆ ಇವುಗಳನ್ನು ತಯಾರು ಮಾಡುವುದಕ್ಕೆ ಎಷ್ಟು ದುಡ್ಡು ಬೇಕು. ಈಗಾಗಲೇ ಜನ ಮುದ್ದಾದ ಜಿಲ್ಲಾ ಪರಿಷತ್ತು ಮತ್ತು ಮಂಡಲ್ ಪಂಚಾಯ್ತಿ ಎನ್ನುವ ಹೆಸರುಗಳನ್ನು ಒಪ್ಪಿದ್ದಾರೆ. ಮತ್ತೆ ಚೀಫ್ ಸೆಕ್ರೆಟರಿ ಬದಲಾವಣೆ, ಮತ್ತೆ ಅವನಿಗೆ ಒಂದು ಬೋರ್ಡ್, ಅವನ ಹೆಸರಿನಲ್ಲಿ ಪ್ರಿಂಟ್ ಆಗಿರತಕ್ಕ ಕಾಗದ ಪತ್ರಗಳನ್ನು ಮತ್ತೆ ಪ್ರಿಂಟ್ ಮಾಡಿಸುವುದು. ಇದಕ್ಕೆ ಯಾವ ಆಧಾರಗಳೂ ಇಲ್ಲವೆಂದು ಹೇಳಿದರೆ ಮಾಡಿ ಆದರೆ ಇದು ಸರಿಯಾದುದಲ್ಲ. ನಾನು ಇಲ್ಲಿ ಕೇಳುತ್ತೇನೆ. ದೇಶದ ಜನರ ದೃಷ್ಟಿಯಿಂದ, ಪ್ರತಿಯೊಂದಕ್ಕೂ ಎಕಾನಮಿ ಮೇಜರ್, ಯಾವಾಗ ಕೇಳಿದರೂ ದುಡ್ಡು ಇಲ್ಲ. ಜಿಲ್ಲಾ ಪರಿಷತ್ತಿನ ಹೆಸರು ಬದಲಾವಣೆ ಮಾಡಿ ಬರೆಸುವುದಕ್ಕೆ ದುಡ್ಡು ಇದೆ, ಈಗಾಗಲೇ ಮಾಡಿರತಕ್ಕ ಫಾರಂಗಳನ್ನು ಸುಡುವುದಕ್ಕೆ ದುಡ್ಡು ಇದೆ, ಮತ್ತೆ ಹೊಸದಾಗಿ ಫಾರಂಗಳನ್ನು ಮಾಡುವುದಕ್ಕೆ ದುಡ್ಡು ಇದೆ. ಇವೆಲ್ಲಾ ಯಾರ ಸಲುವಾಗಿ, ಇದು ಒಂದು ಕಡೆ. ನಾನು ಇದರ ಬಗ್ಗೆ ಹೆಚ್ಚು ವ್ಯಾಖ್ಯಾನ ಮಾಡುವುದಿಲ್ಲ. What are your priorities ? Industrial priority, agricultural priority or co-operative sector priority.
ಒಟ್ಟು ನಿಮ್ಮ ಸರ್ಕಾರದ ಪ್ರಿಯಾರಿಟೀಸ್ ಏನು ? ಹೊಸ ಸರಕಾರ ಬಂದಿದೆ; ಏನಾದರೂ ಇವರು ಪ್ರಿಯಾರಿಟಿ, ಕೊಡುತ್ತಾರೆಂದು ಜನ ತಿಳಿದಿದ್ದರು. ಇಂಡಸ್ಟ್ರಿಯಲ್ ಪ್ರಿಯಾರಿಟಿನೋ, ಅಗ್ರಿಕಲ್ಚರ ಪ್ರಿಯಾರಿಟಿನೋ, ಕೋ ಆಪರೇಟಿವ್ ಸೆಕ್ಟಾರ್ ಪ್ರಿಯಾರಿಟಿನೋ ಅಥವಾ ಯಾವುದಾದರೂ ದೊಡ್ಡ ಹೊಸ ರಿಫಾರಮ್ಸ್ ಪ್ರಿಯಾರಿಟಿನೋ ಕೊಡುತ್ತಾರೆಂದು ಜನ ತಿಳಿದಿದ್ದರು. ಆದರೆ ಇದು ಯಾವುದೂ ಅಲ್ಲ. ಜಿಲ್ಲಾ ಪರಿಷತ್ ಮತ್ತು ಮಂಡಲ್ ಪಂಚಾಯ್ತಿಗಳ ಹೆಸರು ಬದಲಾಯಿಸುವುದಕ್ಕೆ ಪ್ರಿಯಾರಿಟಿ. Do I call this as a Govenment ? Is it your priority ? This a major legislation coming up form the new Government.
ಇದರಲ್ಲಿ ಪ್ರತಿಹಂತದಲ್ಲೂ ನನಗೆ ಬಹಳ ನೋವಾಗುತ್ತದೆ. ಇದರಲ್ಲಿ ಒಟ್ಟಾರೆ ನೀವು ಸಾಧಿಸಿದ್ದು ಏನು ? ಯಾವ ದೃಷ್ಟಿಯಿಂದ ನೋಡಿದರೂ, ಈ ಮಸೂದೆಗೆ ತಿದ್ದುಪಡಿ ತರುವುದಕ್ಕೆ ಮೌಲ್ಯ ಮಾಪನ ಸಮಿತಿ ವರದಿ ಆಧಾರ ಅಲ್ಲ. ರಾಜ್ಯಾಂಗದ 64 ನೇ ತಿದ್ದುಪಡಿ ಆಧಾರ ಅಲ್ಲ. ಫೈನಾನ್ಸ್ ಕಮಿಷನ್ ಹೊನ್ನಾವರ್ ಸಮಿತಿ ವರದಿ ಆಧಾರ ಅಲ್ಲ......

ಶ್ರೀ ವಾಟಾಳ್ ನಾಗರಾಜ್ :– ಸಭಾಪತಿ ಮತ್ತು ಉಪ ಸಭಾಪತಿ. ಹಾಗಾದರೆ ಪ್ರಧಾನರು ಹೊರಟು ಹೋಗುತ್ತಾರೆ. ಪ್ರಧಾನರು ಹೋದಹಾಗೆ. ಇದು ಬಹಳ ಕಷ್ಟ.

ಶ್ರೀ ಬಿ. ಬಸವಲಿಂಗಪ್ಪ :– ದೇಶಕ್ಕೆ ಒಬ್ಬನೇ ಪ್ರಧಾನಿ ಇರಬೇಕೆಂದು ನಮ್ಮ ವಿಚಾರ.

ಶ್ರೀ ವಾಟಾಳ್ ನಾಗರಾಜ್ :– ಇಲ್ಲಿ ಸಭಾಪತಿ ಮತ್ತು ಉಪಸಭಾಪತಿ ಎಂದು ಬದಲಾವಣೆ ಮಾಡಿದ್ದೀರಿ. ಇದು ಬಹಳ ಕಷ್ಟ. ನಮ್ಮ ಮೇಲ್ಮನೆಯಲ್ಲಿ ಚೇರ್ಮನ್ ಎಂದರೆ ಸಭಾಪತಿ ಇರುತ್ತಾರೆ. ಈ ಸಭೆಯಲ್ಲಿ ಅಧ್ಯಕ್ಷರು ಇರುತ್ತಾರೆ. ನೀವು ಅಲ್ಲಿ ಹೆಸರು ಬದಲಾವಣೆ ಮಾಡಿ ಸಭಾಪತಿ ಉಪಸಭಾಪತಿ ಎಂದು ಇಡುತ್ತಿದ್ದೀರಿ. ಇದನ್ನು ಸ್ವಲ್ಪ ತಾವು ಯೋಚನೆ ಮಾಡಿ. ಬದಲಾವಣೆ ಮಾಡಲೇಬೇಕೆಂದು ಹಠ ಹಿಡಿದಿದ್ದೀರಿ. ಅವರ ಹೆಸರುಗಳ ಕಥೆ ಮುಗಿಸಿದಿರಿ.

ಶ್ರೀ ಬಿ. ಬಸವಲಿಂಗಪ್ಪ :– ಹಿಂದಿನ ಕಾಲದಲ್ಲಿ ಚೇರ್ಮನ್‌ರು ಎಂದು ಇದ್ದರು ಚೇರ್ಮನ್ ಎಂಬುದು ಕನ್ನಡ ಪದವೇ ಆಯಿತು. ಚೇರ್ಮನ್‌ರು ಬರುತ್ತಾರೆ ಹೋಗುತ್ತಾರೆ ಎನ್ನುತ್ತಿದ್ದರು. ಇವರು ಏನು ಮಾಡಿಬಿಟ್ಟರು ಎಂದರೆ ನಮ್ಮ ಜನತಾ ದಳದವರು ಬಂದ ತಕ್ಷಣ ಪ್ರಧಾನ ಎಂದು ಮಾಡಿದರು. ಮಂಡಲ ಪಂಚಾಯತಿಗೆ ಒಬ್ಬ ಪ್ರಧಾನಿ ಮಾಡಿಬಿಟ್ಟರು. ಹಳ್ಳಿಗಾಡಿನಲ್ಲಿ ಅವರು ಬಂದಾಗ ಪ್ರಧಾನಿಗಳು ಬರುತ್ತಾರೆ ಇರಪ್ಪ ಎಂದು ಹೇಳುತ್ತಾರೆ. ಪ್ರಧಾನರು ಎನ್ನುವುದು ಬಹಳ ಕಡಿಮೆ. ಪ್ರಧಾನಿ ಎಂದು ಆಗಿದೆ. ದೇಶಕ್ಕೆ ಒಬ್ಬರೇ ಪ್ರಧಾನಿ ಇರಬೇಕು. ಇವರು ಪಂಚಾಯತಿಗೆ ಒಬ್ಬ ಪ್ರಧಾನಿ ಮಾಡಿದರು. ಎಲ್ಲಾ ಅಧಿಕಾರ ಅವರಿಗೇ ಕೊಟ್ಟುಬಿಡೋಣವೇ ?

ಶ್ರೀ ವಾಟಾಳ್ ನಾಗರಾಜ್ :– ಜನಸಾಮಾನ್ಯರಿಗೂ ಪ್ರಧಾನಿ ಎಂಬ ಪಟ್ಟ ಇರಲಿ ಎಂಬ ಸದುದ್ದೇಶ ದಿಂದ ಮಾಡಿರತಕ್ಕಂಥ ಘನವಾದ ಕಾರ್ಯ ಇದು.

ಶ್ರೀ ಎ. ಬಿ. ಜಕನೂರ್ :– ಹಳ್ಳಿಯಲ್ಲಿ ಬಂದನಲ್ಲೋ ಪ್ರಧಾನ ಎಂದು ಹೇಳುತ್ತಾರೆ. ಅದಕ್ಕೆ ಚೇಂಜ್ ಮಾಡಿರುತ್ತೇವೆ.

ಶ್ರೀ ಡಿ. ಬಿ. ಚಂದ್ರೇಗೌಡ :– ನನಗೆ ನಗಬೇಕೋ ಅಳಬೇಕೋ ಗೊತ್ತಾಗುತ್ತಿಲ್ಲ.

ಶ್ರೀ ಕೆ. ಎಸ್. ಈಶ್ವರಪ್ಪ :– ಅನುಭವಿಸಬೇಕಷ್ಟೇ. ನಗುವ ಹಾಗೂ ಇಲ್ಲ, ಅಳುವಹಾಗೂ ಇಲ್ಲ.

ಶ್ರೀ ಡಿ. ಬಿ. ಚಂದ್ರೇಗೌಡ :– ಆಗಲಿ, ಅನುಭವಿಸುತ್ತೇನೆ.

ಶ್ರೀ ಆರ್. ಎನ್. ನಾಯಕ್ :– ಸಿಟ್ಟು ಮಾಡಿಕೊಳ್ಳಬೇಡಿ.

ಶ್ರೀ ಡಿ. ಬಿ. ಚಂದ್ರೇಗೌಡ :– ನನಗೆ ಸಿಟ್ಟಿಲ್ಲ. ಅನುಕಂಪ ಅಷ್ಟೆ. ದೇಶದ ಸಾಮಾನ್ಯ ಜನರ ತೆರಿಗೆ ಹಣವನ್ನು ಎಷ್ಟು ಲಘುವಾಗಿ ನಾವು ಖರ್ಚು ಮಾಡುವುದಕ್ಕೆ ಆಲೋಚನೆ ಮಾಡುತ್ತೇವೆ. ಅದಕ್ಕೆ ಅನುಕಂಪ ಅಷ್ಟೆ. ಜನ ನಮ್ಮಮೇಲೆ ಏನು ಭಾವನೆಗಳನ್ನು ಅಭಿವ್ಯಕ್ತ ಮಾಡಬಹುದು.

ಶ್ರೀ ಆರ್. ಎನ್. ನಾಯಕ್ :– ಅನುಕಂಪ ಎಂಬ ಶಬ್ದವನ್ನು ಬಹಳ ಬಳಸುತ್ತಿದ್ದೀರಿ. ಸಾಧಾರಣವಾಗಿ ಬಹು ದೊಡ್ಡ ವ್ಯಕ್ತಿಗೆ ಬಹಳ ಸಣ್ಣ ಮನುಷ್ಯನನ್ನು ನೋಡಿದ ಕೂಡಲೇ ಅನುಕಂಪ ಬರುತ್ತದೆ. ಈಗ ತಾವು ಬಹಳ ದೊಡ್ಡವರಾದುದರಿಂದ ತಮಗೆ ನಮ್ಮನ್ನು ನೋಡಿ ಅನುಕಂಪ ಬಂದಿದೆ ಎಂದು ನಾನು ತಿಳಿದು ಕೊಂಡಿದ್ದೇನೆ.

ಶ್ರೀ ಡಿ. ಬಿ. ಚಂದ್ರೇಗೌಡ :– ಇರಬಹುದು.

ಶ್ರೀ ವಾಟಾಳ್ ನಾಗರಾಜ್ :– ತಾವು ಸಣ್ಣವರು ಎಂದು ತಿಳಿದುಕೊಳ್ಳುವುದಕ್ಕೆ ಇಷ್ಟು ವರ್ಷ ಆಯಿತಲ್ಲ ಏತಕ್ಕೆ ? ನಮಗೆ ಮೊದಲೇ ಗೊತ್ತಿತ್ತು. ಏತಕ್ಕೆ ಈಗ ಹೇಳಿಕೊಳ್ಳುತ್ತಿದ್ದೀರಿ.

ಶ್ರೀ ಆರ್. ಎನ್. ನಾಯಕ್ :– ನಾನು ಯಾವಾಗಲಾದರೂ ದೊಡ್ಡವನು ಎಂದು ಹೇಳಿದ್ದೇನೆಯೇ ? ನಾನು ದೊಡ್ಡವನು ಎಂದು ಹೇಳಿದ್ದರೆ ನನ್ನ ಯೋಗ್ಯತೆ ಗೊತ್ತಾಗುತ್ತದೆ. ನಾನು ಸಣ್ಣವನು ಎಂದೇ ತಿಳಿದು ಕೊಂಡಿದ್ದೇನೆ.

ಶ್ರೀ ಆರ್. ದಯಾನಂದರಾವ್ :– ನಾಯಕರೇ, ದೊಡ್ಡದೆಲ್ಲಾ ವಾಟಾಳ್ ನಾಗರಾಜ್‌ರವರಿಗೆ ಬಿಟ್ಟು ಬಿಟ್ಟಿದ್ದೇವೆ.

ಶ್ರೀ ವಾಟಾಳ್ ನಾಗರಾಜ್ :– ಅದು ಏನು ಹೇಳುತ್ತಿದ್ದಾರೆ ಗೊತ್ತಾಗಲಿಲ್ಲ.

ಉಪಾಧ್ಯಕ್ಷರು :– ಅವರು ಏನಾದರೂ ಹೇಳಿಕೊಳ್ಳಲಿ, ಈಗ ಚರ್ಚೆ ಮುಂದುವರಿಸೋಣ.

ಶ್ರೀ ಡಿ. ಬಿ. ಚಂದ್ರೇಗೌಡ :– ಡಿಲಿಮಿಟೇಷನಿಂದ ಆಗತಕ್ಕಂಥ ಇನ್ನೊಂದು ಮುಖ್ಯವಾದ ಅಂಶ ಏನು ? ಈಗ 22 ಪರಿವರ್ತಿತ ಮಂಡಲಗಳು ಇವೆ. ಹಿಂದೆ ಇವು ಪುರಸಭೆಗಳು ಆಗಿದ್ದವು. ಈಗ ಅವು ಪರಿ-ವರ್ತಿತ ಮಂಡಲಗಳಾಗಿವೆ. ಮುಂದೆ ಈ ತಿದ್ದುಪಡಿ ಪ್ರಕಾರ ಪುನಃ ಅವು ಪುರಸಭೆಗಳಾಗುತ್ತವೆ.

ಶ್ರೀ ಜಿ. ಎಸ್. ಶಿವನಂಜಪ್ಪ :– ನೀವು 71 ನೇ ಇಸವಿಯ ಸೆನ್ಸಸ್ ತೆಗೆದುಕೊಂಡಿದ್ದೀರಿ,. ಈಗ ನಾವು ತೆಗೆದುಕೊಳ್ಳುತ್ತಿರುವುದು 81 ನೇ ಇಸವಿಯ ಜನಸಂಖ್ಯೆ.

ಶ್ರೀ ಡಿ. ಬಿ. ಚಂದ್ರೇಗೌಡ :– ದೇಶದ ಒಟ್ಟಾರೆ ಡಿಲಿಮಿಟೇಶನ್‌ನ್ನು ಶ್ರೀಮಾನ್ ರಾಜೀವ್‌ಗಾಂಧೀ ಯವರ ಕಾಲದಲ್ಲಿಯೇ 2000 ಇಸವಿಯವರೆಗೂ ಹೊಸ ಕ್ಷೇತ್ರಗಳನ್ನು ಮಾಡಬಾರದು ಎಂದು ರಾಜ್ಯಾಂಗಕ್ಕೆ ತಿದ್ದುಪಡಿ ಮಾಡಿದ್ದಾರೆ. ಆದ್ದರಿಂದ ದಯಮಾಡಿ ತಾವು ಈ ವಿಚಾರವನ್ನು ಬಹಳ ಗಂಭೀರವಾಗಿ ಪರ್ಯಾ-ಲೋಚನೆ ಮಾಡೋಣ.

ಶ್ರೀ ಕರಿಯಣ್ಣ :– ತಿದ್ದುಪಡಿ ಮಾಡಿರುವುದು ಪಾರ್ಲಿಮೆಂಟ್ ಮತ್ತು ಅಸೆಂಬ್ಲಿ ಕ್ಷೇತ್ರಗಳಿಗೆ ಸಂಬಂಧ ಪಟ್ಟ ಹಾಗೆ ಹೊರತು ಸ್ಥಳೀಯ ಸಂಸ್ಥೆಗಳಿಗೆ ಸಂಬಂಧಪಟ್ಟಂತೆ ಅಲ್ಲ.

ಶ್ರೀ ಡಿ. ಬಿ. ಚಂದ್ರೇಗೌಡ :— ತಮಗೆ ಸಂಖ್ಯಾ ಬಲ ಇದೆ ಎಂದು ಏನಾದರೂ ಮಾಡಬಹುದು ಎಂದು ಮಾಡುವುದಾದರೆ ಮಾಡಿ. ಆದರೆ ಈ ದೇಶದ ಜನರ ಮಧ್ಯೆದಲ್ಲಿ ಈ ದೇಶದ ಜನರ ಹಿತವನ್ನು ಗಮನದಲ್ಲಿಟ್ಟುಕೊಂಡು ಅವರ ಮೇಲೆ ಬೀಳತಕ್ಕಂಥ ಅಧಿಕ ಆರ್ಥಿಕ ಹೊರೆಯನ್ನು ಗಮನಿಸಿ ನಾವು ಆಲೋಚನೆ ಮಾಡಬೇಕೆನ್ನುವುದಕ್ಕೆ ಮಾತ್ರ ನಾನು ಹೇಳಿದೆ ವಿನಹಃ ಬೇರೇನೂ ಅಲ್ಲ. ನಾವು ಈ ತಿದ್ದುಪಡಿ ಮಾಡಿದರೆ ಏನಾಗುತ್ತದೆ ? ಎಂದು ಹೇಳುವುದಕ್ಕೆ ನಾನು ಹೋಗುವುದಿಲ್ಲ. ಆದರೆ ಈಗಾಗಲೇ ಸುಮಾರು 72 ಪರಿವರ್ತಿತ ಮಂಡಲಗಳು ಇವೆ. ಈ ಪರಿವರ್ತಿತ ಮಂಡಲಗಳು ಜವಹರ್ ರೋಜ್‌ಗಾರ್ ಮತ್ತೊಂದು ಮೊಗದೊಂದು ಸಹಾಯ ತೆಗೆದುಕೊಂಡು ಗ್ರಾಮಪಂಚಾಯತಿಗಳಾಗಿ ಇಲ್ಲವೇ ಮಂಡಳಗಳಾಗಿ ಕೆಲಸ ಮಾಡುತ್ತಿವೆ. ಹಿಂದೆ ಪುರಸಭೆಗಳಾಗಿದ್ದವು. ಈಗ ಅವು ಪುನಃ ಈ ಜನಸಂಖ್ಯೆ ಆಧರಿಸಿ ಪುರಸಭೆಗಳು ಆಗುತ್ತವೆ. ಅಲ್ಲಿಗೆ 72 ಜನ ಚೀಫ್ ಆಫೀಸರುಗಳು ಹೋಗಬೇಕು. ಇದರಿಂದ ಸರ್ಕಾರದ ಖಜಾನೆಗೆ ಎಷ್ಟು ಹಣ ಖರ್ಚು ? ತಾವು ಒಂದು ಕೆಲಸ ಮಾಡತಕ್ಕಂಥದ್ದಕ್ಕೆ ಎಷ್ಟು ಚೈನ್ ಎಫೆಕ್ಟ್ ಆಗುತ್ತದೆ ? ನೀವು ಬರೆದಿರುವ ಪ್ರಕಾರ ಸರಿ ಸುಮಾರು 10–20 ಕೋಟಿ ರೂಪಾಯಿ ಡಿಲಿಮಿಟೇಶನ್ ಹೊರತುಪಡಿಸಿ ಖರ್ಚು ಎಂದು ಹೇಳಿದ್ದೀರಿ. ಇನ್ನು ಎರಡನೆಯದಾಗಿ ಡಿಲಿಮಿಟೇಶನ್‌ಗೆ ಆಗುವ ಆಡಳಿತಾತ್ಮಕ ವೆಚ್ಚ ಮತ್ತೆ ಡಿ ಲಿಮಿಟೇಶನ್ ಮಾಡಲು ಆಗುವ ಸಮಯ ಅನಂತರ ಚುನಾವಣೆ ಮಾಡತಕ್ಕಂಥಾ ಕಾಲ.

ಆಮೇಲೆ ಪರಿವರ್ತಿತ ಮಂಡಳಗಳು ಪುನಃ ಪುರಸಭೆಗಳಾಗಬೇಕು. ಇದರಿಂದ ಜನರ ಜೀವದ ಮೇಲೆ ಎಷ್ಟು ಹೊರೆ. ಅವರಿಗೆ ಅಕ್ವಾಯ್ ಪರಿಹಾರ ಕೊಡಬೇಕು. ಮತ್ತೆ ಚೀಫ್ ಆಫೀಸರ್ಸ್ ಕೊಡಿ; ಸಿಬ್ಬಂದಿ ಕೊಡಿ ಇವೆಲ್ಲಾ ಮಾಡಲು ಖರ್ಚು ಎಷ್ಟಾಗುತ್ತದೆ ? ಇದು ಒಂದು ಕಡೆ ಇದರಲ್ಲಿ ಬರುವ ನ್ಯಾಯ ಪಂಚಾಯತಿಗಳ ಒಂದು ಹಿಂದಿನ ಚರಿತ್ರೆಗೆ ನಾವು ಹೋದರೆ ನಮ್ಮ ಗ್ರಾಮಾಂತರ ಪ್ರದೇಶಗಳಲ್ಲಿ ಹಿಂದೆ ಪಂಚರು ಎಂದು ಇರುತ್ತಿದ್ದರು. ಅವರು ಹೋಗಿ ಅವು ಪಂಚಾಯತಿಗಳು ಆದವು. ಆ ಪಂಚರು ಕುಳಿತುಕೊಂಡು ಮಾಡತಕ್ಕಂಥ ತೀರ್ಮಾನಗಳಿಗೆ ಯಾವ ಅಪೀಲ್ ಸಹ ಇರಲಿಲ್ಲ. ಅವರ ನಿರ್ಣಯ ಜನಸಾಮಾನ್ಯರು ಒಪ್ಪಿಕೊಳ್ಳತಕ್ಕಂಥ ನಿರ್ಣಯಗಳಾಗಿರುತ್ತಿದ್ದವು. ಬ್ರಿಟೀಷ್ ಸಾಮ್ರಾಜ್ಯ ಶಾಹಿಗಳು ನಮ್ಮ ದೇಶಕ್ಕೆ ಬಂದ ಮೇಲೆ ಈ ಎಲ್ಲಾ ಅಧಿಕಾರ ನಮ್ಮ ಕೈಯಲ್ಲಿರಬೇಕು. ಈ ಪಂಚರು ಇದ್ದರೆ ಈ ರಾಜ್ಯವನ್ನು ಈ ರಾಷ್ಟ್ರವನ್ನು ನಾವು ಆಳುವುದಕ್ಕೆ ಸಾಧ್ಯವಾಗುವುದಿಲ್ಲವೆಂದು ಹೇಳಿ ಈ ವ್ಯವಸ್ಥೆಯನ್ನು ಕಡಿಯಬೇಕೆಂದು ತೀರ್ಮಾನ ಮಾಡಿ, ಆಗ ನ್ಯಾಯ ಪಂಚಾಯತಿಗಳಲ್ಲಿ ಸಣ್ಣ ಪುಟ್ಟ ವ್ಯವಹಾರಗಳನ್ನು ಯಾವ ರೀತಿ ಪಂಚರು ತೀರ್ಮಾನ ಮಾಡುತ್ತಿದ್ದರೋ, ಅದನ್ನು ತಪ್ಪಿಸಿ ಮ್ಯಾಜಿಸ್ಟ್ರೇಟ್ ಬ್ರಿಟಿಷರು ಕೋರ್ಟಿಗೆ ಅಧಿಕಾರ ಕೊಟ್ಟರು ಈ ಕಾರಣದಿಂದ ಇವತ್ತು ನಾವು ಸುಪ್ರೀಂ ಕೋರ್ಟ್‌ನಲ್ಲಿ ಎಷ್ಟು ಕೇಸುಗಳು ಇವೆ ? ಹೈಕೋರ್ಟ್‌ನಲ್ಲಿ ಎಷ್ಟು ಕೇಸುಗಳುಇವೆ. ಅವುಗಳ ಸಂಖ್ಯೆ ಎಷ್ಟು ? ಪೆಂಡಿಂಗ್ ಕೇಸುಗಳು ಎಷ್ಟು ಇವೆ. ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಕೇಸ್‌ಗಳ ಪೆಂಡೆನ್ಸಿ ಎಷ್ಟು ಇವೆ. ಡಿಸ್ಟ್ರಿಕ್ಟ್ ಕೋರ್ಟಿನಲ್ಲಿ ಕೇಸ್‌ಗಳ ಪೆಂಡೆನ್ಸಿ ಎಷ್ಟು ಇದೆ ಆದರೆ ಹಿಂದೆ ಬಹುತೇಕವಾಗಿ ಸಣ್ಣ ಪುಟ್ಟ ಸಮಸ್ಯೆಗಳು ಬಂದಾಗ ಗ್ರಾಮೀಣ ಜನರು ಇದನ್ನು ಪರಿಹಾರ ಮಾಡುವಂತಹ ವ್ಯವಸ್ಥೆ ಇತ್ತು. ಆದರೆ ಬ್ರಿಟೀಷರ ಸಾಮ್ರಾಜ್ಯ ತಮ್ಮ ಕೈಗೆ ಅಧಿಕಾರ ತೆಗೆದುಕೊಳ್ಳುವುದಕ್ಕೆ ಈ ವ್ಯವಸ್ಥೆ ಮಾಡಿದರು. ಈಗ ಅದನ್ನು ತಪ್ಪಿಸಿ ಈ ಒಂದು ನ್ಯಾಯ ಪಂಚಾಯತಿ ರಚನೆ ಮಾಡಿ ಅದಕ್ಕೆ ಒಂದು ಸೀಮಿತವಾದ ಮಿತಿ ಇಟ್ಟು, ಅಲ್ಲಿ ಒಂದು ಪಂಚರನ್ನು ಸೇರಿಸಿ ಒಂದು ನ್ಯಾಯ ಪಂಚಾಯತಿ ಮಾಡಬೇಕೆಂದು ಆಲೋಚನೆ ನಮ್ಮ ಹಿಂದಿನ ಸರ್ಕಾರದಲ್ಲಿ ಏನಿತ್ತು, ಅದನ್ನು ಈಗಾಗಲೇ ಮಾಡುವುದು ಬೇಡ. 5 ವರ್ಷಗಳ ಅನುಭವದ ಮೇಲೆ ಇದು ಹೇಗೆ ನಡೆಯುತ್ತದೆ ಎನ್ನುವುದನ್ನು ನೋಡಬೇಕು; 5 ವರ್ಷಗಳಾದ ಮೇಲೆ ಇದನ್ನು ಜಾರಿಗೆ ಕೊಡಬೇಕೆಂದು ಈ ಸದನದಲ್ಲಿ ಆದ ಒಟ್ಟಾರೆ ತೀರ್ಮಾನ. ಈ ಸದನದ ಒಟ್ಟಾರೆ ತೀರ್ಮಾನ ಈಗ 5 ವರ್ಷಕ್ಕಿಂತ ಮುಂಚೆ ಈ ಶಾಸನ ಸಭೆಗೆ ಕೊಟ್ಟಂತಹ ವಾಗ್ದಾನ ಏಕಪಕ್ಷೀಯವಾದುದು ಅಲ್ಲ. ಎಲ್ಲಾ ಪಕ್ಷಗಳ ಮತ್ತು ಎಲ್ಲರ ಇಚ್ಛೆ. ಶಾಸನಸಭೆ ಒಪ್ಪಿ ಮಾಡಿದಂತಹ ತೀರ್ಮಾನವನ್ನು 4 ವರ್ಷಗಳಲ್ಲಿಯೇ ತಿದ್ದುಪಡಿ ಮಾಡತಕ್ಕಂಥಾದ್ದು ಮತ್ತೊಂದು ಶಾಸನ ಸಭೆ. ಇದು ಮುಂದೆ ಬರುವ ಶಾಸನಸಭೆ ಇದನ್ನು ಮತ್ತೆ ಕಿತ್ತುಕೊಳ್ಳುವುದು This is exactly what I said in the begining that is a bad law ಈ ಒಂದು ನಾವು ಏನು ನಿರ್ಣಯಗಳನ್ನು ಮಾಡುತ್ತೇವೆ ಇದಕ್ಕೆ 5 ವರ್ಷ ತುಂಬಲಿ. 5 ವರ್ಷ ತುಂಬಿದಮೇಲೆ ಏನು ಮಾಡಬೇಕು, ಏನು ಬಿಡಬೇಕು ಎಂಬುದನ್ನು ಯೋಚನೆ ಮಾಡೋಣ. ಈಗ ಮಾನ್ಯ ಘೋರ್ಪಡೆಯವರು ಸದನಕ್ಕೆ ಬಂದಿದ್ದಾರೆ. ಅವರು ಒಂದು ಸಾರಿ ಅಥವಾ ಎರಡು ಸಾರಿ ನಮ್ಮನ್ನು ಕರೆದು ಇದರ ಬಗ್ಗೆ ಆಗ ಚರ್ಚೆ ಮಾಡಿದ್ದರು. ಮೂಲಭೂತವಾದ ಮುಖ್ಯ ಅಂಶಗಳನ್ನು ನಮ್ಮ ಜೊತೆಗೆ ಅವರು ಚರ್ಚೆ ಮಾಡಿದ್ದರು. ಅವರು ಶಾಸನ ಸಭೆಯ ಒಳಗೂ ಮಾತು ಕೊಟ್ಟಿದ್ದರು ಹೊರಗಡೆಯೂ ಮಾತು ಕೊಟ್ಟಿದ್ದರು. ಅದರಂತೆ ಅವರು ನಮ್ಮೊಡನೆ ಚರ್ಚೆ ಮಾಡಿದರು ಮಾತು ಕೊಟ್ಟವರು ಇಲ್ಲಿದ್ದಾರೆ ಆದರೆ ಅವರ ಮಂತ್ರಿತನ ಅವರಿಗೆ ಉಳಿಯಲಿಲ್ಲ. ಆದರೆ ಈಗ ನಾವು ಯಾರ ಜೊತೆ ಚರ್ಚೆ ಮಾಡುವುದು ? ಬಹಿರಂಗವಾಗಿ ಆಲ್ ಇಂಡಿಯಾ ಸೆಮಿನಾರ್, ಬೆಂಗಳೂರಿನಲ್ಲಿ ನಡೆಯಿತು. ತಾವೂ ಅಲ್ಲಿಗೆ ಹೋಗಿದ್ದಿರಿ. ನಾನೂ ಬರಬೇಕಾಗಿತ್ತು, ಕಾರಣಾಂತರ

ದ್ದಿಂದ ನಾನು ಬರಲಾಗಲಿಲ್ಲ. ಅಲ್ಲಿ ಮೂಲಭೂತವಾದ ವಿಚಾರಗಳನ್ನು ಅಂದು ಪ್ರಸ್ತಾಪ ಮಾಡಿದರು. ಆ ಪ್ರಸ್ತಾಪಗಳು ಪ್ರಸ್ತಾಪವಾಗಿಯೇ ಉಳಿದವು. ಘೋರ್ಪಡೆಯವರು ನಮ್ಮೊಡನೆ ಇದರ ಬಗ್ಗೆ ಚರ್ಚೆ ಮಾಡಿದ್ದಾಗ ಕೆಲವು ಸಮಸ್ಯೆಗಳನ್ನು ಚರ್ಚೆ ಮಾಡಿ ಒಟ್ಟಾರೆ ಅಭಿಪ್ರಾಯದಿಂದ ಕೆಲವು ಬದಲಾವಣೆ ಮಾಡುವುದಕ್ಕೆ ಒಪ್ಪಿಕೊಂಡಿದ್ದೆವು. ಈ ಅಭಿಪ್ರಾಯ ಕಿತ್ತು ಹೋಯಿತು. ಇನ್ನು ಕೊನೆಗೆ ಪುನಃ ರಾಜ್ಯಾಂಗದ 40ನೇ ವಿಧಿಯನ್ನು ಡೆವೆಲ್ಯೂಷನ್ ಆಫ್ ಪವರ್ ಎಂದು ಪ್ರಸ್ತಾಪ ಮಾಡಿದ್ದಾರೆ. ಡೆವೆಲ್ಯೂಷನ್ ಆಫ್ ಪವರ್, ಯಾರು ಸರಿ ಯಾರು ತಪ್ಪು ಎನ್ನುವುದನ್ನು ಎರಡು ಜನ ಮಂತ್ರಿಗಳಲ್ಲಿ ಆದ ಸಂವಾದವನ್ನು ಇಲ್ಲಿ ಪ್ರಸ್ತಾಪ ಮಾಡುವುದಿಲ್ಲ. ಈಗ ಅದು ಪ್ರಸ್ತುತ ಅಲ್ಲ. ಆದರೆ ಅಭಿಪ್ರಾಯ ಬಹಳ ಪ್ರಮುಖವಾಗಿ ಒಂದು......

ಶ್ರೀ ಬಿ. ಬಸವಲಿಂಗಪ್ಪ :— ವ್ಯತ್ಯಾಸ ಇಷ್ಟೇ, ಶ್ರೀಮಾನ್ ಘೋರ್ಪಡೆಯವರು ತಮ್ಮ ಸ್ವಂತ ಅಭಿಪ್ರಾಯವನ್ನು ಹೇಳಿದರು. ನಾನು ನನ್ನ ಪಕ್ಷದ ಅಭಿಪ್ರಾಯ ಹೇಳಿದ್ದೇನೆ. ಅಷ್ಟೇ.

ಶ್ರೀ ವಾಟಾಳ್ ನಾಗರಾಜ್ :— ಸತ್ಯ ಹೇಳಬೇಕು. ಸತ್ಯ ಹೇಳಿ; ಹೃದಯ ಬಿಚ್ಚಿ ಬರಲಿ ಸತ್ಯ. ಇದು ನಿಮ್ಮದೋ ನಿಮ್ಮ ಪಕ್ಷದ್ದೋ ವೈಯಕ್ತಿಕವಾದದ್ದೋ ಎಂಬ ಸತ್ಯ ಹೊರಗೆ ಬರಲಿ.

ಶ್ರೀ ಡಿ. ಬಿ. ಚಂದ್ರೇಗೌಡ :— ಡೆವೆಲ್ಯೂಷನ್ ಆಫ್ ಪವರ್; ನನಗೆ ಅನಿಸಿದ್ದು; ಇದು ನಿಮ್ಮ ಪಕ್ಷದ ಚಿಂತನೆ. ಈ ಪವರ್ ಇಲ್ಲ ಅನ್ನುವುದು.

ಶ್ರೀ ಬಿ. ಬಸವಲಿಂಗಪ್ಪ :— ಮಾನ್ಯ ಅಧ್ಯಕ್ಷರೇ, ನಾನು ಪ್ರಾಸ್ತಾವಿಕವಾಗಿ ಭಾಷಣ ಮಾಡುತ್ತಿರುವಾಗ ನಾನು ಹೇಳಿದ್ದೇನೆ. ಈ ಡೆವೆಲ್ಯೂಷನ್ ಆಫ್ ಪವರ್ ಇದರ ಬಗ್ಗೆ ಸಾಕಷ್ಟು ಸಲ ಹೇಳಿದ್ದೇನೆ. ಅದರ ಬಗ್ಗೆ ಸಾರ್ವಭೌಮತ್ವ ಪಡೆದಿರತಕ್ಕಂಥ ಪಾರ್ಲಿಮೆಂಟ್ ಮತ್ತು ಲೆಜಿಸ್ಲೇಚರ್ ಏನಿದೆ, ಇದಕ್ಕೆ ಹೊರತಾಗಿ ರಾಜ್ಯಾಂಗವನ್ನು ತಿದ್ದುಪಡಿ ಮಾಡದ ಹೊರತು ಡೆವೆಲ್ಯೂಷನ್ ಆಫ್ ಪವರ್ ಮಾಡುವುದಕ್ಕಾಗುವುದಿಲ್ಲವೆಂದು ನಾನು ಸ್ಪಷ್ಟವಾಗಿ ಹೇಳಿದ್ದೇನೆ. ಅದಕ್ಕೋಸ್ಕರ ಕೇಂದ್ರದಲ್ಲಿ ನಮ್ಮ ಸರ್ಕಾರ ಬಂದರೆ ಪುನಃ ಈ ಬಿಲ್ ಅನ್ನು ತರುತ್ತೇವೆ.

ಶ್ರೀ ಬಿ. ಎಸ್. ಯಡಿಯೂರಪ್ಪ :— ನಿಮ್ಮ ಸರ್ಕಾರ ಕೇಂದ್ರದಲ್ಲಿ ಮತ್ತೆ ಬರುತ್ತದೆಯೇ ? ಏನು ಸ್ವಾಮಿ ನೀವು ಹೇಳುವುದು ?

ಶ್ರೀ ಬಿ. ಬಸವಲಿಂಗಪ್ಪ :— ಮತ್ತೆ ಬರುತ್ತದೆ. ನೀವು ಚಿಂತೆ ಮಾಡಬೇಕಾಗಿಲ್ಲ.

ಶ್ರೀ ಬಿ. ಎಸ್. ಯಡಿಯೂರಪ್ಪ :— ಈಗಾಗಲೇ ತೀರ್ಮಾನವಾಗಿದೆ. ಕೇಂದ್ರದಲ್ಲಿ ಪುನಃ ನಿಮ್ಮ ಸರ್ಕಾರ ಬರುವುದಿಲ್ಲ. ಬಿ.ಜೆ.ಪಿ. ಸರ್ಕಾರ ಬರುತ್ತದೆಂದು ನಮಗೆ ಗೊತ್ತು. ಅದಕ್ಕಾಗಿ ಚುನಾವಣೆಯನ್ನು ಮಾಡಲಿಲ್ಲ. ಈಗ ನೀವು ಹೊಸ ಕನಸನ್ನು ಕಾಣುತ್ತಿದ್ದೀರಿ.

ಶ್ರೀ ಬಿ. ಬಸವಲಿಂಗಪ್ಪ :— ಶ್ರೀಮಾನ್ ಯಡಿಯೂರಪ್ಪನವರು ಶಿವಮೊಗ್ಗ ಜಿಲ್ಲೆಯಲ್ಲಿ ಹುಟ್ಟಿದ್ದು.

ಶ್ರೀ ಬಿ. ಎಸ್. ಯಡಿಯೂರಪ್ಪ :— ನಾನು ಹುಟ್ಟಿದ್ದು ಮಂಡ್ಯ ಜಿಲ್ಲೆಯಲ್ಲಿ.

ಶ್ರೀ ಬಿ. ಬಸವಲಿಂಗಪ್ಪ :— ಆಯಿತು; ಮೊನ್ನೆ ದಿವಸ ರಾಮ ರಾಮ ಎನ್ನುವ ಬಟ್ಟೆಯನ್ನು ಹೊದ್ದುಕೊಂಡು ಇಲ್ಲಿ ಬಂದಿದ್ದರು. ನಾನು ಹೇಳುತ್ತೇನೆ ಅವರ ರಾಮನಿಗೂ ನಿಮ್ಮ ಮಂಡ್ಯ ಜಿಲ್ಲೆಗೂ ಏನು ಸಂಬಂಧ ನೀವು ಎಂದೆಂದೂ ಈ ದೇಶದಲ್ಲಿ ಅಧಿಕಾರಕ್ಕೆ ಬರುವ ಪ್ರಶ್ನೆಯೇ ಬರುವುದಿಲ್ಲ. ಬಿ.ಜೆ.ಪಿ. ಪಕ್ಷ ಏನಿದೆ, ಅದನ್ನು ಹಿಂದೆ ನಾವು ರಾಜಕೀಯ ಪಕ್ಷದಿಂದ ಹೊರತು ಮಾಡಿದ್ದೆವು. ಅದಕ್ಕೆ ಅಧಿಕಾರವೇ ಇರಬಾರದು ಎಂದು ಮಾಡಿದ್ದೆವು. ಶ್ರೀಮತಿ ಇಂದಿರಾ ಗಾಂಧಿಯವರ ಕೃಪಾಕಟಾಕ್ಷದಿಂದ ಪುನಃ ಪೊಲಿಟಿಕಲ್ ರೈಟ್ಸ್ ಕೊಟ್ಟಿದ್ದೇವೆ. ಕೊಟ್ಟರೆ ಅದೇನೇನೋ ಜನರ ಮನಸ್ಸನ್ನು ಕೆಡಿಸುವುದು, ತಿರುಗಿಸುವುದು, ಬುಗರಿ ಆಟ ಆಡಿಸುವುದು. ಏನು ಕೆಲಸ ನಿಮ್ಮದು ? ಹಳ್ಳಿ ಹಳ್ಳಿಯಲ್ಲಿ ಬುಗರಿ ಆಟ ಆಡಿಸುವುದು.

4–50 ಪಿ. ಎಂ.

ಶ್ರೀ ವಾಟಾಳ್ ನಾಗರಾಜ್ :— ಜಿಲ್ಲಾ ಪರಿಷತ್ತಿಗೂ ರಾಮನಿಗೂ ಬಿ.ಜೆ.ಪಿ.ಗೂ ಎತ್ತಣದಿಂದ ಎತ್ತ ಸಂಬಂಧ ? ಬೆಟ್ಟದ ನೆಲ್ಲೀಕಾಯಿಗೂ ಸಮುದ್ರದ ಉಪ್ಪಿಗೂ ಎತ್ತಣದಿಂದ ಎತ್ತ ಸಂಬಂಧ ? ಬಿ. ಜೆ. ಪಿ. ಯವರಿಗೂ ಬಸವಲಿಂಗಪ್ಪನವರ ಮಾತಿಗೂ ಏನು ಸಂಬಂಧ ?

ಶ್ರೀ ಬಿ. ಎಸ್. ಯಡಿಯೂರಪ್ಪ :— ತಮಗೆ ಗೊತ್ತಿರುವಹಾಗೆ ಮೂರು ರಾಜ್ಯದಲ್ಲಿ ನಮ್ಮ ಸರ್ಕಾರ ಇದೆ. ಚುನಾವಣೆ ಮಾಡಿದರೆ ಎಲ್ಲಿ ಬಿ. ಜೆ. ಪಿ. ಯವರು ಅಧಿಕಾರಕ್ಕೆ ಬರುತ್ತಾರೋ ಎಂದು ಚುನಾವಣೆ

ಮಾಡುವುದಕ್ಕೇ ಹಿಂದೆಮುಂದೆ ನೋಡಿ ಯಾರಿಗೋ ಬೆಂಬಲ ಕೊಟ್ಟುಕೊಂಡು ಅತ್ತಲಾಗೂ ಇಲ್ಲ ಇತ್ತಲಾಗೂ ಇಲ್ಲ, ಎಂಬ ವಿಚಿತ್ರವಾದ ಸ್ಥಿತಿಯಲ್ಲಿದ್ದೀರಿ. ಈಗ ನೀವು ತಿದ್ದುಪಡಿ ತಂದು ಇಲ್ಲಿರುವ ರಾಜ್ಯವೂ ಎಲ್ಲಿ ಕೈಬಿಟ್ಟು ಹೋಗುತ್ತದೋ ನನಗೆ ಅದು ಚಿಂತೆಯಾಗುತ್ತಿದೆ. ಸುಮ್ಮನೆ ವಾಪಸ್ ತೆಗೆದುಕೊಂಡು ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯತಿ ವ್ಯವಸ್ಥೆ ಮೊದಲು ಏನಿತ್ತು ಅದೇ ಸರಿ ಎಂದು ಹೇಳಿ. ಆಗ ಜನ ಒಪ್ಪುತ್ತಾರೆ.

ಶ್ರೀ ಕೆ. ಎಸ್. ಈಶ್ವರಪ್ಪ :– ನಾವು ಶ್ರೀಮತಿ ಇಂದಿರಾ ಗಾಂಧಿಯವರ ಕೃಪಾಕಟಾಕ್ಷದಿಂದ ಬಂದಿದ್ದಲ್ಲ. ಜನತೆಯ ಅಪೇಕ್ಷೆಯಿಂದ ಬಂದಿದ್ದು ನಾವು. ಜನರ ಮನಸ್ಸಿನ ಭಾವನೆಯಿಂದ ಬಂದಿದ್ದು ನಾವು. ಇಂದಿರಾ ಗಾಂಧಿಯವರ ಕೃಪಾಕಟಾಕ್ಷದಿಂದ ಅವರ ಹೆಸರು ಹೇಳಿಕೊಂಡು ಅಧಿಕಾರಕ್ಕೆ ಬಂದಿದ್ದು ನೀವು.

(ಗೊಂದಲ)

ಶ್ರೀ ಡಿ. ಬಿ. ಚಂದ್ರೇಗೌಡ :– ಶಾಸನಸಭೆಯಲ್ಲಿ ಮಂತ್ರಿಗಳು ಸ್ವಂತ ಅಭಿಪ್ರಾಯವನ್ನು ವ್ಯಕ್ತ ಮಾಡುವುದಕ್ಕೆ ಎಷ್ಟರಮಟ್ಟಿಗೆ ಅವಕಾಶ ಇದೆಯೋ ಅದು ಬೇರೆ. ಅದು ಮಂತ್ರಿಮಂಡಲದಲ್ಲಿ ಇರುವವರೆಗೆ. ನಾನು ತಿಳಿದುಕೊಂಡಿದ್ದೇನೆ, ಶ್ರೀಮಾನ್ ಘೋರ್ಪಡೆಯವರು ಆ ಕಾಲಕ್ಕೆ ಈ ಇಲಾಖೆಯ ಮಂತ್ರಿಗಳಾಗಿ ಅವರು ಹೇಳಿದ್ದ ಅಭಿಪ್ರಾಯ ಸರಿ. ಆ ಕಾಲಕ್ಕೆ ಬಸವಲಿಂಗಪ್ಪನವರು ಇಲಾಖೆಯ ಮಂತ್ರಿಗಳಾಗಿರಲಿಲ್ಲ. ಆದ್ದರಿಂದ ಅವರು ಹೇಳಿದ್ದನ್ನು ಸರಿ ಎಂದು ಹೇಗೆ ಹೇಳುವುದು ? ಇಲಾಖೆಯ ಮಂತ್ರಿಗಳಾಗಿ ಆ ಕಾಲಕ್ಕೆ ಏನು ಹೇಳುತ್ತಾರೋ ಅದನ್ನು ಸರಿ ಎಂದು ಒಪ್ಪಿಕೊಳ್ಳುತ್ತೇವೆ. ಈಗ ಮತ್ತೆ ಅವರೇ ಬಂದಿದ್ದಾರೆ ಇಲಾಖೆಗೆ. ಮತ್ತೆ ಸರಿಯಿಲ್ಲ ಎಂದು ಹೇಳುತ್ತಾರೆ. ಅದಕ್ಕೇ ನಾನು ಸಾರ್ವಜನಿಕ ಸಭೆಯಲ್ಲಿ ಒಂದು ಮಾತು ಹೇಳಿದ್ದೆ. ಬುದ್ಧ, ಬಸವನಿಗಿಂತ ಬುದ್ಧಿವಂತರು ಬಸವಲಿಂಗಪ್ಪನವರು ಎಂದು. ರಾಜ್ಯಾಂಗದ ಶಿಲ್ಪಿ ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರಿಗಿಂತ ಬುದ್ಧಿವಂತರು ಇವರು. ನಾನು ಇಲ್ಲ ಎಂದು ಹೇಳುವುದಿಲ್ಲ. ಆದರೆ ಆ ಬುದ್ಧಿವಂತಿಕೆ ನಮ್ಮೆಲ್ಲರ ಬುದ್ಧಿವಂತಿಕೆ ಗಿಂತ ದೊಡ್ಡದು ಎಂದು ಹೇಳಬಾರದು. ನಮ್ಮೆಲ್ಲರ ಮೇಲೆ ಬುದ್ಧಿವಂತಿಕೆ ಯಾವಾಗ ಪ್ರದರ್ಶನ ಆಯಿತು ?

Sri B. Basavalingappa : I never claimed perversion as my friend Mr. Jalappa.

ಶ್ರೀ ಆರ್. ಎಲ್. ಜಾಲಪ್ಪ :– ಒಬ್ಬ ಮಂತ್ರಿಗಳಿಗೆ ಸೌಜನ್ಯ ಇರಬೇಕು; ಸನ್ಮಾನ್ಯ ಘೋರ್ಪಡೆಯವರು ಬಹಳ ವರ್ಷಗಳ ಕಾಲ ಇಲ್ಲಿ ಕೆಲಸ ಮಾಡಿದ್ದಾರೆ. ಪಾರ್ಲಿಮೆಂಟಿನಲ್ಲಿ ಕೆಲಸ ಮಾಡಿದ್ದಾರೆ, ಮಂತ್ರಿಗಳಾಗಿ ಕೆಲಸ ಮಾಡಿದ್ದಾರೆ. ಅವರು ಕೊಟ್ಟ ಅಭಿಪ್ರಾಯ ಮಾತ್ರ ಸ್ವಂತದ್ದಂತೆ; ಇವರು ಕೊಟ್ಟ ಅಭಿಪ್ರಾಯ ಮಾತ್ರ ಎಲ್ಲರದಂತೆ. ಇದು ಪರ್ವರ್ಷನ್ ಅಲ್ಲವೇ ?

ಶ್ರೀ ವಾಟಾಳ್ ನಾಗರಾಜ್ :– ಈ ಸಭೆಯಲ್ಲಿ ಅವರನ್ನು ಅಗೌರವ ಮಾಡತಕ್ಕದ್ದು ಸರಿಯಲ್ಲ. ಒಂದೇ ಪಕ್ಷದವರಾಗಿದ್ದು ಅವರನ್ನು ಕೆಳಕ್ಕೆ ತಳ್ಳತಕ್ಕದ್ದು ಯಾವ ನ್ಯಾಯ. ?

Sri R. L. Jalappa : It is uncharitable.

ಶ್ರೀ ಕರಿಯಣ್ಣ :– ಘೋರ್ಪಡೆಯವರ ಬಗ್ಗೆ ಎಷ್ಟು ಮಾತನಾಡಿದರೂ ಅವರ ಪಾರ್ಟಿಗೆ ಹೋಗುವುದಿಲ್ಲ. ಅವರನ್ನು ಹೊಗಳುವುದರಿಂದ ಜನತಾದಳಕ್ಕೆ ಅವರು ಹೋಗುವುದಿಲ್ಲ. ಅವರು ಕಾಂಗ್ರೆಸ್‌ನಲ್ಲೇ ಇರುತ್ತಾರೆ.

ಶ್ರೀ ಬಿ. ಬಸವಲಿಂಗಪ್ಪ :– ರಾಮಕೃಷ್ಣ ಹೆಗಡೆಯವರು ಈ ಸದನದಲ್ಲಿ ಅಲ್ಲಿ ನಿಂತುಕೊಂಡು ಘೋರ್ಪಡೆಯವರು ಎಲ್ಲಿದ್ದಾರೆ, ಅವರು ರೂರಲ್ ಡೆವಲಪ್ಮೆಂಟ್ ಮಿನಿಸ್ಟರ್ ಅಲ್ವಾ ಎಂದು ಭಾಷಣ ಮಾಡಿದರು. ನಾನು ಇಲ್ಲಿ ಬಸವಲಿಂಗಪ್ಪನಾಗಿ ನಿಂತುಕೊಂಡಿಲ್ಲ. ಮಂತ್ರಿಯಾಗಿದ್ದೇನೆ. ಪಾರ್ಟಿ ಕಾರ್ಯಕರ್ತನಾಗಿದ್ದೇನೆ.

ಶ್ರೀ ಆರ್. ಎಲ್. ಜಾಲಪ್ಪ :– ಅವರೇನಾಗಿದ್ದರು ? ಅವರು ಪಾರ್ಟಿ ಕಾರ್ಯಕರ್ತರಲ್ಲವೇ? ಇದು ಪರ್ವರ್ಷನ್ ಅಲ್ಲವೇ ?

ಶ್ರೀ ಬಿ. ಬಸವಲಿಂಗಪ್ಪ :– ಪರ್ವರ್ಷನ್ ಅಲ್ಲ. ಅದು ವ್ಯತ್ಯಾಸ.

(ಶ್ರೀ ಆರ್. ಎಲ್. ಜಾಲಪ್ಪ ಅವರು ಮಾತನಾಡಲು ಎದ್ದರು.)

ಶ್ರೀ ಬಿ. ಬಸವಲಿಂಗಪ್ಪ :– ಕೇಳಿ. ಆಗಿಂದಾಗ್ಗೆ ಎದ್ದು ನಿಂತರೆ, ಅದಕ್ಕೆ ಪರ್‌ವರ್ಷನ್ ಎನ್ನುತ್ತಾರೆ. ಆದ್ದರಿಂದ ನಿಧಾನವಾಗಿರಿ.

ಶ್ರೀ ಆರ್. ಎಲ್. ಜಾಲಪ್ಪ :– ನನಗೆ ಒಂದು ಕಥೆ ಜ್ಞಾಪಕಕ್ಕೆ ಬರುತ್ತದೆ.

ಶ್ರೀ ಬಿ. ಬಸವಲಿಂಗಪ್ಪ :– ಮಾನ್ಯ ಜಾಲಪ್ಪನವರು, ಮಾನ್ಯ ಚಂದ್ರೇಗೌಡರು ಮತ್ತು ನಾನು ಮೂವರೂ ಏನು ಎಂದು ಸಾಯಂಕಾಲ ಕೇಳಿ, ಹೇಳುತ್ತಾರೆ.

ಶ್ರೀ ವಾಟಾಳ್ ನಾಗರಾಜ್ :– ಇದರ ಗುಟ್ಟು ತೀರ್ಮಾನವಾಗಿದೆಯೋ ?

ಉಪಾಧ್ಯಕ್ಷರು :– ನಿಮ್ಮ ಹೆಸರೂ ಸೇರಿಸಬೇಕೇ ?

ಶ್ರೀ ವಾಟಾಳ್ ನಾಗರಾಜ್ :– ನಾನು ಅವರ ಜೊತೆ ಸೇರುವುದಿಲ್ಲ. ಆದರೆ ಇದರಲ್ಲಿ ಏನೋ ನಡೆದಿದೆ. ಮಾನ್ಯ ವಿರೋಧ ಪಕ್ಷದ ನಾಯಕರು ಇದನ್ನು ಮುಚ್ಚಿಡಬಾರದು; ಅದನ್ನು ಇಲ್ಲಿ ಹೇಳಲೇ ಬೇಕು. ಇಲ್ಲದಿದ್ದರೆ ಕಷ್ಟವಾಗುತ್ತದೆ.

ಶ್ರೀ ಬಿ. ಬಸವಲಿಂಗಪ್ಪ :– ನಾವು, ಅವರು ಜೀವನದುದ್ದಕ್ಕೂ ಸ್ನೇಹಿತರಾಗಿ ಇದ್ದವರು, ಅದನ್ನು ನಾನು ಹೇಳುತ್ತಾ ಇದ್ದೇನೆ......

ಶ್ರೀ ವಾಟಾಳ್ ನಾಗರಾಜ್ :– ಹಾಗಾದರೆ ನಾವೇನು ಶತ್ರುಗಳೇ ?

ಶ್ರೀ ಬಿ. ಎಸ್. ಯಡಿಯೂರಪ್ಪ :– ಸಂಜೆ ಇವರುಗಳು ಒಟ್ಟಿಗೆ ಸೇರುತ್ತಾರೆ ಎಂದು ಕಾಣುತ್ತದೆ.

ಶ್ರೀ ವಾಟಾಳ್ ನಾಗರಾಜ್ :– ಸಂಜೆಯ ವಿಚಾರವಂತೂ ನನಗೆ ಗೊತ್ತಿಲ್ಲ......

ಶ್ರೀ ಡಿ. ಬಿ. ಚಂದ್ರೇಗೌಡ :– ನನಗೆ ಅವರ ಜೊತೆ ಹಗಲಿನ ಸಂಬಂಧವೂ ಇಲ್ಲ, ರಾತ್ರಿಯ ಸಂಬಂಧವೂ ಇಲ್ಲ......

ಶ್ರೀ ವಾಟಾಳ್ ನಾಗರಾಜ್ :– ಅಧ್ಯಕ್ಷರೇ, ಇದಕ್ಕೆ ಒಂದು ತನಿಖೆ ಆಗಲೇ ಬೇಕು. ಏಕೆಂದರೆ ಇದು ಒಂದು ಗೌರವವಾದಂಥ ಸರಕಾರದ ಮಂತ್ರಿಗಳು ಹೇಳಿದ ಮಾತು. ಮಂತ್ರಿಗಳು ಬಹಳ ಜವಾಬ್ದಾರಿ ಸ್ಥಾನದಲ್ಲಿರತಕ್ಕಂಥವರು. ದಯಮಾಡಿ ತಾವು ಹೇಳಬೇಕು; ಇಲ್ಲವಾದಲ್ಲಿ ನಾನು ಹಕ್ಕುಚ್ಯುತಿ ತರಬೇಕಾಗುತ್ತದೆ. ನೀವು ಇಲ್ಲ ಎಂದು ಹೇಳುತ್ತಾ ಇದ್ದೀರಿ, ಅವರು ಉಂಟು ಎಂದು ಹೇಳುತ್ತಾ ಇದ್ದಾರೆ, ಇದು ತನಿಖೆ ಆಗಲೇ ಬೇಕು.

ಶ್ರೀ ಡಿ. ಬಿ. ಚಂದ್ರೇಗೌಡ :– ನನ್ನ ಮತ್ತು ಅವರ ಸಂಬಂಧ ಎಷ್ಟು ಸನಿಹ ಅಂದರೆ ಬಸವಲಿಂಗಪ್ಪನವರ ಮತ್ತು ಘೋರ್ಪಡೆಯವರ ಅಭಿಪ್ರಾಯದಲ್ಲಿ ಎಷ್ಟು ವಿಭಿನ್ನತೆ ಇದೆಯೋ ಅಷ್ಟು ಹತ್ತಿರದ ಸಂಬಂಧ ಇನ್ನು ವೈಯಕ್ತಿಕವಾಗಿ. ಬೇರೆ ಇನ್ನು ಈ ಸಂಸತ್ತು ತನ್ನ ಇನ್‌ಹೆರೆಂಟ್ ಪವರ್ಸ್‌ನಿಂದ, ಲೆಜಿಸ್ಲೇಟಿವ್ ಅಧಿಕಾರವನ್ನು ಏನು ಶಾಸನ ಸಭೆಗೆ ಕೊಡಬಹುದು, ಶಾಸನ ಸಭೆ ತನಗಿರತಕ್ಕಂಥ ಅಧಿಕಾರವನ್ನು ಜಿಲ್ಲಾ ಪರಿಷತ್ತಿಗೆ ಕೊಡಬಹುದು, ಈ ಅಧಿಕಾರದ ಚರ್ಚೆ ಅಥವಾ ಶಾಸನಸಭೆ ಮತ್ತು ಸಂಸತ್ತಿಗೆ ಇರತಕ್ಕಂಥ ಅಧಿಕಾರದ ಚರ್ಚೆ ವಿಚಾರ ಅಲ್ಲಿಗೆ ಮುಗಿಯಿತು ಎಂದು ಅರ್ಥ. ಆದರೆ ಪುನಃ ತಾವು ಇದನ್ನು ಪ್ರಸ್ತಾಪ ಮಾಡಿದ್ದೀರಿ. ಈ ಮಸೂದೆ 1983 ರಲ್ಲಿ ಚರ್ಚೆಗೆ ಆರಂಭವಾಗಿ ಅದಕ್ಕೆ ಪೂರ್ವಭಾವಿಯಾಗಿ 1979 ರಲ್ಲಿ ಅಶೋಕ ಮೆಹತಾ ಸಮಿತಿ ಮತ್ತು ಅದಕ್ಕೂ ಹಿಂದೆ 1956–57 ರಲ್ಲಿದ್ದಂಥ ಪಂಚಾಯತ್ ವ್ಯವಸ್ಥೆ, ಈ 40–50 ವರ್ಷಗಳ ಈ ಅವಧಿಯಲ್ಲಿ ಬೇಕಾದಷ್ಟು ಇಂಥ ವಿಕೇಂದ್ರೀಕರಣದ ಪ್ರಯೋಗ ಕರ್ನಾಟಕದಲ್ಲಿ ಮಾತ್ರವಲ್ಲ, ಕೇರಳದಲ್ಲಿ ಆಂಧ್ರಪ್ರದೇಶದಲ್ಲಿ ಪಶ್ಚಿಮ ಬಂಗಾಲದಲ್ಲಿ, ಗುಜರಾತ್‌ನಲ್ಲಿ ಮಹಾರಾಷ್ಟ್ರದಲ್ಲಿ ನಡೆದಿದೆ. ಈ ಎಲ್ಲಾ ವಿಕೇಂದ್ರೀಕೃತ ವ್ಯವಸ್ಥೆಗೆ ಕೊಟ್ಟ ಅಧಿಕಾರದ ಬಗ್ಗೆ ಹೇಳಬೇಕೆಂದರೆ, ಎರಡು ವರ್ಷಗಳ ಕಾಲ ಎಲ್ಲಾ ಇಲಾಖೆಗಳು ಪರಿಶೀಲನೆ ಮಾಡಿ ಈ ಒಂದು ಶಾಸನವನ್ನು ಶಾಸನಸಭೆಯಲ್ಲಿ ಮಂಡಣೆ ಮಾಡಿದಾಗ ಪುನಃ ಎರಡೂ ಸಭೆಯ 21 ಜನ ಸದಸ್ಯರು ಕುಳಿತು ಅಲ್ಲಿ ಸುದೀರ್ಘವಾಗಿ ಚರ್ಚೆ ಮಾಡಿ ಕಾನೂನಿನ ವ್ಯಾಪ್ತಿ, ಅದರ ಇತಿಮಿತಿ ಕೊಡಬಹುದಾದ ಅಧಿಕಾರ ಮತ್ತು ಕೊಡುವುದಕ್ಕೆ ನಮಗೆ ಇರತಕ್ಕಂಥ ಅಧಿಕಾರ, ಎಲ್ಲವನ್ನೂ ಕೂಡ ವಿಮರ್ಶೆ ಮಾಡಿ ಅಲ್ಲಿಂದದಾಚೆಗೆ ರಾಜ್ಯಾಂಗದ ಅಧಿಪತಿಗಳು; ಅದಕ್ಕೇ ನಾನು ಹೇಳಿದೆ; whether it has gone through the legislative scrutiny, I mean legal scrutiny.

ಲೀಗಲ್ ಸ್ಕ್ರೂಟಿನಿ ಏಕೆ ಮಾಡುತ್ತಾರೆ ಅಂದರೆ, ರಾಜ್ಯಾಂಗದ ವಿರುದ್ಧವಾಗಿ ಇದ್ದರೆ, ಲೀಗಲ್ ಸ್ಕ್ರೂಟಿನಿ ಮಾಡಿದರೆ ಇದು ಹೊರಗೆ ಬರುತ್ತದೆ ಎನ್ನುವ ಕಾರಣಕ್ಕಾಗಿ. ಈ ಕುರಿತು ಅನೇಕ ವಿಚಾರಗಳು ಸಂಸತ್ತಿನಲ್ಲಿಯೂ ಕೂಡ ಪ್ರಸ್ತಾಪವಾಗಿವೆ ಮತ್ತು ಇಂಥ ವಿಚಾರಗಳಲ್ಲಿ ಕೋರ್ಟ್ ಮೂಲಕವೂ ತೀರ್ಮಾನಗಳು

ಆಗಿವೆ. ಈ ಕ್ರಿಯೆಗಳೆಲ್ಲಾ ಮುಗಿದು ನಮ್ಮ ರಾಜ್ಯಾಂಗದ ಅಧಿಪತಿಗಳಾದ ರಾಜ್ಯಪಾಲರ ಮೂಲಕ ಕೇಂದ್ರ ಸರಕಾರದಲ್ಲಿರತಕ್ಕಂಥ ಕಾನೂನು ಇಲಾಖೆ ಮತ್ತು ಕಾನೂನು ಮಂತ್ರಾಲಯದವರು ಇದನ್ನು ಪರಿಪೂರ್ಣವಾಗಿ ಚರ್ಚೆ ಮಾಡಿ, ರಾಷ್ಟ್ರಪತಿಯವರ ಅಂಕಿತಕ್ಕೆ ಹೋದಾಗ ರಾಷ್ಟ್ರಪತಿಯವರು ನೋಡಿದ್ದು ಏನು ? ಅವರಿಗೆ ಅಧಿಕಾರ ಇಲ್ಲವಾದರೆ, ಅವರು ಅಂದೇ ಅದನ್ನು ತಿರಸ್ಕರಿಸಬಹುದಾಗಿತ್ತು. ರಾಜ್ಯಪಾಲರು ರಾಷ್ಟ್ರಪತಿಯವರ ಒಪ್ಪಿಗೆಗೆ ಕಳುಹಿಸದೆ ಅದನ್ನು ತಡೆಹಿಡಿಯಬಹುದಾಗಿತ್ತು. ಅದೇ ರೀತಿಯಲ್ಲಿ ಶಾಸನವನ್ನು ಇಲ್ಲಿ ತರುವಾಗ ಇಲ್ಲಿರತಕ್ಕಂಥ ಇಲಾಖೆ, ನಮ್ಮ ಕಾನೂನು ಇಲಾಖೆ ಅದನ್ನು ತಿರಸ್ಕರಿಸಬಹುದಾಗಿತ್ತು. ಈ ರೀತಿಯಲ್ಲಿ ಎಲ್ಲಾ ಹಂತದಲ್ಲಿಯೂ ಕೂಡ ಇದರ ಪರಿಶೀಲನೆ ನಡೆದು ಇದು ಮಸೂದೆಯಾಗಿ ಕಳೆದ ನಾಲ್ಕು ವರ್ಷಗಳಿಂದ ಕೆಲಸ ಮಾಡಿಕೊಂಡು ಬಂದು ಈಗ ಅವರಿಗೆ ಅಧಿಕಾಲ ಎಂದರೆ ಅವರು ನಾಲ್ಕು ವರ್ಷಗಳಲ್ಲಿ ಮಾಡಿದ ಖರ್ಚು ವೆಚ್ಚಗಳ ಗತಿ ಏನು ? ಮಾನ್ಯ ಮಂತ್ರಿಗಳು ಹೇಳುತ್ತಾರೆ. ಈ ಶಾಸನಸಭೆಗೆ devolution of the Power to the Zilla parishads is not permirsable under the constitution unless it is amended ಅಂತ. ಹಾಗಿದ್ದರೆ ಈ ಅಧಿಕಾರಗಳಡಿಯಲ್ಲಿ ಕೆಲಸ ಮಾಡುವ ಸಂಸ್ಥೆಗಳ ಗತಿಯೇನು ? ಇದು ಬಹಳ ಮುಖ್ಯವಾದ ಪ್ರಶ್ನೆ. ಆದ್ದರಿಂದ ಅಧಿಕಾರವನ್ನು ಕೊಡುವುದಕ್ಕೆ ಶಾಸನಸಭೆಗೆ ಅವಕಾಶ ಇಲ್ಲವೆಂದು ಹೇಳುವ ಮಂತ್ರಿಗಳೇ ಸ್ವಯಂ ಈ ತಿದ್ದುಪಡಿ ಮಸೂದೆಯನ್ನು ಪೈಲಟ್ ಮಾಡುತ್ತಾರೆ. ನಾವು ಹೇಗೆ ಅವರ ಮೇಲೆ ವಿಶ್ವಾಸ ಇಡಬೇಕೆಂಬುದೇ ಮೂಲಭೂತ ಪ್ರಶ್ನೆ.

ಶ್ರೀ ಕೆ. ಹೆಚ್. ರಂಗನಾಥ್ :– ಹಾಗಾದರೆ ತನಗೆ ಸರಿಕಾಣಿಸಿದ ತಿದ್ದುಪಡಿಯನ್ನು ಮಾಡುವ ಅಧಿಕಾರ ಈ ಸಭೆಗೆ ಇಲ್ಲವೋ ?

ಶ್ರೀ ಡಿ. ಬಿ. ಚಂದ್ರೇಗೌಡ :– ಸಭೆಗೆ ಇದೆ. ಆದರೆ ಇಲ್ಲಿ ನನ್ನ ಸಂಶಯವೇನೆಂದರೆ, ನಾವು ಕೊಟ್ಟಿದ್ದ ಅಧಿಕಾರ ಏನಿದೆ ಅದನ್ನು ಕೊಡಲು ನಮಗೆ ಅಧಿಕಾರ ಇರಲಿಲ್ಲವೆಂದು ಭಾವಿಸಿ ಒಂದು ವೇಳೆ ಈಗ ಸಚಿವರು ಅವನ್ನು ವಾಪಸ್ ಪಡೆಯಲು ಪ್ರಯತ್ನ ಮಾಡಿರಬಹುದಲ್ಲವೇ ?

ಶ್ರೀ ಕೆ. ಹೆಚ್. ರಂಗನಾಥ್ :– ಆ ಪ್ರಶ್ನೆ ಉದ್ಭವಿಸುವುದಿಲ್ಲ. ಸರ್ಕಾರದ ಉದ್ದೇಶ ಎಲ್ಲರಿಗೂ ಸ್ಪಷ್ಟವಾಗಿ ಸರಳವಾಗಿ ತಿಳಿದಿದೆ. ಈಗಿನ ವ್ಯವಸ್ಥೆಯಲ್ಲಿ ಕೆಲವು ಅಡ್ಡಿ ಆತಂಕಗಳಿದ್ದರೆ ಅವನ್ನು ತಿದ್ದಲು ಕೆಲವು ತಿದ್ದುಪಡಿ ತರುವ ಅಧಿಕಾರ ಸರ್ಕಾರಕ್ಕಿದೆ. ಈಗ ತಂದಿರುವ ತಿದ್ದುಪಡಿ ಸರಿಯೋ ತಪ್ಪೋ ಎಂಬುದು ಬೇರೆ ವಿಚಾರ; ಇದು ಬಹು ಜನರ ಹಿತ ಕಾಯುವುದೋ ಇಲ್ಲವೋ ಎಂಬುದು ಸಹ ಬೇರೆ ಪ್ರಶ್ನೆ. ಆದರೆ ಇದನ್ನು ತರಲಂತೂ ಅಧಿಕಾರ ಇದೆಯೋ ಇಲ್ಲವೋ ?

ಶ್ರೀ ಡಿ. ಬಿ. ಚಂದ್ರೇಗೌಡ :– ನಾನು ಸರ್ಕಾರಕ್ಕಿರುವ ಅಧಿಕಾರವನ್ನು ಪ್ರಶ್ನೆ ಮಾಡುತ್ತಿಲ್ಲ. ಆದರೆ ಆಡಳಿತಾತ್ಮಕ ವ್ಯವಸ್ಥೆಯಲ್ಲಿ ಕೆಲವು ಅಡ್ಡಿ ಆತಂಕಗಳಿವೆಯೆಂದು ತಾವು ಹೇಳುವುದಾದರೆ, ಜಿಲ್ಲಾ ಪರಿಷತ್ ಎನ್ನುವ ಹೆಸರು ಏನು ಅಡ್ಡಿ ಮಾಡಿತ್ತು ಸ್ವಾಮಿ ? ಮಂಡಲ ಪಂಚಾಯಿತಿ ಎನ್ನುವ ಹೆಸರು ಏನು ಅಡ್ಡಿ ಮಾಡಿತ್ತು ? ಅಧ್ಯಕ್ಷ, ಪ್ರಧಾನ ಎನ್ನುವ ಹೆಸರನ್ನೆಲ್ಲ ಬದಲಾಯಿಸುತ್ತಿದ್ದಾರಲ್ಲ;

ಶ್ರೀ ಕೆ. ಹೆಚ್. ರಂಗನಾಥ್ :– ನಿಮ್ಮ ಮನೆಯಲ್ಲಿ ನಿಮಗೆ ಚಂದ್ರೇಗೌಡ ಅಂತ ಹೆಸರು ಇಡಬೇಕೆಂದು ಆಸೆಯಾಯಿತು, ನಮ್ಮ ಮನೆಯಲ್ಲಿ ನನಗೆ ರಂಗನಾಥ್ ಎಂದು ಹೆಸರು ಇಡಬೇಕೆಂದು ಆಸೆಯಾಯಿತು; ಅದೇ ರೀತಿ ಈ ರೀತಿಬದಲಾವಣೆ ಮಾಡಿದರೆ ಚೆನ್ನಾಗಿರುತ್ತದೆಂದು ತಿದ್ದುಪಡಿ ಮಾಡಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ :– ಈಗ ತಮ್ಮ ಹೆಸರನ್ನು ಬದಲಾಯಿಸಲು ಬರುವುದೇ ?

ಶ್ರೀ ಕೆ. ಹೆಚ್. ರಂಗನಾಥ್ :– ಏಕಾಗಬಾರದು ? ಬಹಳ ಜನ ಮಾಡಿಕೊಳ್ಳುತ್ತಿದ್ದಾರಲ್ಲ.

ಶ್ರೀ ವಾಟಾಳ್ ನಾಗರಾಜ್ :– ಹಾಗೆಂದು ಒಪ್ಪಿಕೊಂಡರೆ ನಾವು ಯಾರೂ ಇಲ್ಲಿ ಕೂತುಕೊಳ್ಳಲು ಆಗುವುದಿಲ್ಲ; 4ನೇ ನಂಬರ್ ಬಸ್ ಹತ್ತಬೇಕಾಗುತ್ತದೆ.

ಶ್ರೀ ಬಿ. ಹೆಚ್. ಬನ್ನಿಕೋಡ್ :– ಈಗಿನ ಕಾನೂನು ನಜೀರ್‌ಸಾಹೇಬರ್ ಕೂಸು. ಈ ಹೆಸರು ಬದಲಾಯಿಸಿ ಬಸವಲಿಂಗಪ್ಪನವರ ಕಾನೂನು ಎಂದು ಹೆಸರು ಇಟ್ಟುಕೊಳ್ಳಲು ಹೊರಟಿದ್ದಾರೆ ಅಷ್ಟೆ.

ಶ್ರೀ ಡಿ. ಬಿ. ಚಂದ್ರೇಗೌಡ :– ಆದ್ದರಿಂದ ಮಾನ್ಯ ಉಪಾಧ್ಯಕ್ಷಿಣಿಯವರೇ, ಈ ಡೆವಲೂಷನ್ ಆಫ್ ದಿ ಪವರ್ ಬಗ್ಗೆ ನಿಮ್ಮಲ್ಲಿ ಕ್ಲಾರಿಟಿ ಇಲ್ಲದಿದ್ದರೆ ಈ ಶಾಸನಸಭೆಗೆ ಮಸೂದೆ ತರುವಾಗ ಈ ಪವರ್ ಬಗ್ಗೆ ಈ ದ್ವಂದ್ವಗಳನ್ನು ಇಟ್ಟುಕೊಂಡು ಕೊಟ್ಟರೆ ಈ ತಿದ್ದುಪಡಿಯನ್ನು ಚರ್ಚಿಸುವುದಾದರೂ ಹೇಗೆ ? ಅದರ ಪರಿಣಾಮ ಏನು ? ಇದರ ವಿವರಗಳನ್ನೆಲ್ಲ ಮಾನ್ಯ ಸಚಿವರು ನೀಡಬೇಕು. ಇನ್ನು ಇದರಲ್ಲಿ ಬಹಳ ಮುಖ್ಯ

ವಾದ ಅಂಶ ಜನರಿಗೆ ಅಧಿಕಾರ ಕೊಡುವ ಧಿಕ್ಕಾರ ಯಾವ ರೀತಿ ಆಗಿದೆ ಎಂದರೆ, 168ನೇ ವಿಧಿ, 174ನೇ ವಿಧಿ, 182, 184 ಮತ್ತು 271ರ ವಿಧಿಗಳನ್ನು ವಿಸ್ತಾರವಾಗಿ ನೋಡಬೇಕಾಗುತ್ತದೆ. ಇದು ಪೀಠಿಕೆ ಅಷ್ಟೆ.

ಶ್ರೀ ಕೆ. ಲಕ್ಕಪ್ಪ :– 168, 177 ಎಲ್ಲ ನೀವೇ ಮಾಡಿದ್ದು ಅದರಲ್ಲಿ ಏನಾದರೂ ಬದಲಾವಣೆ ಆಗಿದೆಯೇ ಎಂದು ನೋಡಿ;

ಶ್ರೀ ಬಿ. ಎಸ್. ಯಡಿಯೂರಪ್ಪ :– ಏನು ಬದಲಾವಣೆ ಮಾಡಿದ್ದಾರೆಂದು ಅವರಿಗೂ ಅರ್ಥವಾಗಿಲ್ಲ ನಮಗೂ ಅರ್ಥವಾಗಿಲ್ಲ; ಮಂತ್ರಿಗಳಿಗೂ ಗೊತ್ತಾಗಿಲ್ಲ.

ಶ್ರೀ ಕೆ. ಲಕ್ಕಪ್ಪ :– ನಾವು ಜನಗಳಿಗೆ ಇನ್ನೂ ಒಳ್ಳೆಯದಾಗಲಿ ಎಂದು ಮಾಡಿದ್ದೇವೆ. ನೀವು ಮಾಡಿದ್ದು ಜನರಿಗೆ ಫಲ ಕೊಡಲಿಲ್ಲ; ಇದನ್ನು ಜನ ವಿರೋಧ ಮಾಡಿದ್ದರಿಂದ ನಾವು ಬದಲಾವಣೆ ಮಾಡಬೇಕಾಯಿತು.

Sri D. B. Chandregowda : Powers and Duties of Adhyakshas Section 168. ಇದಕ್ಕೆ ಅಮೆಂಡ್‌ಮೆಂಟ್ ಹುಡುಕುವುದು ಬಹಳ ಕಷ್ಟ ಸ್ವಾಮಿ. ಮೂರನ್ನು ಒಟ್ಟಾಗಿ ಇಟ್ಟುಕೊಳ್ಳಬೇಕು. Powers and Duties of Adhyaksha ಒರಿಜಿನಲ್ ಮತ್ತು ಅದಕ್ಕೆ ಅಮೆಂಡ್‌ಮೆಂಟ್ ಬಂದಿದ್ದರೆ ನಾನು ಅದಕ್ಕೆ ಜವಾಬ್ದಾರನಲ್ಲ. ಅದು ಬಂದಾಗ ಮಾತನಾಡುತ್ತೇನೆ. The Adhyaksha shall be the executive head of the Zilla Parishad.
ಇದು ವಿಕೇಂದ್ರೀಕೃತ ವ್ಯವಸ್ಥೆಯಲ್ಲಿ ಚುನಾಯಿತ ಪ್ರತಿನಿಧಿಗೆ ಇರತಕ್ಕಂಥ ಸಾರ್ವಭೌಮ ಅಧಿಕಾರ. ಈ ಸಾರ್ವಭೌಮ ಅಧಿಕಾರವನ್ನು ಕೊಡಬೇಕು ಎಂತಲೇ ಸಪ್ಟೆಂಬರ್ 8ನೇ ತಾರೀಖು ರಾಜೀವ್ ಗಾಂಧಿಯವರು ಬರೆದ ಪತ್ರವನ್ನು ಉಲ್ಲೇಖ ಮಾಡಿದ್ದೇನೆ. ಶ್ರೀಮಾನ್ ರಾಜೀವ್ ಗಾಂಧಿಯವರು ಹಿಂದೂ ಪತ್ರಿಕೆಯಲ್ಲಿ ಹೇಳಿದಂಥ ಅಭಿಪ್ರಾಯವನ್ನು ಸಹ ತಮ್ಮ ಗಮನಕ್ಕೆ ತಂದಿದ್ದೇವೆ. 64 ನೇ ರಾಜ್ಯಾಂಗದ ತಿದ್ದುಪಡಿಯಲ್ಲಿ ತಂದಂಥ ಶಾಸನವನ್ನು......

Sri K. Lakkappa : You are going beyond the scope of this legislation.

(ಗೊಂದಲ)

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ :– ತಾವು ಈಗ ಸಭೆಗೆ ಬಂದಿದ್ದೀರೇನು ?

ಶ್ರೀ ಕೆ. ಲಕ್ಕಪ್ಪ :– ಹೌದು; ಹೌದು;

ಶ್ರೀ ಡಿ. ಬಿ. ಚಂದ್ರೇಗೌಡ :– ಮಾನ್ಯ ಲಕ್ಕಪ್ಪನವರು ಮಾನ್ಯ ಮಂತ್ರಿಯವರಿಗೆ ಈ ಮಾತನ್ನು ಹೇಳಿದ್ದರೆ ನಾನು ವಿವರಕ್ಕೆ ಹೋಗುತ್ತಿರಲಿಲ್ಲ. ತಾವು ಯಾವಾಗಲೋ ಒಂದು ಸಲ ಸಭೆಗೆ ಬಂದುಬಿಡುತ್ತೀರಿ, ಏನೋ ಮಾತನಾಡುತ್ತೀರಿ. ಮಾನ್ಯ ಮಂತ್ರಿಗಳೇ ಒಟ್ಟಾರೆ ಕನ್‌ಸಿಡರೇಷನ್ ಸ್ಟೇಜ್‌ನಿಂದ ಹಿಡಿದು ಇಲ್ಲಿಯವರೆಗೆ 64 ನೇ ತಿದ್ದುಪಡಿ, ಅಲ್ಲಿಯ ಆದೇಶ ಇವನ್ನೆಲ್ಲಾ ಪ್ರಸ್ತಾಪ ಮಾಡಿದ್ದಾರೆ. ಅದಕ್ಕಾಗಿ ನಾನು ಪ್ರಸ್ತಾಪ ಮಾಡು-ತ್ತಿದ್ದೇನೆ.

SRI. K. LAKKAPPA : You Confine only to the powrs of Legislature regarding this Zilla Parishad (Amendment) Act.
ನಾವು ಆಲ್ ಇಂಡಿಯಾದಲ್ಲಿ ಯೂನಿಫಾರ್ಮಿಟಿ ಆಫ್ ಲೆಜಿಸ್ಲೇಚರ್ ತಂದಾಗ ಈ ಮಾತನ್ನು ಮಾತನಾಡಿ ರಾಜೀವ್ ಗಾಂಧಿಯವರ ಡೈರೆಕ್ಷನ್, ಸೆಂಟ್ರಲ್ ಡೈರೆಕ್ಷನ್ ಅಥವಾ ಈ ನಮ್ಮ ರಾಷ್ಟ್ರವ್ಯಾಪ್ತಿಯಲ್ಲಿ ಪಂಚಾಯತ್ ರಾಜ್ ಸಿಸ್ಟಂನಲ್ಲಿ ಬದಲಾವಣೆಯನನ್ನು ಏಕರೂಪದಲ್ಲಿ ತರುವುದಾದರೆ, we have no objection ಆಗ ತಾವು ವಿವರಗಳಿಗೆ ಹೋಗಬಹುದು; ಅದು ಬೇರೆ ವಿಷಯ. You confine only to that.

ಶ್ರೀ ಡಿ. ಬಿ. ಚಂದ್ರೇಗೌಡ :– ಮಾನ್ಯ ಸ್ನೇಹಿತರು ಸರಿ ಸುಮಾರು 30 ವರ್ಷಗಳಿಗಿಂತ ಹೆಚ್ಚು ಕಾಲ ಸಂಸದೀಯ ವ್ಯವಹಾರದಲ್ಲಿ ಪಳಗಿದವರು. ಈಗ ನಾನು ಏನು ಮಾತನಾಡಬೇಕೆಂದು ಬುದ್ಧಿ ಹೇಳಿದ್ದಾರೆ. ಅದಕ್ಕಾಗಿ ಅವರಿಗೆ ಅಭಿನಂದಿಸುತ್ತೇನೆ. ಈಗ ನಾನು ಹೇಳುವುದನ್ನು ಅವರು ಕೇಳಲಿ ಎಂದು ಪ್ರಾರ್ಥನೆ ಮಾಡುತ್ತೇನೆ.

Section 168 Powers and duties of Adhyaksha :— This is very very important. This is the crux of the whole debate. The powers given to Adhyaksha under Section 168 is taken away by this amendment. According to tne old Act, "Adhyaksha shall be

the Executive Head of the Zilla Parishad and shall perform all the duties imposed and exercise and all the powers conferred on the Adhaksha under ths Act and the Rules made thereunder and so far as the functions of the Secretary and other officers are concerned, under Section 174, "subject to the general powers of the Adhyaksha under Seettion 168 the Secretary shal perform the followng functions." So, the Secretary has to work under the Adhyaksha, as per the old Act. ಅಧ್ಯಕ್ಷನ ಕೈಕೆಳಗೆ ಮುಖ್ಯಕಾರ್ಯದರ್ಶಿ ಕೆಲಸ ಮಾಡಬೇಕು. ಆದರೆ ಈಗ ತಂದಿರುವ ಶಾಸನ ಇದಕ್ಕೆ ಸಂಪೂರ್ಣವಾಗಿ ತಿರುವು ಮುರುವು ಮಾಡುತ್ತಿದೆ.

This is the basic question. What is the amendment ? "For Section 168, the following section shall be substituted namely: Powers and duties of the Adhyaksha: Adhyaksha shall convene, preside at and conduct the meetings of the Panchyat Abhivrudhi Samithi..." Then, who is the Executive Head ?

ಚುನಾಯಿತ ಪ್ರತಿನಿಧಿಯನ್ನು ಕಿತ್ತುಹಾಕಿ, ಹೊಸಬನನ್ನು ತಂದು ಎಕ್ಸಿಕ್ಯೂಟಿವ್ ಹೆಡ್ ಎಂದು ಹೆಸರು ಕೊಟ್ಟರೆ, ಅಧ್ಯಕ್ಷನಿಗೆ ಏನು ಕೆಲಸ ? ಕೆಲಸ ಏನೆಂದರೆ ಮೀಟಿಂಗ್ ಕರೆಯುವುದು, ಮೀಟಿಂಗ್ ನಡೆಸುವುದು ಮತ್ತು ಮೀಟಿಂಗ್ ನಡೆಸತಕ್ಕಂಥ ಕಾಲದಲ್ಲಿ ಅಧ್ಯಕ್ಷತೆಯನ್ನು ವಹಿಸುವುದು. This is in contravention of the directions of your Party. You have killed the elected representatives.

ಶ್ರೀ ಬಿ. ಬಸವಲಿಂಗಪ್ಪ :– ನಾವು ಅಧಿಕಾರ ಕೊಟ್ಟಿದ್ದೇವೆ. ಓದಿ ನೋಡಿ.

ಶ್ರೀ ಡಿ. ಬಿ. ಚಂದ್ರೇಗೌಡ :– ಕೊಟ್ಟಿದ್ದೀರಿ; ಆದರೆ ಯಾವುದನ್ನ ? ತಲೆ ಕತ್ತರಿಸಿ ಕೈಕಾಲಿಗೆ ಬೇಕಾದಷ್ಟು ಅಧಿಕಾರ ಕೊಟ್ಟಿದ್ದೀರಿ. ಇಲ್ಲಿ ತಲೆ ಕತ್ತರಿಸಿ, ನಂತರ ಹೆಣಕ್ಕೆ ಬಹಳಷ್ಟು ಶೃಂಗಾರ ಮಾಡಿದ್ದೀರಿ. ನೀವು ಇಲ್ಲಿ ಚುನಾಯಿತ ಪ್ರತಿನಿಧಿಗಳ ಅಧಿಕಾರವನ್ನು ಮೊಟಕುಗೊಳಿಸಿದ್ದೀರಿ.

ಶ್ರೀ ಬಿ. ಬಸವಲಿಂಗಪ್ಪ :– ನಾವು ಕಡಿಮೆ ಕೆಲಸವನ್ನು ಕೊಟ್ಟಿದ್ದೇವೆಂದು ಹೇಳುತ್ತಿದ್ದಾರೆ. ಆದರೆ ನೀವು ಕೊಟ್ಟಿದ್ದು ಏನೆಂದರೆ 1986 ರಲ್ಲಿ ಇದೇ ಸೆಕ್ಷನ್ 168ರ ಪ್ರಕಾರ ಏನು ಪವರ್ಸ್ ಎಂದು ಡಿಫೈನ್ ಮಾಡಿದ್ದೀರಿ; ಆದರೆ ಯಾವ ಪವರ್ಸ್ ಕೊಟ್ಟಿಲ್ಲ. ನಾನು ಓದಿ ಹೇಳುತ್ತೇನೆ.

(1) To exercise general control over all officers and servants working in and under Zilla Parishats (2) To summon any officer or servant working in or under the Zilla Parishats and call for any information, particulars (3) To call for any file being deal by any of the department of the Zilla Parishats (4)To have a copy of the Tour programme of the Chief Secretary and to approve the tour programme of the Chief Secretary (5) To sanction Casual Leave, Earned Leave and commuted leave (6) To initiate the confidential reports (7) To accord sanction upto Rs. 50,000/— (8) To monitor, supervise and review the Departmental activities.

SRI. D. B. CHANDREGOUDA : This is apart from the powers given under the Act.

ಶ್ರೀ ಆರ್. ಎಲ್. ಜಾಲಪ್ಪ :– ತಾವು ಪೂರ್ತಿ ಓದಿ ಸ್ವಾಮಿ.

ಶ್ರೀ ಬಿ. ಬಸವಲಿಂಗಪ್ಪ :– ನಾನು ನಿಮ್ಮನ್ನು ಬಿಟ್ಟು ನುಂಗಿಕೊಳ್ಳಬೇಕು ಎಂದು ಏನಾದರೂ ಇದೆಯೋ. ನಾನು ನುಂಗಿಕೊಳ್ಳುವಾಗ ನಿಮಗೂ ನುಂಗಿಸುತ್ತೇನೆ. ನೀವು ನುಂಗುವಾಗ ನಾನೂ ನುಂಗುತ್ತೇನೆ.

"In exercise of the powers conferred by Sections 168 and 169 of the Karnataka Zilla Parishad Taluk Panchayats Samithis and Mandal Panchayats Act 1983 Road with Section 284 of the said Act. the Government of Karnataka hereby makes the following rules namely: Title These rules may be called the Karnataka Zilla Parishats (Power and Duties of the Adhyaksha) Rules 1986.

ಇದನ್ನು ತಮಗೆ ಕಳುಹಿಸಿ ಕೊಡುತ್ತೇನೆ. ನೋಡಿ ನೋಡಿದ ನಂತರ ವಾಪಸ್ ಕಳುಹಿಸಿಕೊಡಿ.

ಶ್ರೀ ಕಾಗೋಡು ತಿಮ್ಮಪ್ಪ :– ನಿಮಗೆ ಸಂಶಯ ಇದೆಯೇ ?

ಶ್ರೀ ಡಿ. ಬಿ. ಚಂದ್ರೇಗೌಡ :– ಈಗ ತಂದಿರುವ ಮಸೂದೆ ನೋಡಿದ ಮೇಲೆ ಅವರ ಮೇಲೆ ಸಂಶಯ ಬಂದಿದೆ. ಆದ್ದರಿಂದ, ಅವರು ತಂದಿರುವ ಪೇಪರ್ ಸ್ವಲ್ಪ ನೋಡಬೇಕಾಗುತ್ತದೆ. ಇದು ಯಾವುದು ಇದ೦

ಶ್ರೀ ಕಾಗೋಡು ತಿಮ್ಮಪ್ಪ :– ನಿಮ್ಮ ಸರ್ಕಾರ ಮಾಡಿದ್ದು ನಿಮಗೇ ಗೊತ್ತಿಲ್ಲ ಎಂದು ಹೇಳಿದರೆ, ನಾವು ಏನು ಹೇಳಬೇಕು ಸ್ವಾಮಿ.

ಶ್ರೀ ಡಿ. ಬಿ. ಚಂದ್ರೇಗೌಡ :– ಅದು ನನ್ನದು ಅಲ್ಲ ಸ್ವಾಮಿ. ನಾನು ಏನು ಮಂತ್ರಿ ಆಗಿರಲಿಲ್ಲ. ನಮ್ಮ ಪಕ್ಷದ ಸರ್ಕಾರ ಎಂದು ಹೇಳಿ, ಒಪ್ಪಿಕೊಳ್ಳುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ :– ಈಗ ಇದರಲ್ಲಿ ಏನಾಗಿದೆ ಅಂದರೆ, ಆಗ ಜಿಲ್ಲಾ ಪರಿಷತ್ ಅಧ್ಯಕ್ಷರಿಗೆ ಪವರ್‍ಸ್ ಅನ್ನು ಎಕ್ಸಿಕ್ಯೂಟೀವ್‌ಹೆಡ್ ಅಂತ ಮಾಡಿದ್ದಿರೇ ವಿನಹ ಪವರ್‍ಸ್ ಅಂಡ್ ಫಂಕ್ಷನ್ಸ್ ಏನು ಎನ್ನುವುದು ಆಕ್ಟ್‌ನಲ್ಲಿ ಇರಲಿಲ್ಲ. ಅದಕ್ಕೋಸ್ಕರವಾಗಿ ಸೆಪರೇಟ್ ಆಗಿ, ಒಂದು ನಿಯಮಾವಳಿಯನ್ನು ಅವರು ಮಾಡಿದರು ಅದರ ಪ್ರಕಾರ ಅವರು ನಿರ್ವಹಿಸುತ್ತಿದ್ದರು. ಈ ಕಾನೂನಿನಲ್ಲಿ ಪವರ್‍ಸ್ ಅಂಡ್ ಫಂಕ್ಷನ್ಸ್ ಎನ್ನುವುದು ಇದೆ ನಿಯಮಾವಳಿ ಬದಲು ಆ್ಯಕ್ಟ್‌ನಲ್ಲಿ ತಂದಿದ್ದೇವೆ.

ಶ್ರೀ ಆರ್. ಎಲ್. ಜಾಲಪ್ಪ :– ಅಧ್ಯಕ್ಷ ವಿಲ್ ಬಿ ದಿ ಚೀಫ್ ಎಕ್ಸಿಕ್ಯುಟೀವ್ ಎಂದು ಇದರಲ್ಲಿ ಹಾಕಿದ್ದೀರಾ. ನಿಮ್ಮ ಅಮೆಂಡ್‌ಮೆಂಟಿನಲ್ಲಿ ಅದು ಇದೆಯೇ.

ಶ್ರೀ ಕಾಗೋಡು ತಿಮ್ಮಪ್ಪ :– ನಿಯಮಾವಳಿಯನ್ನು ಸರ್ಕಾರ ಯಾವಾಗ ಬೇಕಾದರೂ ಬದಲಾವಣೆ ಮಾಡಬಹುದು. ಇಲ್ಲಿ ಅಧ್ಯಕ್ಷರ ಜವಾಬ್ದಾರಿ ಮತ್ತು ಅಧಿಕಾರ ವ್ಯಾಪ್ತಿಯನ್ನು ಕಾನೂನಿನಲ್ಲಿ ವಿವರಿಸಿ ಹೇಳಿದ್ದರಿಂದ ತೊಂದರೆ ಏನು ?

ಶ್ರೀ ಡಿ. ಬಿ. ಚಂದ್ರೇಗೌಡ :– ನೀವು ವಕೀಲರು ಇದ್ದೀರಿ. ಭಾಷೆ ನನಗೂ ಸ್ವಲ್ಪ ತಿಳಿಯುತ್ತದೆ. ನನಗೆ ತಿಳಿಯದಿದ್ದರೆ ತಾವು ಸರಿಮಾಡಿ. ಈ ಮೊದಲು ಎಕ್ಸಿಕ್ಯುಟಿವ್ ಅಥಾರಿಟಿ ಏನಿತ್ತು, ಅದು ಚುನಾಯಿತ ಮಂಡಲಿಯ ಅಧ್ಯಕ್ಷರಿಗೆ ಇತ್ತು. ಅದನ್ನು ನೀವು ಕಿತ್ತು ಹಾಕಿ ಏನನ್ನು ಸಬ್‌ಸ್ಟಿಟ್ಯೂಟ್ ಮಾಡಿದ್ದೀರಿ ಅಂದರೆ
To convene, preside at and conduct meetings of the Zilla Parishats, Panchayat Abivrudhi Samithi; to have access to the records of the Zilla Panchayat Abhivrudhi Samithi; dischrge of duties imposed and exercise of powers conferred or made by or under this Act and perform such functions entrusted to him by the Government. ನಿನಗೆ ಏನು ಕೆಲಸ ಎಂದರೆ ಇಷ್ಟೆ;

5–20 ಪಿ. ಎಂ.

SRI. K. LAKKAPPA : By resolution of the Zilla Parishad the Zilla Parishad will exercise the powers including the President. It is not an individual who is exercising the power. Zilla Parishad has to get power in accordance with the resolution and the same has to be executed by the President. What is the power that we have snatched away from him?

SRI. A. B. JAKANUR : Discharge of duties and perform such functions entrusted and powers conferred on him under this Act. ಇದು ಮುಗಿಯಿತು; ನಂತರ and perform such functions ಎಂದು ಇದೆ. ಈ ಆ್ಯಕ್ಟ್ ಕೆಳಗೆ ಅಲ್ಲದೆ ಮತ್ತೆ ಸರ್ಕಾರದವರೂ ಏನಾದರೂ ತಿಳಿಸಿದರೆ ಮಾಡಬೇಕೆಂದು ಇದೆ. ಹೀಗೆ ಎರಡೂ ಇದೆ. ತಾವು ನೋಡಿ.

ಶ್ರೀ ಡಿ. ಬಿ. ಚಂದ್ರೇಗೌಡ :– ನಮಗೆ ನಿಮ್ಮವರು ಕೊಟ್ಟಿರತಕ್ಕ ಪಂಚಾಂಗ ಏನಿದೆ, ಅದರಲ್ಲಿ ಏನಿದೆ ಎಂಬುದನ್ನು ನೋಡಿ. ಈಗ ಅವರು ಓದಿದ್ದು Powers and duties of the Adhyaksha: To exercise general control over all officers and servants in or under the Zilla Parishats.

In your amendment, it is "exercise such administrative powers" In the old Act. it is, "exercise general control over all the officers".

ಶ್ರೀ ಹೆಚ್. ಏಕಾಂತಯ್ಯ :— ಇದು ಪಂಚಾಯಿತಿಯಲ್ಲಿ ತೀರ್ಮಾನವಾಗಬೇಕೆ ?

ಶ್ರೀ ಡಿ. ಬಿ. ಚಂದ್ರೇಗೌಡ :— ಅಗಲಿ ಬಿಡಿ. 168ನ್ನು ನಾನು ಏತಕ್ಕ ಇಷ್ಟು ಒತ್ತಾಯ ಮಾಡುತ್ತಿದ್ದೇನೆ ಎಂದರೆ this is the crux of the whole amendment.

ಶ್ರೀ ಕೆ. ಹೆಚ್. ರಂಗನಾಥ್ :— ಈ ಅಧಿನಿಯಮದ ಉಪ ಬಂಧಗಳಿಗೆ ಅಥವಾ ಸರ್ಕಾರದಿಂದ ಅಥವಾ ಕಮಿಷನ್‌ನಿಂದ ಹೊರಡಿಸಲಾದ ಯಾವುದೇ ಸಾಮಾನ್ಯ ಅಥವಾ ನಿರ್ಧಿಷ್ಟ ನಿರ್ದೇಶನಕ್ಕೆ ಅಸಂಗತ ಅಲ್ಲದ ಜಿಲ್ಲಾ ಪಂಚಾಯಿತಿ ಅಭಿವೃದ್ಧಿ ಸಮಿತಿ ಅಥವಾ ಸ್ಥಾಯಿ ಸಮಿತಿಗಳ ಗೊತ್ತುವಳಿ ತಾರೀಖನ್ನು ಮತ್ತು ಮುಖ್ಯ ಕಾರ್ಯ ನಿರ್ವಹಣಾಧಿಕಾರಿಯ ಮೇಲೆ ಆಡಳಿತಾತ್ಮಕ ಮೇಲ್ವಿಚಾರಣೆಯನ್ನು ಹಾಗೂ ನಿಯಂತ್ರಣ ವನ್ನು ಚಲಾಯಿಸತಕ್ಕದ್ದು ಎಂದು ಇದೆ. ಇಲ್ಲಿ ನಿಯಂತ್ರಣ ಎಂದರೆ ಕಂಟ್ರೋಲ್ ಅಲ್ಲವೆ ? ಇಂಗ್ಲೀಷ್‌ನಲ್ಲಿ ಕಂಟ್ರೋಲ್ ಎಂಬುದನ್ನು ತೆಗೆದುಹಾಕಿರಬಹುದು. ಆದರೆ ಕನ್ನಡದಲ್ಲಿ ಕಂಟ್ರೋಲ್ ಎಂದು ಇದೆ.

ಶ್ರೀ ಬಿ. ಹೆಚ್. ಬನ್ನಿಕೋಡ್ :— ನಿನ್ನೆ ತಾನೆ ಮಾನ್ಯ ಸಚಿವರು ಹೇಳಿದರು; ಇಂಗ್ಲೀಷ್ ಪ್ರತಿ ಅಧಿಕೃತ ವಾದುದು ಅಂತ. ಅಂದರೆ ಕನ್ನಡ ಪ್ರತಿ ಅಧಿಕೃತ ಅಲ್ಲ. ಆದ್ದರಿಂದ ನಾನು ಹೇಳುತ್ತಿದ್ದೇನೆ.

ಶ್ರೀ ಹೆಚ್. ಏಕಾಂತಯ್ಯ:— ಮಾನ್ಯ ಜಕನೂರ್‌ರವರು ಹೇಳತಕ್ಕದ್ದು ಪೂರ್ಣವಾಗಿ ಸರಿ ಇಲ್ಲ. 168ರ ಪ್ರಕಾರ ಏನು ರೂಲ್ಸ್ ಮಾಡಿದ್ದೀರಿ, ಆ ರೂಲ್ಸ್‌ನ ಪ್ರಕಾರ ಏನು ಅಧಿಕಾರ ಇದೆ, ಆ ಅಧಿಕಾರವನ್ನು 168ರಲ್ಲಿ ತೆಗೆದಮೇಲೆ ತಾವು ಹೇಳಿದಂತೆ ತಿದ್ದುಪಡಿ ಏನಿದೆ ಆ ತಿದ್ದುಪಡಿಯ ಪ್ರಕಾರ ಈ ಅಧಿಕಾರವನ್ನು ಕೊಡುವುದಕ್ಕೆ ಸಾಧ್ಯವಿಲ್ಲ. ಆ್ಯಕ್ಟ್‌ನಲ್ಲಿರತಕ್ಕದ್ದು ನಾನು ಹೇಳುತ್ತಿದ್ದೇನೆ. 168ರ ಪ್ರಕಾರ ತಾವು ಏನು ಅಧಿಕಾರವನ್ನು ಕೊಟ್ಟಿ-ದ್ದೀರಿ ಈ ಅಧಿಕಾರವನ್ನು ಈಗ ತಿದ್ದುಪಡಿ ಆದಂಥ ಕಾನೂನಿನ ಪ್ರಕಾರ ಕೊಡುವುದಕ್ಕೆ ಸಾಧ್ಯವಿಲ್ಲ. ನಾನು ಇದರ ಬಗ್ಗೆ ಆಮೇಲೆ ಹೇಳುತ್ತೇನೆ. ಮೊದಲು ಇವರದ್ದು ಚರ್ಚೆ ಯಾಗಲಿ.

ಶ್ರೀ ಕೆ. ಹೆಚ್. ರಂಗನಾಥ್ :— ಇಲ್ಲಿ ಪ್ರಿಂಟ್ ಆಗಿರುವುದನ್ನು ನಾನು ಓದಿ ಹೇಳುತ್ತಿದ್ದೇನೆ. ಸ್ಥಾಯಿ ಸಮಿತಿಯ ಗೊತ್ತುವಳಿಗಳು ಅಥವಾ ನಿರ್ಣಯಗಳನ್ನು ಕಾರ್ಯರೂಪಕ್ಕೆ ತರಲು ಮುಖ್ಯ ಕಾರ್ಯ ನಿರ್ವಹಣಾ ಅಧಿಕಾರಿಯ ಮೇಲೆ ಅಂಥ ಆಡಳಿತಾತ್ಮಕ ಮೇಲ್ವಿಚಾರಣೆ ಹಾಗೂ ನಿಯಂತ್ರಣ ಹಾಕತಕ್ಕದ್ದು. ನಿಯಂತ್ರಣ ಎಂದರೆ ಇನ್ನು ಯಾವರೀತಿ ?

ಶ್ರೀ ಹೆಚ್. ಏಕಾಂತಯ್ಯ :— ನಿಯಂತ್ರಣಕ್ಕೆ ತಾವು ಬಹಳಷ್ಟು ಕಡಿವಾಣವನ್ನು ಹಾಕಿದ್ದೀರಿ ಅದರ ಬಗ್ಗೆ ಅವರು ಹೇಳುತ್ತಿರುವುದು.

ಶ್ರೀ ಕೆ. ಹೆಚ್. ರಂಗನಾಥ್ :— ನಿಯಂತ್ರಣವನ್ನು ಚಲಾಯಿಸತಕ್ಕದ್ದು ಎಂದು ಹೇಳಿ......

SRI H. EKANTHAIAH: Under what circumstances? Is it under Section 168?

SRI. K. H. RANGANATH: Rules or Act which prevails? Act will prevail. Don't you think, this is the better way of putting it in the amendment?

(ಶ್ರೀಮತಿ ರೇಣುಕಾ ರಾಜೇಂದ್ರನ್ ಅವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಶ್ರೀ ಹೆಚ್. ಏಕಾಂತಯ್ಯ :— ಈಗಿರತಕ್ಕಂಥ 168 ಏನು ಇದೆ, ಮಾನ್ಯ ತಮ್ಮ ತಿದ್ದುಪಡಿ ಆದ 168ರ ಪ್ರಕಾರ ಯಾವ ಅಧಿಕಾರ ಸರ್ಕಾರಕ್ಕೆ ಇದೆ ?

ಶ್ರೀ ಕೆ. ಹೆಚ್. ರಂಗನಾಥ್ :— ಈಗಿರತಕ್ಕಂಥದ್ದರಲ್ಲಿ we have just said him as ಚೀಫ್ ಎಕ್ಸಿಕ್ಯುಟೀವ್ ಎಂದು ಹೇಳಿದ್ದೀರಿ ಅವರ ಅಧಿಕಾರ ಏನು ಎನ್ನುವುದನ್ನು ನೋಟಿಫಿಕೇಷನ್‌ನಲ್ಲಿರುವ ರೂಲ್ಸ್ ನೋಡಬೇಕು.

ಶ್ರೀ ಹೆಚ್. ಏಕಾಂತಯ್ಯ :— ಆ ನೋಟಿಫಿಕೇಷನ್ ಹೆಸರಿನಲ್ಲಿರತಕ್ಕಂಥ ಅಧಿಕಾರವನ್ನು ನೀವು ತಿದ್ದುಪಡಿ ಆದ ನೋಟಿಫಿಕೇಷನ್ ಪ್ರಕಾರ ಕೊಡಲಿಕ್ಕೆ ಸಾಧ್ಯವಿಲ್ಲ.

ಶ್ರೀ ಡಿ. ಬಿ. ಚಂದ್ರೇಗೌಡ :— ಈಗ ಮಾನ್ಯ ಮಂತ್ರಿಗಳು ಕಳುಹಿಸಿರುವುದರಲ್ಲಿ ರೂಲ್ಸ್ 3 ಪವರ್ ಅಂಡ್ ಡ್ಯೂಟೀಸ್ ಆಫ್ ದಿ ಅಧ್ಯಕ್ಷ ಬಗ್ಗೆ ಅವರದ್ದನ್ನು ಓದಿ ಬಿಡುತ್ತೇನೆ.

Save as otherwise provided under the Act, the Adhyaksha shall have the powers to exercise general control over all the officers and servants working in or under the Zilla Parishads. But here, Section 168 (d) says Discharge of duties imposed and exercise of powers conferred on him by or under this Act and perform such functions entrusted to him by the Government from time to time.

ಶ್ರೀ ಕೆ. ಹೆಚ್. ರಂಗನಾಥ್ :– ಮೊದಲನೆಯದು ಮತ್ತು ಅದರ ಜೊತೆಗೆ ಎರಡನೆಯದೂ ಅಂತ ಆಗುತ್ತದೆ.

ಶ್ರೀ ಡಿ. ಬಿ. ಚಂದ್ರೇಗೌಡ :– ನಾನು ಏನು ಹೇಳುತ್ತಿದ್ದೇನೆಂದರೆ, ಈ ಬಗ್ಗೆ 174ನೇ ನಿಯಮವನ್ನು ಓದಿದರೆ ಗೊತ್ತಾಗುತ್ತದೆ.

In Section 174 sub section (1) and (2) the following sub section shall be sunstituted namely " save as otherwise expressly provided by or under this Act, the Executive power for the purpose of carrying out the provisions of this Act shall vest in the Chief Executive Officer "

ಇದಕ್ಕೆ ತಮ್ಮ ವ್ಯಾಖ್ಯಾನ ಏನಾದರೂ ಇದೆಯೇ ?

It shall vest. That is why, I said, Section 168 should be read alongwith Section 174 Earlier Section 168 used to control 174 and now Section 174 controls Section 168. Am I right.

ಈಗ ಚುನಾಯಿತ ಅಧ್ಯಕ್ಷನಿಗೆ 168 ರಲ್ಲಿ ಕೊಟ್ಟಿರತಕ್ಕಂಥ ಅಧಿಕಾರವನ್ನು ಕಿತ್ತುಹಾಕಿ 174 ರಲ್ಲಿ ಈ ಎಕ್ಸಿ-ಕ್ಯುಟಿವ್ ಅಧಿಕಾರವನ್ನು ಮೊದಲಿದ್ದ ಮುಖ್ಯ ಕಾರ್ಯದರ್ಶಿ ಬದಲಾಗಿ ಚೀಫ್ ಎಕ್ಸಿಕ್ಯುಟೀವ್ ಆಫೀಸರ್ ಎಂದು ಹೇಳಿ ಎಕ್ಸಿಕ್ಯುಟೀವ್ ಅಧಿಕಾರವನ್ನು ಅವನಿಗೆ ಕೊಟ್ಟು ಚುನಾಯಿತ ಅಧ್ಯಕ್ಷರು ಇವನ ಕೈಕೆಳಗೆ ಕೆಲಸ ಮಾಡತಕ್ಕಂಥ ಪ್ರವೃತ್ತಿ ಈ ಶಾಸನದಲ್ಲಿ ತಂದಿರುತ್ತೀರಿ. ಇದನ್ನು ನಾನು ವಿರೋಧ ಮಾಡುತ್ತೇನೆ.

This is the basic concept. If you really feel in the decentralisation and the democratisation especially with regard to Zilla Parishats and Mandal Panchayats, this is a draconian piece of amendment, which I oppose.

ಶ್ರೀ ಬಿ. ಬಸವಲಿಂಗಪ್ಪ :– ಈಗ ನಾನು ಮಂತ್ರಿಯಾಗಿದ್ದೇನೆ. ನಾನು ಎಕ್ಸಿಕ್ಯುಟೀವ್ ಆಫೀಸರೋ ಅಥವಾ ಅಲ್ಲವೋ ಎನ್ನುವುದು ಪ್ರಶ್ನೆ. ನಾನು ಎಕ್ಸಿಕ್ಯುಟೀವ್ ಆಫೀಸರ್ ಅಲ್ಲ.

Executive Officer is a bureaucrat. He is the man who executes the work and signs the cheques for the works, disbursement, drawings etc., A minister cannot do it· Mr. D. B. Chandregowda was a Minister.

I am aso drawing the attention of Dr· Jeevaraj Alva. You are realy rarely coming to the Assembly. I like you and that is why I have drawn your attention. Were you an executive officer, when you were Minister? I am just a Minister representing people's will. I come here as a Member of the Assembly and I am appointed as a Minister and acts on behalf of the people in discharge of their will. Now, who is the executive officer?

SRI R L. JALAPPA: Is your Secretary controlling you or you are controlling your Secretary?

SRI. B. BASAVALINGAPPA: The basic structure of the Government and the Legislature are different. Legislature is supreme. Government is subordinate to the Legislature. We act according to the Legislature. Once Government is constituted who is the executive officer. Whether the Minister or Chief Minister is executive officer? I say 'no' under the basic structure of political science, we are not executive officers. It

is undemocratic and it cuts into the democracy and I do not think any person on earth will think that any Minister is an executive officer.

SRI R. L. JALAPPA: What is that you are teachng? What is the sermon you are giving ?

SRI D. B. CHANDREGOWDA : He is arguing on the lines of West Minister idoology. ಅಲ್ಲಿ ಏನಾಯಿತು ಎಂಬುದನ್ನು ಹೇಳೋಣ. ಅದನ್ನೂ ವ್ಯಾಖ್ಯಾನ ಮಾಡೋಣ.

SRI B. BASAVALINGAPPA : Sorry, I am intervening twice. Therefore I request my hon. friend and the Leader of the Opposition, Mr. Chandre Gowda to confine himself to what is called the executive power and then the devolution of power. You are mistaking both of them. Power is not devolved, to a Zilla Parishad President. When it is not devolved, it cannot be exercised by him. Secondly merely calling him an executive officer you have described the powers and functions. I have given you notifications. I have not issued any notifications. In 1986, the very same Janata Government, your own Government issued that notification. What is the power you have given to him only to preside over the meeting, only to call for the records,

SRI D. B. CHANDRE GOWDA: ...to exercise general control over all officers and servants working under him or under the Zilla Parishad.' This is the control.

ಇದೂ ಒಂದಕ್ಕೆ ಉತ್ತರ ಕೊಡಿ.

SRI B. BASAVALINGAPPA: Alright, even assuming ...

(interruptions)

SRI H. EKANTHAIAH : Now you have conceded that you have not given powers, that are there in the Act.

SRI B. BASAVALINGAPPA: More than that, I have given.

SRI H. EKANTHAIAH : Only when the instructions are issued by the Govt.

ಶ್ರೀ ಬಿ. ಹೆಚ್. ಬನ್ನಿಕೋಡ್ :– ಕಾರ್ಯದರ್ಶಿಗಳು, ಮುಖ್ಯ ಕಾರ್ಯದರ್ಶಿಗಳು ಎಕ್ಸಿಕ್ಯುಟೀವ್ ಹೆಡ್ ಆದರೆ ಇಲ್ಲಿ ಮಂತ್ರಿಗಳು ಇಲಾಖೆಗೆ ಸಂಬಂಧಪಟ್ಟವರು. ಅವರು ಸರ್ಕಾರ ನಡೆಸುವುದೇ ಅಥವಾ ಇವರು ನಡೆಸುವುದೇ ? ಯಾರು ಸರ್ಕಾರವನ್ನು ನಡೆಸುವುದು ?

SRI B. BASAVALINGAPPA : Mr. Bannikod, you are a lawywer. I requested Mr. Chandre Gowda and he yielded. I am on my legs. You must request me to yield and then you can talk. Alright. Whatever has been there, in the Act, you should have defined and given all the powers like signing cheques, passing of orders, issuing contract's You could have done it. In the absence of executive head, everything is there in the notification issued in 1986. Therefore kindly keep this in mind.

ಶ್ರೀ ಡಿ. ಬಿ. ಚಂದ್ರೇಗೌಡ :– ನಾನು ಅದನ್ನೇ ಹೇಳಿದೆ.

If you argue on the Westminister ideology, I am prepared to argue. We gave a go-by to the Westminister ideology and gave powers to the elected representative. There in Britain, the executive authority is the Secretary as you have rightly pointed out. Here the Minister, ನೀವು ಮಿನಿಸ್ಟರ್ ಅಲ್ಲವೆಂದು ಹೇಳುತ್ತೀರಿ. ಹಾಸನ ಜಿಲ್ಲೆಯ ದುದ್ದ ಮಂಡಲ ಪಂಚಾಯಿತಿಯಲ್ಲಿ ಒಬ್ಬ ಪಂಚಾಯಿತಿ ಕಾರ್ಯದರ್ಶಿಯನ್ನು ಸಸ್ಪೆಂಡ್ ಮಾಡಬೇಕೆಂದು ಮಂಡಲ ಪಂಚಾಯಿತಿ

ಯವರು ಮಾಡಿರತಕ್ಕ ತೀರ್ಮಾನವನ್ನು ಹಾಸನದ ಜಿಲ್ಲಾ ಪರಿಷತ್ತಿನವರು ಒಪ್ಪಿಕೊಂಡರೆ, ಮಂತ್ರಿಯಾಗಿ ತಾವು ಸ್ಟೇ ಕೊಟ್ಟಿದ್ದೀರಿ. ಹೇಗೆ ಕೊಟ್ಟಿರಿ ?

SRI B. BASAVALINGAPPA : I do not know. It is the job of the executive officer, except where the Secretary wants my approval it comes before me. I do not know what I have done. Several acts have been done. I do not know what. But you call for a Secretary of the Village Panchayat and then you want to say that why you have passed the order. It is not an executive order. Who is the executive officer? The executive officer is a man, who executes the orders of the Government. Who is the man who executes the order? It is the Deputy Commissioner: it is the Divisional Commissioner. It is the host of officers who are working under the umbrella of Govt. They are the executive officers and not anybody else. Suppose the Secretary is there and he works under the Minister. Can he sign a cheque? He can't do. Can he order or sanction everything independently? That is why I say, executive officers are different and executive powers are different. If your own Janata Government was genuine, to give executive powers to the Zilla Parishad President, they could have defined. Where was the necessity of issuing notification? Why did they not define the executive functions in the notification? What was the necessity of issuing any notification contrary to what is stated in 168?

SRI D. B. CHANDRE GOWDA : Let there not be a conflict between understanding things— Executive and execution. One is administrative head and the other is executive head. Let is argue, if I understand correctly Administrative head is different from that of the executive head.

SRI M. VEERAPPA MOILY: If you could yield for a minute. It is an interesting debate.

ಶ್ರೀ ಬಿ. ಹೆಚ್. ಬನ್ನಿಕೋಡ್ :– ನೀವು ಹೇಳಿ. ಆದರೆ ನೀವು ನಮ್ಮ ಹಾದಿ ಬದಲು ಮಾಡಬೇಡಿ ಅಷ್ಟೆ.

SRI M. VEERAPPA MOILY: As I could understand the whole concept, ಇಡೀ ರಾಷ್ಟ್ರದಲ್ಲಿ ಒಂದು ರೀತಿಯ ಸೈದ್ಧಾಂತಿಕ ಪ್ರಜಾಪ್ರಭುತ್ವದ ಪದ್ಧತಿ ಇದೆ. ಅದು ಯಾವುದೆಂದರೆ, it is a parliamentary system. ಪಾರ್ಲಿಮೆಂಟರಿ ಸಿಸ್ಟಂ ರಾಷ್ಟ್ರದ ಮಟ್ಟಿಗೆ ಇದೆ; ರಾಜ್ಯದ ಮಟ್ಟಿಗೆ ಇದೆ. ಅಧ್ಯಕ್ಷರನ್ನು ಡೈರೆಕ್ಟ್ ಆಗಿ ಎಲೆಕ್ಟ್ ಮಾಡುವುದಿಲ್ಲ. ಅಮೇರಿಕದ ಹಾಗೆ ಎಲೆಕ್ಟ್ ಮಾಡುವುದಿಲ್ಲ.

Governor of a Provincial State is an executive head in American Province. American President is directly elected and so he is the executive head for the entire nation. ಸೈದ್ಧಾಂತಿಕವಾಗಿ There is a lot of distortion in what you have made while bringing this Act. Everything is OK. We appreciate the total concept and frame of the Act. No doubt about it. That is why we compliment you. ಅದರಲ್ಲಿ ಅಧಿಕಾರ ಕೊಡುತ್ತಾ ಬಂದಾಗ You have distorted, making him as executive head, but who can be executive head? Suppose the Zilla Parishad President or a Mandal Pradhan is directly elected' there is some point in making him an executive head. Here the right is accrued to him by means of a representative body, viz., Zilla Parishad or a Mandal and he gets power from them not directly from the people. I think this is were we have gone wrong. The whole system has gone wrong. It is better you can also consider it. ಏಕೆಂದರೆ, ರಾಜ್ಯದ ಮಟ್ಟಿಗೆ ಮತ್ತು ರಾಷ್ಟ್ರದ ಮಟ್ಟಿಗೆ ಒಂದು ಪಾರ್ಲಿಮೆಂಟರಿ ಸಿಸ್ಟಂ ಒಂದು ಕಾನ್‌ಸೆಪ್ಟನ್ನು ಅಥವಾ ಒಂದು ಸಿದ್ಧಾಂತವನ್ನು ಅಳವಡಿಸಿದ ಮೇಲೆ ಜಿಲ್ಲಾ ಪರಿಷತ್ತಿನ ಮಟ್ಟಿಗೆ ನಾವು ಅಮೇರಿಕಾದಲ್ಲಿದ್ದಂತೆ ಅಧ್ಯಕ್ಷೀಯ ಪದ್ಧತಿ ಇರಬೇಕೆಂದರೆ You can't fit into the whole system of Parliamentary

system. ಆದ್ದರಿಂದ ಈ ಸಮಸ್ಯೆ ಬರುತ್ತದೆ. ಹಿಂದಿನ ತಾಲ್ಲೂಕು ಬೋರ್ಡ್ ತೆಗೆದುಕೊಳ್ಳಿ. President was not the executive head. ಹಿಂದಿನ ಡಿಸ್ಟ್ರಿಕ್ಟ್ ಬೋರ್ಡ್ ತೆಗೆದುಕೊಳ್ಳಿ. ಮೈಸೂರು ರಾಜ್ಯದ್ದಿರಬಹುದು, ಹಳೇ ಮೈಸೂರು ರಾಜ್ಯ ಇರಬಹುದು, ದಕ್ಷಿಣ ಕನ್ನಡ ಜಿಲ್ಲೆಯದು ಇರಬಹುದು. ಇದರಿಂದ ಪರಿಣಾಮ ಏನಾಗುತ್ತದೆಂದರೆ there was a divided heirarchy at the district level. As a result of it you know ಬಹಳ ಜಿಲ್ಲೆಗಳಲ್ಲಿ ಈ ಸಮಸ್ಯೆ ಬಂದಿದೆ. ಆದ್ದರಿಂದ he will be more autocratic. You are creating grades of autocrats in a district. and grades of Pradhans in a Mandal. This was the purpose of your Act. ಅಧಿಕಾರ ಕೊಡಬೇಕು. ಯಾರಿಗೆ ? ಇನ್‌ಸ್ಟಿಟ್ಯೂಷನ್‌ಗೆ ಕೊಡಬೇಕು. In the institution, never he is derived from the spirit of an institution. He is somebody else. As a result of it he becomes more autocratin. ಇದೇನಾಗಿದೆ, ಇದನ್ನು ಬಹುಶಃ ಸೈದ್ಧಾಂತಿಕ ನೆಲೆಯಲ್ಲಿ ಯೋಚನೆ ಮಾಡಬೇಕು. ನಾವು ಏನೋ ಮಾಡಿದ್ದೇವೆ ಅಥವಾ ನಾವೇನೋ ತಿದ್ದುಪಡಿ ಮಾಡುತ್ತೇವೆ ಎಂದು ಈ ನೆಲೆಯಲ್ಲಿ ಚಿಂತನೆ ಮಾಡುವುದಲ್ಲ. ಆದ್ದರಿಂದ ದಯಮಾಡಿ ಸ್ವಲ್ಪ ಗಂಭೀರವಾಗಿ, ನಮ್ಮ ರಾಷ್ಟ್ರದಲ್ಲಿ ನಾವು ಅನುಷ್ಠಾನ ಮಾಡಿಕೊಂಡಂಥ ಪ್ರಜಾಪ್ರಭುತ್ವದ ಒಂದು ಸಂಪೂರ್ಣ ಹಿನ್ನೆಲೆಯಲ್ಲಿ ಇದನ್ನು ಆಲೋಚನೆ ಮಾಡಬೇಕೇ ಹೊರತು Whatever the rights, whatever the system we build up, it should be very much in consonance with the total system that is accepted and adopted and it should be very strong in the parliamentary system.

ಶ್ರೀ ವಾಟಾಳ್ ನಾಗರಾಜ್ :– ಹೊಸ ಸಿದ್ಧಾಂತವನ್ನೇ ತಾವು ಮಂಡಿಸುತ್ತಿದ್ದೀರಿ.

ಶ್ರೀ ಹೆಚ್. ಏಕಾಂತಯ್ಯ :– ತಾವು ಏನು ಸಲಹೆ ಮಾಡಿದ್ದೀರಿ ? ವೈಬೇರಿಯನ್ ಸಿಸ್ಟಮ್ ಬಗ್ಗೆ ತಾವು ಹೇಳಿದಿರಾ ? ಮಾನ್ಯ ವೈಬೇರಿಯನ್ ಅವರು ಜರ್ಮನಿಯಲ್ಲಿ ಏನು ಹೇಳಿದರು, ಆ ಸಿಸ್ಟಂ ಅನ್ನು ನಾವು ಅಡಾಪ್ಟ್ ಮಾಡಿಕೊಂಡಿದ್ದೇವಾ ?

SHRI J. C. MADHUSWAMY :– In whose name the orders are issued in India !

ಶ್ರೀ ಬಿ. ಹೆಚ್. ಬನ್ನಿಕೋಡ್ :– ಸಂವಿಧಾನದ ಮಾತನ್ನು, ಎಗ್ಸಿಕ್ಯುಟೀವ್ ಮಾತನ್ನು ಮಾನ್ಯ ಸಚಿವರಾದ ವೀರಪ್ಪ ಮೊಯಿಲಿಯವರು ಹೇಳಿದರು. ಇವತ್ತು ಜಿಲ್ಲಾ ಪರಿಷತ್ತಿಗೆ ಜನರಲ್ ಬಾಡಿಗೆ ನಾವು ಅಧಿಕಾರ ಕೊಟ್ಟಿದ್ದೇವೆ, ಆದರೆ ಅಧ್ಯಕ್ಷರಿಗೆ ಅಧಿಕಾರ ಕೊಡುವುದಕ್ಕಾಗುವುದಿಲ್ಲ. ಎಂದು ಹೇಳಿದರು. ಇವೊತ್ತು ಈ ಶಾಸನಸಭೆಗೆ ರಾಜ್ಯಾಂಗದ ಅಡಿಯಲ್ಲಿ ಎಗ್ಸಿಕ್ಯುಟೀವ್ ಅಧಿಕಾರ ಇದೆಯೋ ಅಥವಾ ಶಾಸನಸಭೆಯಿಂದ ನೇಮಿಸಲ್ಪಟ್ಟ ಸರ್ಕಾರಕ್ಕೆ ಮಂತ್ರಿಮಂಡಲಕ್ಕೆ ಎಕ್ಸಿಕ್ಯುಟೀವ್ ಅಧಿಕಾರ ಇದೆಯೋ ? It is only a Legislature. Cabinet is the Executive Head of the State, it is not the officials. Under the Constitution, Executive is the outcome of the Legislature. ಅಸೆಂಬ್ಲಿಯಿಂದ ಮಂತ್ರಿಮಂಡಲ ಮಾಡುತ್ತಿದ್ದೇವೆ, ಮಂತ್ರಿಮಂಡಲ ರಾಜ್ಯದ ಕಾರ್ಯ ನಿರ್ವಹಣೆ ಮಾಡುತ್ತಿದೆ. ಆದರೆ ಅಧಿಕಾರಿಗಳು ಇರತಕ್ಕದ್ದು, they are not the executive head. ಅದೇರೀತಿ ಜಿಲ್ಲಾ ಪರಿಷತ್ತಿನಲ್ಲಿ ಕೂಡ ಅಧ್ಯಕ್ಷರು ಎಗ್ಸಿಕ್ಯುಟೀವ್ ಹೆಡ್. ಅಲ್ಲಿರತಕ್ಕ ಕಾರ್ಯದರ್ಶಿಗಳು ಅಡ್ಮಿನಿಸ್ಟ್ರೇಟೀವ್ ಹೆಡ್ ಆಗಿರಬೇಕೇ ವಿನಃ ಎಗ್ಸಿಕ್ಯುಟೀವ್ ಹೆಡ್ ಅಲ್ಲ. ಅದೇ ನಮ್ಮ ನಾಯಕರು ಇವತ್ತು ಹೇಳುತ್ತಾ ಇರುವುದು.

ಶ್ರೀ ಕೆ. ಹೆಚ್. ರಂಗನಾಥ್ :– ಮಾನ್ಯ ವಿರೋಧ ಪಕ್ಷದ ನಾಯಕರು ನಿಯಮ 168ರಲ್ಲಿ ಅಧ್ಯಕ್ಷರಿಗೆ ಇದ್ದ ಅಧಿಕಾರ ತೆಗೆದುಕೊಂಡುಬಿಟ್ಟಿದ್ದಾರೆ ಎಂದು ವ್ಯಾಖ್ಯಾನ ಮಾಡುತ್ತಿದ್ದಾರೆ. ಸೆಕ್ಷನ್ 'ಸಿ'ಯನ್ನು ನಿಧಾನವಾಗಿ ಓದಿದರೆ ಅದರಲ್ಲಿ ಹೇಗೆ ಅಧಿಕಾರ ವಾಪಸ್ ತೆಗೆದುಕೊಂಡಿದ್ದಾರೋ ನನಗಂತೂ ಅರ್ಥವಾಗುವುದಿಲ್ಲ.

He discharges all duties imposed under the Act and exercises all the powers conferred on him by or under the Act.

ಅಲ್ಲಿ ಒಂದು ಕಾಮ ಬೇಕು; ಸ್ವಲ್ಪ ತಪ್ಪಾಗಿ ಪ್ರಿಂಟ್ ಆದಹಾಗೆ ಕಾಣುತ್ತದೆ. ಅದು ಹಾಕಿದರೆ

......"In addition to that and perform such functions entrusted to him by the government from time to time......"

ಇಲ್ಲಿ ಇರುವುದನ್ನು ಇದ್ದ ಹಾಗೆ ನಾನು ಓದುತ್ತಿದ್ದೇನೆ.

ಶ್ರೀ ಹೆಚ್. ಏಕಾಂತಯ್ಯ :– ನಾನು ಅದನ್ನು ಪ್ರಸ್ತಾಪ ಮಾಡುತ್ತಿಲ್ಲ. ಹಾಗಿದ್ದರೆ ತಾವು ಹೇಳುವುದು ಸರಿ ಇದ್ದಿದ್ದರೆ, ಈಗಿರುವಂತಹ ಕಾನೂನನ್ನು ತಿದ್ದುಪಡಿ ಮಾಡುವ ಅಗತ್ಯವೇ ಇಲ್ಲ.

ಶ್ರೀ ಕೆ. ಹೆಚ್. ರಂಗನಾಥ್ :– ಅದಕ್ಕೇ ನಾನು ಹೇಳಿದ್ದು. ತಾವು ಅಧಿಕಾರದ ಬಗ್ಗೆ ರೂಲ್ 168ರಲ್ಲಿ ಏನು ಚೀಫ್ ಎಕ್ಸಿಕ್ಯುಟೀವ್ ಆಫೀಸರ್ ಎಂದು ಹೇಳಿಬಿಟ್ಟಿರಿ. ಬೇರೇನನ್ನೂ ಹೇಳಲಿಲ್ಲ.

This amended clause gives him more power. If the Hon. Leader of Opposition were to read sub-clause (C), it is given in the statute itself, not under the rules, he will be able to understand the position.

ನಾವು ಈಗ ಆಕ್ಟ್‌ನಲ್ಲಿ ಕೊಡುತ್ತಿದ್ದೇವೆ. ಏನು ಪವರ್ ಕೊಡುತ್ತಿದ್ದೇವೆಂದರೆ,

rulemaking power. If you want to change, you have to come before the House It is a better improvement. ...'discharge all duties imposed and exercised by the powers. conferred on him by or under this Act......'

ಇಲ್ಲಿ ಕಾಮ ಬಿಟ್ಟು ಹೋಗಿದೆ ಅದನ್ನು ಸೇರಿಸಿದರೆ ಸರಿ ಹೋಗುತ್ತದೆ.

"...... and perform such functions entrusted to him by the government from time to time...... "

In addition to these things, he should also discharge some of the functions entrusted to him by the government. I cannot understand how the powers of the Presidents or the Adhyakshyas are taken away . It is an improvement.

SRI D. B. CHANDREGOWDA :- We are trying to understand each other.

ಶ್ರೀ ಕೆ. ಹೆಚ್. ರಂಗನಾಥ್ :– ಆತನಿಗೆ ಎಷ್ಟು ಗೌರವ ಬೇಕು ಅಷ್ಟನ್ನು ಕೊಡಬೇಕು. ಡೆವಲೂಪನ್ ಆಫ್ ದಿ ಪವರ್ಸ್ ಅವರಿಗೆ ಕೊಟ್ಟಮೇಲೆ ಯಾವುದೇ ಅಡ್ಡಿ ಅಡಚಣೆಗಳು ಇಲ್ಲದೆ ಎಕ್ಸರ್‌ಸೈಸ್ ಮಾಡ-ಬೇಕೆಂಬ ಬಗ್ಗೆ ಅಲ್ಲೂ ಭಿನ್ನಾಭಿಪ್ರಾಯವಿಲ್ಲ ಇಲ್ಲೂ ಭಿನ್ನಾಭಿಪ್ರಾಯವಿಲ್ಲ. ಆದರೆ ಇವತ್ತು ಈ ಕಾನೂನಿನಲ್ಲಿ ಚೀಫ್ ಎಕ್ಸಿಕ್ಯುಟೀವ್ ಆಫೀಸರ್ ಅಂತ ಅಲ್ಲವೆಂದು ಇದೆ ಎಂದು ಹೇಳಿ ವ್ಯಾಖ್ಯಾನ ಮಾಡುವುದಕ್ಕೆ ಹೊರಟ ಹಾಗೆ ಕಾಣುತ್ತದೆ.

May be, I may be wrong in drawing an inference. That is a different matter.

ರೂಲ್ಸ್‌ನಲ್ಲಿ ಹೀಗೆ ಮಾಡಿದ್ದಾರೆ. ಅದರ ಬದಲು ಅಧಿಕಾರವನ್ನು ನಾವು ಆ್ಯಕ್ಟ್‌ನಲ್ಲಿ ಕೊಡಲುತ್ತಿದ್ದೇವೆ. ಸಬ್‌ಕ್ಲಾಸ್ (ಸಿ) ಯನ್ನು ಓದಿದರೆ ಗೊತ್ತಾಗುತ್ತದೆ. ಸರಕಾರ ಅಧ್ಯಕ್ಷರ ಅಧಿಕಾರವನ್ನು ತೆಗೆದುಕೊಂಡಿದೆ ಅವರಿಗೇನೂ ಅಧಿಕಾರವಿಲ್ಲವೆಂದು ಹೇಳತಕ್ಕಂಥಾದ್ದು ಅಷ್ಟು ಸಮಂಜಸವಾದ ವಾಗುವುದಿಲ್ಲ.

ಶ್ರೀ ಡಿ. ಬಿ. ಚಂದ್ರೇಗೌಡ :– ತಾವು ತಪ್ಪಾಗಿ ಹೇಳಲಿಲ್ಲ: ಸರಿಯಾಗಿ ಹೇಳಿದಿರಿ

My understanding of section 168 is that the general control over the executive given under section 168 has been taken away or subjected to so many conditions.

SRI K. H. RANGANATH :- It is all under the powers exercisable or conferred under the Act.

ಶ್ರೀ ಡಿ. ಬಿ. ಚಂದ್ರೇಗೌಡ :– ಜನರಲ್ ಕಂಟ್ರೋಲ್ ಓವರ್ ದಿ ಆಫೀಸರ್ಸ್ ಎಂದು ಇಲ್ಲಿ ಇಲ್ಲ. ಏತಕ್ಕೆ ಇಲ್ಲ ?

Please read Sec. 174. What is the control over the Officers ?

SRI K. H. RANGANATH :- On behalf of the ZP, Adhyakshya exercises this power under Sec. 168 (c).

SRI D. B. CHANDRE GOWDA :- Let me complete. In Section 174, for sub-sections (i) and (ii) the following sub-sections shall be substituted : " (i) save or otherwise expressly provided by or under this Act. the executive power for the purpose of carrying out the provisions of this Act shall vest with the Chief Secretary... "Executive power and administrative authority are two things. Executive power is the controlling power The whole institution is controlled by an executive authority. If you take away the executive authority and pass it on the officer concerned, then he becomes the presiding deity. That is my understanding of Sec. 168.

ಶ್ರೀ ಕೆ. ಹೆಚ್. ರಂಗನಾಥ್ :- ಈ ಕಾನೂನಿನಲ್ಲಿ ಸುಪ್ರೀಂ ಪವರ್ ಜಿಲ್ಲಾ ಪರಿಷತ್ತಿನದ್ದು.

As, the head of the Zilla Parishad, he exercises all powers under the Act. ಅದನ್ನು ಬಿಡಿಸಿ; ಸುಮ್ಮನೆ ನಾವು ಅವರಿಗೆ ಬೇರೆ ಅಧಿಕಾರ; ಇವರಿಗೆ ಬೇರೆ ಅಧಿಕಾರವೆಂದು ಮಾಡಿದರೆ ಅದು ಸರಿಯಾಗುವುದಿಲ್ಲ.

I think proper interpretation is not given.

5-50 ಪಿ. ಎಂ.

ಶ್ರೀ ಶಿವಾನಂದ ಹೆಚ್. ಕೌಜಲಗಿ :- ಅದಕ್ಕೆ ಒಂದು ಅಮೆಂಡ್‌ಮೆಂಟ್ ಕೊಟ್ಟರೆ ನಡೆಯುತ್ತದೆ.

SRI K. C. MODGEKAR :- Just now hon. Member K. H. Ranganath has said about the powers of Adyakashas but he has not mentioned about Section 174. It deals with the functions of the Secretary.

SRI K. H. RANGANATH :- They are independent Sections...

SRI K. C. MODGEKAR :- Here it is subject to general supervision and in accordance with the rules made not by Zilla Parishad but by the State Government. Again he is empowered to supervise and control, all the activities of the Zilla Parishad and he alone can take necessary measures for the speedy execution of works and developmental schemes. Activities and all works is, however, not clear but the purpose may be to enlarge the scope of his authority.

ಶ್ರೀ ಕೆ. ಹೆಚ್. ರಂಗನಾಥ್ :- ಎಕ್ಸಿಕ್ಯುಟಿವ್ ಹೆಡ್ ಅಂದರೆ ಸಾರು ಬೆಂದಿದೆಯೇ ಅಥವಾ ಇಲ್ಲವೇ ಎಂದು ಯಾರೂ ಕೈಬಿಟ್ಟು ನೋಡುವುದಿಲ್ಲ. ಅದಕ್ಕೊಂದು ಸೌಟು ಇಟ್ಟುಕೊಂಡಿರುತ್ತಾನೆ. ಅದರ ಮೂಲಕ ನೋಡುತ್ತಾನೆ. ಹಾಗೆ ಇಲ್ಲಿ ಅವನು ಸೌಟು. ಎಲ್ಲವನ್ನೂ ಅಧ್ಯಕ್ಷರೇ ಮಾಡುತ್ತಾರೆಯೇ ಎಲ್ಲ ಅಧಿಕಾರಿಗಳನ್ನು ಕರೆದು, ಅಧ್ಯಕ್ಷರು ನೀನು ಅಲ್ಲಿಗೆ ಹೋಗು ನೀನು ಇಲ್ಲಿಗೆ ಹೋಗು ಎಂದು ಹೇಳುವುದಕ್ಕಾಗುತ್ತದೆಯೇ ?

ಶ್ರೀ ಬಿ. ಹೆಚ್. ಬನ್ನಿಕೋಡ್ :- ಮಾನ್ಯ ಹಿರಿಯ ಸದಸ್ಯರಾದ ರಂಗನಾಥ್‌ರವರು ಸಾರು ಬೆಂದಿದೆಯೇ ಎಂದು ಯಾರು ಕೈಹಾಕಿ ನೋಡುವುದಿಲ್ಲ; ಅದಕ್ಕೆ ಸೌಟು ಇಟ್ಟುಕೊಂಡಿರುತ್ತಾರೆಂಬು ಹೇಳಿದರು. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಯಾರು ಚುನಾಯಿತ ಪ್ರತಿನಿಧಿಗಳಾಗಿ ಆಯ್ಕೆಯಾಗಿರುತ್ತಾರೆ. ಅವರಲ್ಲಿ ಯಾರಿಗೆ ಬಹುಮತವಿರುತ್ತದೆ ಅವರು ಸರ್ಕಾರ ನಡೆಸುತ್ತಾರೆ ಅವರು ಮಂತ್ರಿಮಂಡಲ ರಚನೆ ಮಾಡುತ್ತಾರೆ. ರಾಜ್ಯದಲ್ಲಿ ಮಂತ್ರಿಮಂಡಲ ಎಕ್ಸಿಕ್ಯುಟೀವ್ ಹೆಡ್. ಕೇಂದ್ರದಲ್ಲಿ ಕೇಂದ್ರ ಮಂತ್ರಿಮಂಡಲ ಎಕ್ಸಿಕ್ಯುಟೀವ್ ಹೆಡ್.

Officers are administrative Head and they cannot be Executive Head. Officers are not responsible to this House. They are not expected to answer to the House or to the public. They carry out the decisions of the Cabinet ie., Executive only.

ಶ್ರೀ ಕೆ. ಹೆಚ್. ರಂಗನಾಥ್ :- ಅದನ್ನೆ ಬರೆದಿದ್ದಾರೆ.

ಶ್ರೀ ಬಿ. ಹೆಚ್. ಬನ್ನಿಕೋಡ್ :- ಮಾನ್ಯ ಅಧ್ಯಕ್ಷರೇ. ಚೀಫ್ ಸೆಕ್ರೆಟರಿಯವರಿಗೆ ಎಕ್ಸಿಕ್ಯುಟಿವ್ ಹೆಡ್ ಎಂದು ಹೇಳಿದ್ದಾರೆ. ಚೀಫ್ ಸೆಕ್ರೆಟರಿಯವರನ್ನು ಅಡ್ಮಿನಿಸ್ಟ್ರೇಟಿವ್ ಹೆಡ್ ಎಂದು ಹೇಳಬೇಕಾಗಿತ್ತು. ಅವರಿಗೆ ಎಕ್ಸಿಕ್ಯುಟಿವ್ ಹೆಡ್ ಎಂದು ಹೇಳುತ್ತಾರೆ. ಇವತ್ತು ಜಿಲ್ಲಾ ಪರಿಷತ್ತಿನ ಅಧ್ಯಕ್ಷರಿಗೆ ಅಡ್ಮಿನಿಸ್ಟ್ರೇಟಿವ್ ಸೂಪರ್‌ವಿಷನ್ ಎಂದು ಹೇಳಿ ಅವರಿಗೆ ಅಧಿಕಾರವನ್ನು ಕೊಟ್ಟಿದ್ದೀರಿ. ಅಧ್ಯಕ್ಷರಿಗೆ ಕೊಡಬೇಕಾದ ಅಧಿಕಾರ ವನ್ನು ಅಧಿಕಾರಿಗಳಿಗೆ ಕೊಟ್ಟಿದ್ದೀರಿ. ಅಧಿಕಾರಿಗಳಿಗೆ ಕೊಡಬೇಕಾದ ಅಧಿಕಾರವನ್ನು ಅಧ್ಯಕ್ಷರಿಗೆ ಕೊಟ್ಟಿದ್ದೀರಿ. ಜನರ ಪ್ರತಿನಿಧಿಗಳಿಗೆ ಅದರಲ್ಲೂ ಅಧ್ಯಕ್ಷರಿಗೆ ಇಲ್ಲಿ ಏನೂ ಅಧಿಕಾರ ಕೊಟ್ಟಿಲ್ಲ. ಸೆಕ್ರೆಟರಿಯವರಿಗೆ ಜಿಲ್ಲಾ ಪರಿಷತ್‌ನಲ್ಲಿ ಜವಾಬ್ದಾರಿ ಇರತಕ್ಕ ಕೆಲಸವನ್ನು ಕೊಟ್ಟಿದ್ದಾರೆ. ಇದು ಪ್ರಜಾಪ್ರಭುತ್ವಕ್ಕೆ ವಿರೋಧವಾದುದು. ಡೆಲಿಗೇಷನ್ ಆಫ್ ಪವರ್ಸ್‌ಗೆ ವಿರೋಧವಾದುದು. ಪ್ರಜಾಪ್ರಭುತ್ವ ವ್ಯವಸ್ಥೆಗೆ ಕೊಡಲಿ ಪೆಟ್ಟು ಕೊಡತಕ್ಕ ಕೆಲಸ ಈ ಕಾನೂನಿನಲ್ಲಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ದಯವಿಟ್ಟು ಇದರ ಬಗ್ಗೆ ವಿವರಣೆ ಕೊಡಿ.

ಶ್ರೀ ಕಾಗೋಡು ತಿಮ್ಮಪ್ಪ :- ಮಾನ್ಯ ಸದಸ್ಯರು ರಾಜ್ಯಾಂಗವನ್ನು ಓದಿದರೆ ಗೊತ್ತಾಗುತ್ತದೆ. ಸಂವಿಧಾನದ ಆರ್ಟಿಕಲ್ 53ರ ಪ್ರಕಾರ

The executive power of the Union shall be vested in the President and shall be exercised by him either directly or through officers subordinate to him in accordance with this Constitution.Then, Article 154 of the Constitution. It says;

(1) The Executive power of the State shall be vested in the Governor and shall be exercised by him either directly or through Officers subordinate to him in accordance with this Constitution.

So, executive power of the State shall vest with the Governor.
ಆದ್ದರಿಂದ ತಾವೇನು ಹೇಳುತ್ತಿದ್ದೀರಿ......

(ಗೊಂದಲ)

SRI B. H. BANNIKOD :- It is the Cabinet which is the Executive Head. Governor is only a symbolic......

SRI KAGODU THIMMAPPA :- Even the Prime Minister or the Chief Minister are not Executive Head. It is only the Governor and the President.

SRI J. C. MADHUSWAMY :- That is what I am also telling. ನಾನು ಇದೇ ಪ್ರಶ್ನೆಯನ್ನು ಕೇಳಿದ್ದೆ. ಡೈರೆಕ್ಟ್ ಆಗಿ ಎಲೆಕ್ಟ್ ಆಗಿಲ್ಲದವರು ಈ ದೇಶದಲ್ಲಿ ಎಕ್ಸಿಕ್ಯೂಟಿವ್ ಹೆಡ್ ಏಕೆ ಆಗಿದ್ದಾರೆ ಅಂತ. ರಾಷ್ಟ್ರಪತಿ ಎಕ್ಸಿಕ್ಯೂಟಿವ್ ಹೆಡ್ ಆಗುವುದಾದರೆ ಜಿಲ್ಲಾ ಪರಿಷತ್ ಅಧ್ಯಕ್ಷ ಇನ್‌ಡೈರೆಕ್ಟ್ ಆಗಿ ಎಲೆಕ್ಷನ್‌ನಲ್ಲಿ ಆರಿಸಿ ಬರುತ್ತಾನೆ. ಅವನೇಕೆ ಎಕ್ಸಿಕ್ಯೂಟಿವ್ ಹೆಡ್ ಆಗಬಾರದು ?

ಶ್ರೀ ಕಾಗೋಡು ತಿಮ್ಮಪ್ಪ :- ಎಕ್ಸಿಕ್ಯೂಟಿವ್ ಹೆಡ್ ಎಂದು ಕರೆದ ಮಾತ್ರಕ್ಕೆ ಅವನಿಗೆ ಎಲ್ಲ ಅಧಿ-ಕಾರವೂ ಬರುವುದಿಲ್ಲ. ಅದಕ್ಕೋಸ್ಕರ ಒಂದು ರೂಲ್ಸ್ ಮಾಡಿ ಕೆಲವು ಪವರ್ಸ್‌ನ್ನು ಮಾಡಿದ್ದರು.

ಶ್ರೀ ಜೆ. ಸಿ. ಮಧುಸ್ವಾಮಿ :- ನಮಗೆ ಬೇಕಾದದ್ದು ಏನು ? ಅವನಿಗೆ ಇರುವ ಕಂಟ್ರೋಲ್‌ನ್ನು ನೀವು ಕಿತ್ತು ಇಲ್ಲಿ ಅಮೆಂಡಮೆಂಟ್‌ನಲ್ಲಿ ಕ್ಲೀಯರ್ ಆಗಿ ಹೇಳಿದ್ದೀರಿ. ಅದೇ ಕಂಟ್ರೋಲ್‌ನ್ನು ಚೀಫ್ ಸೆಕ್ರೆಟರಿವರೆಗೆ ಎಂಡಾರ್ಸ್ ಮಾಡಿದ್ದೀರಿ.

(ಗೊಂದಲ)

SRI KAGODU THIMMAPPA :- Chief Executive Officer is the Head of the Institution.

(ಗೊಂದಲ)

ಡಾ. ಜೀವರಾಜ ಆಳ್ವ :- ಶ್ರೀ ಕಾಗೋಡು ತಿಮ್ಮಪ್ಪನವರ ಸಂವಿಧಾನದ ಬಗ್ಗೆ ವ್ಯಾಖ್ಯಾನ ಕೇಳಿದ ಮೇಲೆ ಅದಕ್ಕೆ ಉತ್ತರವಾಗಿ ಒಂದು ಮಾತನ್ನು ಹೇಳುವುದಕ್ಕೆ ಇಚ್ಛಿಪಡುತ್ತೇನೆ. ಸಂವಿಧಾನದ ಸೃಷ್ಟಿಕರ್ತರು ಭಾರತದ ಜನತೆ. ಇವತ್ತು ಜಿಲ್ಲಾ ಪರಿಷತ್ತು ಬಗ್ಗೆ ಕೂಡ ಒಂದು ಮಸೂದೆಯನ್ನು ತರುವುದಕ್ಕೆ ಅಧಿಕಾರ ವಿಕೇಂದ್ರೀಕರಣದ ಕರ್ತೃಗಳಾಗಿ ನಾವು ಇಲ್ಲಿ ಕುಳಿತಿದ್ದೇವೆ. ನಾವು ಇಲ್ಲಿ ಸಾಮಾನ್ಯ ಜನತೆಯ ಪ್ರತಿನಿಧಿಗಳಾಗಿ

ಇಲ್ಲಿ ಕುಳಿತಿದ್ದೇವೋ ಅಥವಾ ಈ ಸಂವಿಧಾನದ ವ್ಯಾಖ್ಯಾನ ಮಾಡುವುದಕ್ಕೆ ಕುಳಿತಿದ್ದೇವೋ ? ಇವತ್ತು ಜನರಿಗೆ ಅಧಿಕಾರ ಕೊಡಬೇಕು ಎಂಬ ಮನಸ್ಸು ತಮಗೆ ಇದ್ದಿದ್ದರೆ ಈ ವ್ಯಾಖ್ಯಾನಗಳನ್ನು ಬಿಟ್ಟು ಬಿಡಿ: ಅವರು ನಮ್ಮವರು, ಜನತಾ ಪ್ರತಿನಿಧಿಗಳಿಗೆ ಅಧಿಕಾರ ಕೊಡಬೇಕು. ಅದಕ್ಕೆ ಅಡ್ಮಿನಿಸ್ಟ್ರೇಟಿವ್ ಹೆಡ್ ವ್ಯಾಖ್ಯಾನಗಳು, ಬ್ರಿಟಿಶ್ ಸಿಸ್ಟಮ್ ಇದು ಅಲ್ಲ. ನಮಗೆ ಮುಖ್ಯವಾಗಿ ಪ್ರಾಮಾಣಿಕತೆ ಇದ್ದಿದ್ದರೆ they belong to political fraternity. ನಿಮಗೆ ಮನಸ್ಸು ಇದ್ದರೆ You may define Executive Powers. ಅದನ್ನು ಮರೆತು ಕೊಡಿರಿ. ಶ್ರೀ ಮೊಯಿಲಿಯವರು ಹೇಳಿದಾಗ, ನನಗೆ ಇವರೇನು ಒಬ್ಬ ರಾಜಕಾರಣಿಯಾಗಿ ಮಾತ-ನಾಡುತ್ತಿದ್ದಾರೋ ಅಥವಾ ಜನತೆಯ ಪ್ರತಿನಿಧಿಯಾಗಿ ಮಾತನಾಡುತ್ತಿದ್ದಾರೋ ಎಂದು ಸಂಶಯ ಬಂತು. ಈ ಬಗ್ಗೆ ನನ್ನ ಪ್ರಾಮಾಣಿಕ ಅನಿಸಿಕೆ ಇಷ್ಟೆ- ಪ್ರಜಾಪ್ರತಿನಿಧಿಗಳಿಗೆ ಎಷ್ಟು ಶಕ್ತಿ ಕೊಡಬೇಕೋ, ಅಂತಹ ಉದಾತ್ತ ಶಕ್ತಿಯನ್ನು ಕೊಡಬೇಕೇ ಹೊರತು; ಶ್ರೀ ಕಾಗೋಡು ತಿಮ್ಮಪ್ಪನವರು ಹೇಳಿದಂತೆ ಸಂವಿಧಾನ ಮುಖ್ಯವಲ್ಲ. ಅದನ್ನು ಬೇಕಾದರೆ ಬದಲಾವಣೆ ಮಾಡಬಹುದು. ಸಂವಿಧಾನಕ್ಕೆ 34 ಬಾರಿ ಅಮೆಂಡಮೆಂಟ್‌ಗಳನ್ನು ತಂದಿದ್ದೀರಿ ಈಗಲೂ ಮಾಡಿ. ನಾನು ಒಂದೇ ಕೇಳುವುದು, ಏನೆಂದರೆ ಇಲ್ಲಿ ಎಲ್ಲಾ ಪಕ್ಷಗಳ ಪ್ರತಿನಿಧಿಗಳು ಇದ್ದೇವೆ. ತಮಗೆ ಗೊತ್ತಿದೆ, ಮಂತ್ರಿಯಾಗಿ ಎಷ್ಟು ಅಧಿಕಾರವನ್ನು ತಾವು ಚಲಾಯಿಸುತ್ತೀರಿ ಎಂಬ ತಮ್ಮ ಅಧಿಕಾರ ಚಲಾವಣೆಯ ಹಿಂದೆ ಅಧಿಕಾರಿಗಳು ಎಷ್ಟು ಅಧಿಕಾರ ಚಲಾವಣೆ ಮಾಡುತ್ತಾರೆ ಎಂದು ತಮ್ಮ ತಮ್ಮ ಮನಸ್ಸು ನೋಡಿದರೆ ತಮಗೇ ಗೊತ್ತಾಗುತ್ತದೆ. ಆದ್ದರಿಂದ ಅವರಿಗೆ ಅಧಿಕಾರ ಕೊಡಿ; ಶಕ್ತಿ ಕೊಡಿ.

ಶ್ರೀ ಕೆ. ಹೆಚ್. ರಂಗನಾಥ್ :– 168ರ ಸಬ್‌ಕ್ಲಾಸ್ 'ಸಿ' ಏನಿದೆ, ಅದರಲ್ಲಿ ಯಾವ ಶಬ್ದ ಅಧ್ಯಕ್ಷನ ಅಧಿಕಾರವನ್ನು ವಾಪಸ್ಸು ತೆಗೆದುಕೊಂಡಿದೆ ?

Let me read that Section. It reads thus.

"(d) Discharge all duties imposed and exercise all the powers conferred on him by or under this Act and perform such functions entrusted to him by the Government from time to time."

ಇದರಲ್ಲಿ ಯಾವ ಶಬ್ದ ಅವರ ಅಧಿಕಾರವನ್ನು ವಾಪಸ್ಸು ತೆಗೆದುಕೊಂಡಿದೆ ?

If you could convince me, I am happy. The Section is quite simple. Particular powers which is exercisable under the Act can be exercised by him.

ಇದರಲ್ಲಿ ಯಾವ ಅಧಿಕಾರ ತೆಗೆದುಕೊಂಡಿದೆ, ಯಾವ ಅಧಿಕಾರ ಹೇಗಿದೆ ?

I cannot understand. I don't know what way the President's powers is taken away If you were to convince me which Section takes away the powers of the President I am prepared to accept The amendment clearly says Section 168 (c) "Discharge all duties imposed and exercise all the powers conferred on him or under this Act......"

ನಮ್ಮ ಬುದ್ಧಿವಂತಿಕೆ ಪ್ರಕಾರ ವ್ಯಾಖ್ಯಾನ ಮಾಡಿ, ಹೊರಗಡೆ ಇರತಕ್ಕ ಜನಗಳನ್ನು ಮೋಸ ಮಾಡತಕ್ಕಂಥ ಪ್ರಶ್ನೆ ಇಲ್ಲಿ ಇಲ್ಲ. ಇದನ್ನು ಪಾಸ್ ಮಾಡಿದ ಮೇಲೆ, rules and relevant notifications will be issued.

ಶ್ರೀ ಡಿ. ಬಿ. ಚಂದ್ರೇಗೌಡ :– ಅಧಿಕಾರ ಕಿತ್ತುಕೊಂಡಿಲ್ಲವೆಂದು ತಾವು ಹೇಳಿದ್ದೀರಿ, ಹಾಗಾದರೆ, ಸೆಕ್ಷನ್ 174 ಏನು ಹೇಳುತ್ತದೆ ?

SRI K. H. RANGANATH:– These two Sections, are independent Sections. Section 164 deals with President of the Zilla Parishad and Section 174 deals with Executive Officer. They are independent. One related to other. Why do you want to mix up ? I would, with all humality, request the Leader of the Opposition to convince the House as to which of the Sections that would take away all the powers of the President. If you were to convince me, we would request the Hon'ble Minister to amend it also.

ಚೇರ್ಮನ್ :– ಈ ದಿನದ ಕಲಾಪಗಳು ಇಲ್ಲಿಗೆ ಮುಕ್ತಾಯವಾದವು. ಈ ಸಭೆ ಮತ್ತೆ ನಾಳೆ ಬೆಳಿಗ್ಗೆ 9–30ಕ್ಕೆ ಸೇರುತ್ತದೆ.

(ಸದನವು 6ಘಂಟೆ 3 ನಿಮಿಷಕ್ಕೆ ಮುಕ್ತಾಯವಾಗಿ, ಪುನಃ 21ನೇ ಡಿಸೆಂಬರ್ ಮಾಹೆ 1990ರ ಶುಕ್ರವಾರದಂದು ಬೆಳಿಗ್ಗೆ 9–30 ಘಂಟೆಗೆ ಸೇರಲು ನಿಶ್ಚಯಿಸಿತು.)